
ವಯಸ್ಸು 4 ರಿಂದ 5 ವರ್ಷಗಳು

# ಚಿಲಿಪಿಲಿ Plus

## ಶಿಕ್ಷಕರ ಕೈಪಿಡಿ

**ಪುಸ್ತಕ 9**





- ಸಂವಹನದ ವಿಧಾನಗಳು
- ಸಂಖ್ಯೆಗಳು



ಸಮಗ್ರ ಶಿಕ್ಷಾ ಕರ್ನಾಟಕ

Scanned with CamScanner

# ಪರಿವಿಡಿ


## ವಿಷಯ 9: ಸಂವಹನದ ವಿಧಾನಗಳು

### ಉಪವಿಷಯ 9.1: ಮಾನವರಲ್ಲಿ ಮತ್ತು ಪ್ರಾಣಿಗಳಲ್ಲಿ ಸಂವಹನದ ವಿಧಾನಗಳು

ಸಂಭಾಷಣೆಗಳು . . . . . . 2
ಯೋಜನಾ ಕಾರ್ಯಗಳು . . . . . . 7
ಶಿಶುಗೀತೆಗಳು . . . . . . 8
ಕಥೆ . . . . . . 10
ಸೃಜನಾತ್ಮಕ ಚಟುವಟಿಕೆಗಳು . . . . . . 12
ಒಳಾಂಗಣ ಆಟಗಳು . . . . . . 14
ಹೊರಾಂಗಣ ಆಟಗಳು . . . . . . 15
Total Physical Response . . . . . . 16





### ಉಪವಿಷಯ 9.2: ಸಮೂಹ ಸಂವಹನದ ವಿಧಾನಗಳು

ಸಂಭಾಷಣೆಗಳು . . . . . . 20
ಯೋಜನಾ ಕಾರ್ಯಗಳು . . . . . . 24
ಶಿಶುಗೀತೆಗಳು . . . . . . 26
ಕಥೆ . . . . . . 28
ಸೃಜನಾತ್ಮಕ ಚಟುವಟಿಕೆಗಳು . . . . . . 30
ಒಳಾಂಗಣ ಆಟಗಳು . . . . . . 32
ಹೊರಾಂಗಣ ಆಟಗಳು . . . . . . 33
Total Physical Response . . . . . . 34





### ಉಪವಿಷಯ 9.3: ಸಂವಹನದ ನಿಯಮಗಳು

ಸಂಭಾಷಣೆಗಳು . . . . . . 38
ಯೋಜನಾ ಕಾರ್ಯಗಳು . . . . . . 42
ಶಿಶುಗೀತೆಗಳು . . . . . . 43
ಕಥೆ . . . . . . 45
ಸೃಜನಾತ್ಮಕ ಚಟುವಟಿಕೆಗಳು . . . . . . 47
ಒಳಾಂಗಣ ಆಟಗಳು . . . . . . 49
ಹೊರಾಂಗಣ ಆಟಗಳು . . . . . . 50
Total Physical Response . . . . . . 51





## ಸಂಖ್ಯೆಗಳು

### ಪರಿಕಲ್ಪನೆ ಹಾಗೂ ನಿರ್ವಹಣೆ

ಸಿದ್ಧತಾ ಚಟುವಟಿಕೆಗಳು . . . . . . 56
ಪರಿಶೋಧನಾತ್ಮಕ ಚಟುವಟಿಕೆಗಳು . . . . . . 57
ವಿಸ್ತರಣಾ ಚಟುವಟಿಕೆ . . . . . . 58

### ಭಾಗ 2: ಸಂಖ್ಯೆಗಳು 4 ಮತ್ತು 5

ಸಿದ್ಧತಾ ಚಟುವಟಿಕೆಗಳು . . . . . . 69
ಪರಿಶೋಧನಾತ್ಮಕ ಚಟುವಟಿಕೆಗಳು . . . . . . 70
ವಿಸ್ತರಣಾ ಚಟುವಟಿಕೆ . . . . . . 71


Scanned with CamScanner

ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ


ಸಂಭಾಷಣೆ


ಯೋಜನಾ ಕಾರ್ಯಗಳು


ಶಿಶುಗೀತೆಗಳು


ಕಥೆ


Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ-ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ


ಒಳಾಂಗಣ ಆಟಗಳು


ಹೊರಾಂಗಣ ಆಟಗಳು


ಸೃಜನಾತ್ಮಕ ಚಟುವಟಿಕೆಗಳು

---

## ಇಂದ್ರಿಯ ಗ್ರಹಿಕೆಯ ಬೆಳವಣಿಗೆ


ಸಿದ್ಧತಾ ಚಟುವಟಿಕೆಗಳು


ಪರಿಶೋಧನಾತ್ಮಕ ಚಟುವಟಿಕೆಗಳು


ವಿಸ್ತರಣಾ ಚಟುವಟಿಕೆ


ಅನ್ವಯಿಸುವಿಕೆ

Scanned with CamScanner

# ಕೃತಜ್ಞತೆಗಳು


2019-20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ [illegible] ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ [illegible] ಸಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ಧಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ-ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ-ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ-ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweaver.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.


(ಡಾ. ಎಂ.ಟಿ. ರೇಜು, ಭಾ.ಆ.ಸೇ.)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

Scanned with CamScanner



ಸಂವಹನದ ವಿಧಾನಗಳು

# ಮಾನವರು ಮತ್ತು ಪ್ರಾಣಿಗಳಲ್ಲಿ ಸಂವಹನ ವಿಧಾನಗಳು



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 9.1: ಮಾನವರಲ್ಲಿ ಮತ್ತು ಪ್ರಾಣಿಗಳಲ್ಲಿ ಸಂವಹನದ ವಿಧಾನಗಳು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
|---|---|---|
| 1. ಸಂವಹನ ಮಾಡುವುದರ ಮಹತ್ವ ಮತ್ತು ಅಗತ್ಯವನ್ನು ಅರ್ಥೈಸಿಕೊಳ್ಳುವುದು. | 1. ಕಥೆ, ಕಲೆ, ಸಂಗೀತ, ನಾಟಕ ಮುಂತಾದ ಸಂವಹನದ ವಿವಿಧ ವಿಧಾನಗಳನ್ನು ಹೆಸರಿಸಿ ವಿವರಿಸುವುದು. | 1. ಮೌಖಿಕ ಮತ್ತು ಮೌಖಿಕವಲ್ಲದ (ಹಾವಭಾವ, ಮುಖಭಾವ) ಸಂವಹನದ ಸ್ವರೂಪಗಳು ಇರುತ್ತವೆ ಎಂದು ಅರ್ಥೈಸಿಕೊಳ್ಳುವುದು. |
| 2. ಮಾನವರಲ್ಲಿ ಮತ್ತು ಪ್ರಾಣಿಗಳಲ್ಲಿ ಸಂವಹನ ಮಾಡುವ ವಿಧಾನದಲ್ಲಿ ಇರುವ ವ್ಯತ್ಯಾಸಗಳನ್ನು ವಿವರಿಸುವುದು. | 2. ಶಿಶುಗೀತೆಗಳಲ್ಲಿ, ಸರಳವಾದ ಜಾಹೀರಾತುಗಳಲ್ಲಿ (ಜಿಂಗಲ್‌ಗಳಲ್ಲಿ) ಮತ್ತು ಅವರ ಸುತ್ತಲಿನ ಇತರ ಮುದ್ರಿತ ರೂಪಗಳಲ್ಲಿರುವ ಸಂದೇಶಗಳನ್ನು ಗುರುತಿಸುವುದು. | 2. ಹಿರಿಯರೊಂದಿಗೆ ಮತ್ತು ಸಹಪಾಠಿಗಳೊಂದಿಗೆ ಮಾತನಾಡುವುದರ ನಡುವಿನ ವ್ಯತ್ಯಾಸವನ್ನು ಉದಾಹರಣೆಗಳೊಂದಿಗೆ ವಿವರಿಸುವುದು. |
| 3. ಭಾಷೆಯ ಮಹತ್ವವನ್ನು ಮತ್ತು ಯಾವುದೇ ಸನ್ನಿವೇಶದಲ್ಲಿ ಜನರು ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ ಎನ್ನುವುದನ್ನು ಅರ್ಥೈಸಿಕೊಳ್ಳುವುದು. | 3. ಒಂದು ಸಣ್ಣ ಕಥೆಯನ್ನು ನಾಟಕದ ರೂಪದಲ್ಲಿ ಅಥವಾ ಸೂತ್ರದ ಗೊಂಬೆಯಾಟವಾಗಿ ಪರಿವರ್ತಿಸುವುದು. | 3. ತಮ್ಮ ಭಾಷೆ ಗೊತ್ತಿಲ್ಲದ ಜನರೊಂದಿಗೆ ಸಂವಹನ ಮಾಡುವ ಕೆಲವು ಪ್ರಾಥಮಿಕ ವಿಧಾನಗಳನ್ನು ನಿರೂಪಿಸುವುದು.<br>● ಕೆಲವು ಸಾಮಾನ್ಯ ಹಾವಭಾವಗಳನ್ನು ಬಳಸುವುದು<br>● ಪ್ರಾಣಿಗಳೊಂದಿಗೆ [illegible] ಬಳಸುವುದು. |

ಉಪವಿಷಯ 9.1

# ಮಾನವರಲ್ಲಿ ಮತ್ತು ಪ್ರಾಣಿಗಳಲ್ಲಿ ಸಂವಹನದ ವಿಧಾನಗಳು

## ಕಲಿಕಾ ಉದ್ದೇಶಗಳು

- ಕಥೆ, ಕಲೆ, ಸಂಗೀತ, ನಾಟಕ ಮುಂತಾದ ಸಂವಹನದ ವಿವಿಧ ವಿಧಾನಗಳನ್ನು ಹೆಸರಿಸಿ ವಿವರಿಸುವುದು.
- ಶಿಶುಗೀತೆಗಳಲ್ಲಿ, ಸರಳವಾದ ಜಾಹೀರಾತುಗಳಲ್ಲಿ (ಜಿಂಗಲ್‌ಗಳಲ್ಲಿ) ಮತ್ತು ಅವರ ಸುತ್ತಲಿನ ಇತರ ಮುದ್ರಿತ ರೂಪಗಳಲ್ಲಿರುವ ಸಂದೇಶಗಳನ್ನು ಗುರುತಿಸುವುದು.
- ಒಂದು ಸಣ್ಣ ಕಥೆಯನ್ನು ನಾಟಕದ ರೂಪದಲ್ಲಿ ಅಥವಾ ಸೂತ್ರದ ಗೊಂಬೆಯಾಟವಾಗಿ ಪರಿವರ್ತಿಸುವುದು.



Scanned with CamScanner

ಸಂಭಾಷಣೆ 1

# ಸಂವಹನ ಮಾಡುವುದು ಹೇಗೆ?



## ಕಲಿಕಾ ಫಲಿತಗಳು

- ಕಥೆ, ಕಲೆ, ಸಂಗೀತ ಮತ್ತು ನಾಟಕ ಇತ್ಯಾದಿ ಸಂವಹನದ ವಿವಿಧ ವಿಧಾನಗಳನ್ನು ಹೆಸರಿಸಿ ವಿವರಿಸುವುದು.

## ಶಿಕ್ಷಕರ ಪೂರ್ವಸಿದ್ಧತೆ

ಕಥೆಗಳನ್ನು ಮತ್ತು ಪ್ರತಿಯೊಂದು ಭಾಗವೂ ಏನು ತೋರಿಸುತ್ತದೆ? ಎಂದು ತಿಳಿದುಕೊಳ್ಳುವುದು.

### ಸೂಚನೆಗಳು

## ನಾನು ಹೇಗೆ ಮತ್ತು ಏನನ್ನು ಸಂವಹನ ಮಾಡಬೇಕು?

### ಹಂತ 1

**ನಿಮಗೆ ಶಾಲೆಯಲ್ಲಿ ಬಾಯಾರಿಕೆಯಾದಾಗ ಅಥವಾ ಶೌಚಾಲಯಕ್ಕೆ ಹೋಗಬೇಕು ಎನಿಸಿದರೆ ಯಾರಿಗಾದರೂ ಹೇಗೆ ಹೇಳುತ್ತೀರಿ? ಮಕ್ಕಳಿಂದ ಉತ್ತರ ಪಡೆಯುವುದು.**

ಈ ಕೆಳಗಿನ ಸಂಗತಿಗಳನ್ನು ಹಾವಭಾವದ ಮೂಲಕ ಅಭಿನಯ ಮಾಡಿ ತೋರಿಸಲು ಹೇಳುವುದು. ಏನೂ ಮಾತನಾಡದೆ, "ಹಲ್ಲು ಉಜ್ಜು" ಎನ್ನುವುದನ್ನು ಮಾಡಿ ತೋರಿಸಿ, ಮಕ್ಕಳಿಗೆ ನಿಮ್ಮಂತೆಯೇ ಮಾಡಲು ಹೇಳುವುದು. ನಂತರ ಅವರಿಗೆ ಮೊದಲು, "ಹಲ್ಲು ಉಜ್ಜು" ಎಂದು ಜೋರಾಗಿ ಹೇಳಿ, ನಂತರ ಉಜ್ಜುವುದನ್ನು ಮಾಡಿ ತೋರಿಸಲು ಹೇಳುವುದು. ಅವರು ಈಗ ಎರಡು ಬಗೆಯ ಸಂವಹನದ ವಿಧಾನಗಳನ್ನು ಕಲಿತರೆಂದು ಹೇಳುವುದು. ಒಂದು ಮಾತನಾಡುವುದು ಮತ್ತು ಇನ್ನೊಂದು, ಮಾತನಾಡದೆ ಸಂವಹನ ಮಾಡುವುದು.

- ತಿಂಡಿ ಬೇಕು ಎನಿಸಿದಾಗ ಅದನ್ನು ನೀನು ಹೇಗೆ ಕೇಳುತ್ತೀಯ?
- ನೀನು ಮಾತನಾಡದೆ ಹೇಗೆ ತಿಳಿಸುತ್ತೀಯ?
- ಈಗ ನೀವೊಂದು ಬಾಯಾರಿರುವ ಮಗು ಎಂದುಕೊಳ್ಳಿ – ನಿಮಗೆ ಮಾತನಾಡಲು ಸಾಧ್ಯವಾಗುವುದಿಲ್ಲ ಅಥವಾ ಹಾವಭಾವದಿಂದ ತೋರಿಸಲು ಆಗುವುದಿಲ್ಲ. ಆಗ ನೀವು ಏನು ಮಾಡುತ್ತೀರಿ?
- ಉದಾಹರಣೆಗೆ, ನಿಮಗೆ ಇಂಗ್ಲೀಷ್ ಬರುವುದಿಲ್ಲ, ನೀವು ಇಂಗ್ಲೀಷ್ ಮಾತನಾಡುವ ಜನರು ಇರುವ ಪ್ರದೇಶದಲ್ಲಿ ಇದ್ದೀರಿ ಎಂದುಕೊಳ್ಳಿ, ಆಗ ನೀವು ಏನು ಮಾಡುತ್ತೀರಿ? (ಹಾವಭಾವ ಅಥವಾ ಮುಖ್ಯವಾದ ಕೆಲವೇ ಪದಗಳು ಬಳಸುತ್ತೀರಿ.)
- ಜನರು ಆಜ್ಞೆ ಮಾಡಲು, ವಿನಂತಿಸಲು ಅಥವಾ ಪ್ರಶ್ನೆಗಳನ್ನು ಕೇಳಲು ವಿವಿಧ ರೀತಿಯ ಸಂವಹನವನ್ನು ಬಳಸುತ್ತಾರೆ ಎಂಬುದನ್ನು ವಿವರಿಸಿ, ಇದನ್ನು ವಿವಿಧ ವಿಧಾನಗಳಲ್ಲಿ, ವಿವಿಧ ಭಾಷೆಗಳಲ್ಲಿ ಮಾಡಬಹುದು ಎಂದು ಹೇಳುತ್ತ ಸಂಭಾಷಣೆಯನ್ನು ಸಾರಾಂಶೀಕರಿಸುವುದು.

ಈ ವಾಕ್ಯಗಳನ್ನು ಅಭಿನಯಿಸಿ ತೋರಿಸಲು ಮತ್ತು ವಾಕ್ಯಗಳನ್ನು ಪುನರಾವರ್ತನೆ ಮಾಡಲು ಹೇಳುವುದು. ಅವರಿಗೆ ನೀರು ಬೇಕು ಎನ್ನಿಸಿದಾಗ, ಹಸಿವೆಯಾದಾಗ, ಸುಸ್ತಾದಾಗ, ಇನ್ನಿತರ ಸಂದರ್ಭಗಳಲ್ಲಿ ವಾಕ್ಯಗಳಲ್ಲಿ ಹೇಳಬಹುದು ಅಥವಾ ಹಾವಭಾವದ ಮೂಲಕ ಅಭಿನಯಿಸಿ ತೋರಿಸಬಹುದು ಎಂಬುದನ್ನು ವಿವರಿಸುವುದು.



Scanned with CamScanner

## ಸಂವಹನ ಮಾಡುವುದು ಹೇಗೆ?

### ಹಂತ 2

ಕಥೆಗಳು ಮತ್ತು ಪದ್ಯಗಳ ಮೂಲಕ ಸಂವಹನ ಮಾಡುವ ವಿಧಾನಗಳು.

ನಿಮ್ಮ ಶಿಕ್ಷಕರನ್ನು ಹೊರತುಪಡಿಸಿ, ಬೇರೆ ಯಾರಿಂದಲಾದರೂ ಕಥೆಗಳನ್ನು ಕೇಳಿದ್ದೀರಾ? ಎಂದು ಮಕ್ಕಳಿಗೆ ಕೇಳಿ ಅವರಿಂದ ಉತ್ತರಗಳನ್ನು ನಿರೀಕ್ಷಿಸುವುದು.

ಕಥೆಗಳು ಮತ್ತು ಶಿಶುಗೀತೆಗಳ ಪರಿಕಲ್ಪನೆಗಳನ್ನು ಮಕ್ಕಳ ಮಟ್ಟಕ್ಕೆ ಸರಳಗೊಳಿಸುವುದು. ತರಗತಿಯಲ್ಲಿ ಕಲಿಸಿರುವ ಶಿಶುಗೀತೆಯೊಂದನ್ನು ಮತ್ತೆ ಹಾಡಿ, ಅದನ್ನು ನಂತರ ಒಂದು ಕಥೆಯ ರೂಪಕ್ಕೆ ಪರಿವರ್ತಿಸುವುದು. (ಇನ್ಸಿ-ವಿನ್ಸಿ ಸ್ಪೈಡರ್ ಇಂತಹ ಚಿಕ್ಕ ಶಿಶುಗೀತೆಗಳನ್ನು ಹಾಡಿ, ಅವನ್ನು ಕಥೆಯನ್ನಾಗಿ ಪರಿವರ್ತನೆ ಮಾಡಬಹುದು). ನಂತರ ಇನ್ನೊಂದು ಶಿಶುಗೀತೆಯನ್ನು ಪುನರಾವರ್ತಿಸಿ, ಮಕ್ಕಳಿಗೆ ಅವರೇ ಶಿಶುಗೀತೆಯನ್ನು ಕಥೆಯಾಗಿ ಹೇಳಬೇಕೆಂದು ತಿಳಿಸಿ. ಹೀಗೆ 2-3 ಶಿಶುಗೀತೆಗಳನ್ನು ಆಯ್ಕೆ ಮಾಡಿಕೊಂಡು, ಮಕ್ಕಳಿಗೆ ಕಥೆಯನ್ನು ಹೇಳಲು ಅವಕಾಶ ನೀಡುವುದು.












Scanned with CamScanner

## ಸಂಭಾಷಣೆ 2

## ಕಲೆಯ ಮೂಲಕ ಸಂವಹನ


### ಕಲಿಕಾ ಫಲಿತಗಳು

- ಮಕ್ಕಳು ಚಿತ್ರಗಳನ್ನು ಅರ್ಥಮಾಡಿಕೊಂಡು ಕಥೆಗಳನ್ನು ರಚಿಸುವುದು.

### ಕಲಿಕಾ ಸಾಮಗ್ರಿಗಳು

ನಾಲ್ಕು ಕಾರ್ಡುಗಳನ್ನು, ಪ್ರತಿಯೊಂದರಲ್ಲಿಯೂ ನಾಲ್ಕು ಭಾಗಗಳಿರುವಂತೆ ವಿಂಗಡಿಸಿ. ಒಂದೊಂದು ಕಾರ್ಡಿಗು ಒಂದು ಕಥೆ ಇರುವಂತೆ ನಾಲ್ಕು ಚಿತ್ರಗಳ ಮೂಲಕ ನಿರೂಪಿಸುವುದು – ಅಂದರೆ ಕಾಲುಭಾಗದಲ್ಲಿ ಒಂದು ಚಿತ್ರ ಇರುವಂತೆ ಮಾಡುವುದು.





### ಶಿಕ್ಷಕರ ಪೂರ್ವಸಿದ್ಧತೆ

ಕಥೆಗಳನ್ನು ಮತ್ತು ಪ್ರತಿಯೊಂದು ಭಾಗವೂ ಏನು? ತೋರಿಸುತ್ತದೆ ಎಂದು ತಿಳಿದುಕೊಳ್ಳುವುದು.

### ಸೂಚನೆಗಳು

1. ಕೆಲವೊಮ್ಮೆ ಕಥೆ ಹೇಳುವ ಅಗತ್ಯ ಇರುವುದಿಲ್ಲ, ಎಂದು ಮಕ್ಕಳಿಗೆ ವಿವರಿಸುವುದು. ನಾವು ಚಿತ್ರಗಳನ್ನು ನೋಡಿ, ನಂತರ ಕಥೆಯನ್ನು ಹೇಳಬಹುದು.
2. ಅವರಿಗೆ ಒಂದು ಕಾರ್ಡಿನಲ್ಲಿರುವ ಒಂದಿಷ್ಟು ಚಿತ್ರಗಳನ್ನು ತೋರಿಸುವುದು. ಉದಾಹರಣೆಗೆ ಬಾಯಾರಿದ ಕಾಗೆ. ಕಾರ್ಡುಗಳು ಯಾವುದೇ ಪದಗಳನ್ನು ತೋರಿಸುವುದಿಲ್ಲ, ಆದ್ದರಿಂದ ಈ ಕಥೆಯನ್ನು ಕೇವಲ ಚಿತ್ರಗಳನ್ನು ನೋಡಿ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಸೂಚಿಸುವುದು.
3. ಕಾಲು ಭಾಗದಲ್ಲಿರುವ ಚಿತ್ರವನ್ನು ವಿವರಿಸುವುದು. ಪ್ರತಿ ಕಾಲು ಭಾಗದಲ್ಲಿರುವ ಚಿತ್ರದ ನಂತರ ಇನ್ನೊಂದರಂತೆ, ಚಿತ್ರಗಳ ಮೂಲಕವೇ ಕಥೆಯನ್ನು ಹೇಳುತ್ತ ಹೋಗುವುದು.
4. ತರಗತಿಯನ್ನು ಚಿಕ್ಕ ಗುಂಪುಗಳಾಗಿ ವಿಂಗಡಿಸಿ, ಪ್ರತಿಯೊಬ್ಬರಿಗೂ ಒಂದು ಕಾರ್ಡು ಕೊಟ್ಟು, ಅವರು ಚಿತ್ರಗಳ ಮೂಲಕ ಕಥೆಯನ್ನು ಹೇಳಬಹುದೇ? ಎಂದು ಕೇಳುವುದು.
5. ಸ್ವಲ್ಪ ದೊಡ್ಡ ತರಗತಿಯಾಗಿದ್ದರೆ ಪ್ರತಿ ಗುಂಪು ಅರ್ಧ ಕಥೆಯನ್ನು ಹೇಳಲಿ ಮತ್ತು ಇನ್ನೊಂದು ಗುಂಪು ಉಳಿದ ಕಥೆಯನ್ನು ಪೂರ್ಣಗೊಳಿಸಲಿ.
6. ಪ್ರತಿ ಗುಂಪು ಕಥೆಯನ್ನು ಹೇಳಿ ಮುಗಿಸಿದ ನಂತರ ಮತ್ತೆ ಕಾರ್ಡನ್ನು ತೋರಿಸುತ್ತ, ಚಿತ್ರಗಳತ್ತ ಮಕ್ಕಳ ಗಮನವನ್ನು ಸೆಳೆದು, ಪ್ರತಿ ಚಿತ್ರವು ಏನನ್ನು ಸೂಚಿಸುತ್ತದೆ ಎಂದು ವಿವರಿಸುವುದು.





## ಸಂಭಾಷಣೆ 3

# ಮಾರಾಟಕ್ಕಾಗಿ ಸಂವಹನ

### ಕಲಿಕಾ ಫಲಿತಗಳು

- ಶಿಶುಗೀತೆಗಳಲ್ಲಿ, ಜಾಹೀರಾತುಗಳಲ್ಲಿ (ಜಿಂಗಲ್‌ಗಳಲ್ಲಿ) ಮತ್ತು ಅವರ ಸುತ್ತಲಿರುವ ಇತರ ಮಾ... ಸಂದೇಶಗಳನ್ನು ಗುರುತಿಸುವುದು.
- ಒಂದೇ ಸಂದೇಶವನ್ನು ಸಂವಹನ ಮಾಡುವ ವಿವಿಧ ವಿಧಾನಗಳನ್ನು ಗುರುತಿಸಿ, ಶೀರ್ಷಿಕೆ ನೀಡಿ, ವಿವ...

### ಕಲಿಕಾ ಸಾಮಗ್ರಿಗಳು

ಬೇರೆ ಜನಪ್ರಿಯ ರಾಗಗಳಿರುವ ಮೊಬೈಲ್ ಫೋನು, ಖಾಲಿಯಾದ ಚಿಪ್ಸ್ ಪ್ಯಾಕೆಟ್‌ಗಳು, ಸುದ್ದಿಪತ್ರಿಕೆಗಳ ಜಾಹೀರಾತುಗಳು.

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1**

ಹಣ್ಣಿನ ಬುಟ್ಟಿಯೊಂದನ್ನು ತಲೆ ಮೇಲಿಟ್ಟುಕೊಂಡು, ಹಣ್ಣು ಮಾರಾಟ ಮಾಡುವವರ ಪಾತ್ರವನ್ನು ಅಭಿನಯಿಸಿ ತೋರಿಸುವುದು. ತರಗತಿಯೊಳಗೆ ಓಡಾಡುತ್ತ, ಬಾಳೆಹಣ್ಣು ಅಥವಾ ಚಿಕ್ಕೂ (ಸಪೋಟ) ಹಣ್ಣು ಮಾರುವವರ ಹಾಗೆ, ಜೋರಾಗಿ "ಬಾಳೆಹಣ್ಣು, ಬಾಳೆಹಣ್ಣು, ಚಿಕ್ಕೂ ಹಣ್ಣು ಚಿಕ್ಕೂ ಹಣ್ಣು ಅಥವಾ ಚಿಕ್ಕೂ, ಬಾಳೆ ಹಣ್ಣು" ಎಂದು ರಾಗವಾಗಿ ಹೇಳುತ್ತ ನಡೆದಾಡುವುದು. ಇದನ್ನು ಒಂದೆರಡು ನಿಮಿಷಗಳ ಕಾಲ ಮಾಡಿ. ನೀವು ಏನು ಮಾರಾಟ ಮಾಡುತ್ತಿದ್ದಿರೆಂದು? ಊಹಿಸಲು ಮಕ್ಕಳಿಗೆ ಹೇಳುವುದು. ಅವರಿಗೆ ಹೇಗೆ ಇದು ಗೊತ್ತಾಯಿತು? ನೀವು ಹಣ್ಣುಗಳನ್ನು ಹೇಗೆ ಮಾರುತ್ತಿದ್ದೀರಿ? ನೀವು ಸುಮ್ಮನೆ ಹಣ್ಣಿನ ಬುಟ್ಟಿ ಹಿಡಿದು ನಡೆದಾಡುವ ಬದಲಿಗೆ ಏಕೆ ಅಷ್ಟು ಜೋರಾಗಿ ಕೂಗುತ್ತಾ ಹೋದಿರಿ? ಮಕ್ಕಳಿಗೆ ಅವರದೇ ಆದ ವಿವರಣೆಗಳನ್ನು ನೀಡಲು ಉತ್ತೇಜಿಸುವುದು. ಏನನ್ನಾದರೂ ಚೆನ್ನಾಗಿ ಮಾರಾಟ ಮಾಡಬೇಕು ಅಂದರೆ ನಿಮ್ಮೊಂದಿಗಿರುವ ವಸ್ತುಗಳತ್ತ ಜನರ ಗಮನವನ್ನು ಸೆಳೆಯಬೇಕು ಎಂಬುದನ್ನು ವಿವರಿಸುವುದು.

ಜನಜಂಗುಳಿಯಲ್ಲಿ, ಗಲಾಟೆಯ ಸ್ಥಳಗಳಲ್ಲಿ ಮಾರಾಟಗಾರರು ಹೇಗೆ? ಅವರ ವಸ್ತುಗಳನ್ನು ಮಾರಾಟ ಮಾಡುತ್ತಾರೆ, ಎಂಬ ಕುರಿತು ಮಕ್ಕಳೊಂದಿಗೆ ಮಾತನಾಡುವುದು. ಮಾರುಕಟ್ಟೆ ಅಥವಾ ಪೇಟೆಯಲ್ಲಿ ಯಾರಾದರೂ ಮಾರಾಟಗಾರರು ಏನು ಮಾರುತ್ತಿದ್ದೇವೆಂದು ಜೋರಾಗಿ ಕೂಗುವುದನ್ನು ಕೇಳಿಸಿಕೊಂಡಿದ್ದೀರಾ? ಎಂದು ಮಕ್ಕಳನ್ನು ಕೇಳುವುದು. 'ತಾಜಾ ಹಣ್ಣು, ತಾಜಾ ಹಣ್ಣು' ಎಂದು ಒಬ್ಬರು ಮಾರಾಟಗಾರರು ಕೂಗುತ್ತಾರೆ. ಇನ್ನೊಬ್ಬ ಮಾರಾಟಗಾರರು 'ಬಾಡಿದ ಹಣ್ಣು, ಬಾಡಿದ ಹಣ್ಣು' ಅಂತ ಕೂಗುತ್ತಿದ್ದಾರೆ ಎಂದು ಊಹಿಸಿ. ಹಾಗಿದ್ದರೆ ಯಾರು ಬೇಗನೆ ಮಾರಾಟ ಮಾಡಬಲ್ಲರು ಅಂತ ನಿಮಗನ್ನಿಸುತ್ತೆ? ಮಾರಾಟಗಾರರು ಏಕೆ ತಾವು ಮಾರಾಟ ಮಾಡುವ ವಸ್ತುಗಳನ್ನು ಹೊಗಳುತ್ತಾರೆ?

ಅವರು ಲಡ್ಡೂ ಮಾರುವುದಿದ್ದರೆ ಹೇಗೆ ಕೂಗುತ್ತಾರೆ? ಅವರು ಹೂ ಮಾರಾಟ ಮಾಡುವುದಿದ್ದರೆ ಹೇಗೆ ಕೂಗುತ್ತಾರೆ? ಎಂದು ಮಕ್ಕಳಿಗೆ ಕೇಳಿ ಪ್ರತಿಕ್ರಿಯಿಸಲು ತಿಳಿಸುವುದು.

**ಹಂತ 2**

ಕೆಲವು ಉತ್ಪನ್ನಗಳ ಜನಪ್ರಿಯ ಜಿಂಗಲ್‌ಗಳನ್ನು ನಿಮ್ಮ ಮೊಬೈಲಿನಲ್ಲಿ ಹಾಕಿ ಕೇಳಿಸುವುದು. ಈ ಮೊದಲು ಇವನ್ನು ಕೇಳಿದ್ದೀರಾ? ಎಂದು ಮಕ್ಕಳನ್ನು ಕೇಳುವುದು. ಇದು ಅವರಿಗೆ ಏನನ್ನು ನೆನಪಿಸುತ್ತದೆ? ಏನು ಎಂದು ಅವರು ಗುರುತಿಸಬಲ್ಲರೇ? ಇವುಗಳಲ್ಲಿ ಜನ ಏನನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಾರೆ? ಅವರು ಹೇಗೆ ಇದನ್ನು ಊಹಿಸುತ್ತಾರೆ?

ಈ ಜಾಹೀರಾತುಗಳನ್ನು ಅವರು ಎಲ್ಲಿ ನೋಡಿದ್ದಾರೆ ಎಂದು ಕೇಳುವುದು. ಅವರಿಗೆ ಟಿವಿಯಲ್ಲಿ ನೋಡಿದ ಯಾವುದಾದರೂ ಒಂದು ಜಾಹೀರಾತನ್ನು ನೆನಪಿಸಿಕೊಂಡು ಬಂದು, ಅದನ್ನು ಇಲ್ಲಿ ಮನರಾವರ್ತಿಸುವಂತೆ ಹೇಳುವುದು.



Scanned with CamScanner

## ಸಂಭಾಷಣೆ 3

## ಮಾರಾಟಕ್ಕಾಗಿ ಸಂವಹನ


### ಹಂತ 3

ಮಕ್ಕಳಿಗೆ ಖಾಲಿಯಾದ ಚಿಪ್ಸ್ ಮತ್ತು ಬಿಸ್ಕೆಟ್ ಪ್ಯಾಕೆಟ್ಟುಗಳನ್ನು ತೋರಿಸಿ. ಪ್ಯಾಕೆಟ್ ಒಳಗೆ ಏನಿತ್ತು ಎಂದು ಅವರನ್ನು ಕೇಳುವುದು. ಅವರಿಗೆ ಹೇಗೆ ಗೊತ್ತಾಯಿತು? ಚಿಪ್ಸ್ ಅಥವಾ ಬಿಸ್ಕೆಟ್ ಪ್ಯಾಕೆಟ್ಟುಗಳ ಮೇಲೆ ಇರುವ ಚಿತ್ರಗಳನ್ನು, ಅವುಗಳ ಬಣ್ಣಗಳನ್ನು ಅವರೇ ವಿವರಿಸಲಿ. ಪ್ಯಾಕೆಟ್ಟುಗಳ ಮೇಲೆ ಇರುವ ಚಿತ್ರವು ನೋಡಲು ಚೆನ್ನಾಗಿ ಕಾಣುವುದರಿಂದ ಜನರಿಗೆ ಅವನ್ನು ತಿನ್ನಬೇಕೆಂದು ಅನ್ನಿಸುತ್ತದೆ ಎಂದು ವಿವರಿಸುವುದು.

### ಹಂತ 4

ದಿನಪತ್ರಿಕೆ ಅಥವಾ ನಿಯತಕಾಲಿಕೆಗಳಲ್ಲಿ ಇರುವ ಜಾಹೀರಾತುಗಳನ್ನು ಸಂಗ್ರಹಿಸಿ ತಂದು, ಮಕ್ಕಳಿಗೆ ಅದನ್ನು ವೀಕ್ಷಿಸಲು ಅವಕಾಶ ನೀಡಿ. ಈ ಜಾಹೀರಾತಿನ ಮುಖಾಂತರ ಯಾವ ಯಾವ ವಸ್ತುವನ್ನು ಮಾರಾಟ ಮಾಡುತ್ತಿದ್ದಾರೆ? ಎಂದು ಊಹಿಸಲು ಹೇಳಿ ಉತ್ತರ ಪಡೆಯುವುದು.

ಜನರು ವಸ್ತುಗಳನ್ನು ಮಾರಾಟ ಮಾಡುವ ವಿವಿಧ ವಿಧಾನಗಳನ್ನು ಸಾರಾಂಶೀಕರಿಸುವುದು – ಚಿತ್ರಗಳು, ಹಾಡುಗಳು, ಮಾತುಗಳ ಮೂಲಕ, ಟಿವಿ, ಪತ್ರಿಕೆಗಳು, ಪ್ಯಾಕೆಟ್ಟುಗಳ ಮೇಲೆ ಮುದ್ರಿಸುವ ಮೂಲಕ, ಹೀಗೆ ವಿವಿಧ ವಿಧಾನಗಳನ್ನು ವಿವರಿಸುವುದು. ಟಿವಿ ಹಾಗೂ ರೇಡಿಯೋಗಳಲ್ಲಿ, ಪ್ಯಾಕೆಟ್ಟುಗಳ ಮೇಲೆ ಮತ್ತು ಪತ್ರಿಕೆಗಳಲ್ಲಿ ಬರುವ ಜಿಂಗಲ್‌ಗಳು, ಇವೆಲ್ಲವೂ ಹೇಗೆ? ಒಂದೇ ಸಂಗತಿಯನ್ನು ಪ್ರಚಾರ ಮಾಡುತ್ತವೆ ಎಂಬುದನ್ನು ಚರ್ಚಿಸುವುದು. ತರಗತಿಗಳಲ್ಲಿ ಕೆಲವು ಜನಪ್ರಿಯ ಜಿಂಗಲ್‌ಗಳನ್ನು ಹಾಡಿ, ಮಕ್ಕಳಿಗೆ ಚಪ್ಪಾಳೆ ತಟ್ಟುತ್ತ ಜಿಂಗಲ್ ಅನ್ನು ಹಾಡಲು ಹೇಳುವುದು.





Scanned with CamScanner

ಯೋಜನಾ ಕಾರ್ಯ 1

## ದೃಶ್ಯ ಮತ್ತು ನಾಟಕದ ಮೂಲಕ ಕಥೆ ಹೇಳುವುದು

### ಕಲಿಕಾ ಫಲಿತಗಳು

* ಒಂದು ಸಣ್ಣ ಕಥೆಯನ್ನು, ನಾಟಕ ಅಥವಾ ಒಂದು ಸೂತ್ರದ ಗೊಂಬೆಯಾಟವಾಗಿ ರೂಪಾಂತರಿಸುವುದು.

### ಕಲಿಕಾ ಸಾಮಗ್ರಿಗಳು

ವಿದ್ಯಾರ್ಥಿಗಳು ಆಯ್ಕೆ ಮಾಡಿದ ಯಾವುದೇ ಒಂದು ಕಥೆ.

### ಸೂಚನೆಗಳು

1. ತರಗತಿಯಲ್ಲಿ ನೀವು ಓದಿದ ವಿವಿಧ ಕಥೆಗಳ ಕುರಿತು ಮಾತನಾಡುತ್ತ, ಚರ್ಚೆಯನ್ನು ಆರಂಭಿಸುವುದು.
2. ವಿದ್ಯಾರ್ಥಿಗಳು ತಮ್ಮ ಇಷ್ಟದ ಒಂದು ಕಥೆಯನ್ನು ಆಯ್ಕೆ ಮಾಡಿ, ಅದನ್ನು ಆಧರಿಸಿ ಒಂದು ಪ್ರದರ್ಶನವನ್ನು ರೂಪಿಸಲು ಹೇಳುವುದು. ಮಕ್ಕಳಿಗೆ ಬೇರೆ ಬೇರೆ ಪಾತ್ರಗಳನ್ನು ನೀಡುವುದು.
3. ನೀವು ಕಥೆಯನ್ನು ಹೇಳುತ್ತ ಹೋದ ಹಾಗೆ, ಮಕ್ಕಳಿಗೆ ಸಂಭಾಷಣೆಯು ಬರದಿದ್ದರೆ, ಹಾವಭಾವದಿಂದ ಅಭಿನಯಿಸಲು ಹೇಳುವುದು.
4. ಹೀಗೆ ನೀವು ಮತ್ತು ಮಕ್ಕಳು ಒಟ್ಟಾಗಿಯೇ ಮಾಡಿ. ಆಮೇಲೆ ಅವರಿಗೆ ಕೇಳಿ – ಸಾಮಾನ್ಯವಾಗಿ ಕಥೆ ಓದುವುದು ಅಥವಾ ಕಥೆ ಹೇಳುವುದಕ್ಕಿಂತ ಇದು ಹೇಗೆ ಭಿನ್ನವಾಗಿದೆ? – ಅಭಿನಯ, ಜೊತೆಗೆ ಸ್ವಲ್ಪ ಸಂಗೀತ ಅನುಭವಿಸಲು ಅಥವಾ ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ? ಕಥೆ ಹೇಳುವ ಅವಧಿಯ ವಿಶೇಷತೆ ಏನು? ಕಥೆಯನ್ನು ಹೇಳುವುದರಿಂದ ಹಾಗೂ ಕೇಳುವುದರಿಂದ ನಮಗೆ ಏನು ಸಿಗುತ್ತದೆ?

---

ಯೋಜನಾ ಕಾರ್ಯ 2

## ದೂರವಾಣಿ ಮಾಡುವುದು ಮತ್ತು ಬಳಸುವುದು

### ಕಲಿಕಾ ಸಾಮಗ್ರಿಗಳು

ಪೇಪರ್ ಕಪ್ಪುಗಳು (ಪ್ರತಿ ವಿದ್ಯಾರ್ಥಿಗೆ ಒಂದರಂತೆ), ದಾರ, ಸೂಜಿ, ಬಣ್ಣಗಳು ಮತ್ತು ಬ್ರಶ್‌ಗಳು

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಸಾಮಗ್ರಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

### ಸೂಚನೆಗಳು

1. ಎರಡು ಪೇಪರ್ ಕಪ್ಪುಗಳನ್ನು ತೆಗೆದುಕೊಂಡು, ಅವುಗಳ ತಳದಲ್ಲಿ ಸೂಜಿಯ ಸಹಾಯದಿಂದ ರಂಧ್ರ ಮಾಡುವುದು.
2. ದಾರದ ಒಂದು ತುದಿಯನ್ನು ರಂಧ್ರದ ಮೂಲಕ ತೂರಿಸಿ, ಅದು ಹೊರಗೆ ಬರದಂತೆ ಆ ಕಡೆಯಲ್ಲಿ ಬೆಂಕಿಕಡ್ಡಿಯ ತುಂಡನ್ನು ದಾರಕ್ಕೆ ಕಟ್ಟುವುದು.
3. ದಾರದ ಇನ್ನೊಂದು ತುದಿಯನ್ನು ತೆಗೆದುಕೊಂಡು ಎರಡನೇ ಕಪ್ಪಿನ ರಂಧ್ರದ ಮೂಲಕ ತೂರಿಸುವುದು.
4. ದಾರಕ್ಕೆ ಬೆಂಕಿಕಡ್ಡಿಯನ್ನು ಕಟ್ಟುವುದು.
5. ಈಗ ನಿಮ್ಮ ಪೇಪರ್ ಕಪ್ ಟೆಲಿಫೋನು ಸಿದ್ಧವಾಯಿತು.
6. ಈ ಕಪ್ಪುಗಳಿಗೆ ವಿದ್ಯಾರ್ಥಿಗಳ ಇಷ್ಟವಾದ ಬಣ್ಣ ಹಚ್ಚಿ, ಅಲಂಕರಿಸುವುದು. ಬಣ್ಣ ಒಣಗಿದ ನಂತರ ಇಬ್ಬರು ಮಕ್ಕಳಿಗೆ ಒಂದೊಂದು ಕಪ್ಪನ್ನು ಹಿಡಿದುಕೊಂಡು ಒಬ್ಬರಿಗೊಬ್ಬರು ಮಾತನಾಡಲು ಹೇಳುವುದು.



Scanned with CamScanner

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು "ಕಥೆಯು ಹೇಳಿತು ಕಲ್ಪನೆ" ಮತ್ತು "One potato two potatoes" ಎಂಬ ಶಿಶುಗೀತೆಗಳನ್ನು ಸರಿಯಾದ ಉಚ್ಚಾರಣೆ, ಹಾವಭಾವ ಮತ್ತು ಅಭಿನಯಗಳೊಂದಿಗೆ ಹಾಡಲು ಸಮರ್ಥರಾಗುವುದು.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದರ ಜೊತೆಗೆ ಮಾಡಬೇಕಿರುವ ಅಭಿನಯ, ಹಾವಭಾವದ ಕುರಿತು ತಿಳಿದುಕೊಳ್ಳುವುದು.

### ಸೂಚನೆಗಳು

1. "ಕಥೆಯು ಹೇಳಿತು ಕಲ್ಪನೆ" ಮತ್ತು "One potato two potatoes" ಎಂಬ ಶಿಶುಗೀತೆಗಳನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿ ಇದೆ ಎಂದು ವಿವರಿಸುವುದು.
2. ಶಿಶುಗೀತೆಯನ್ನು ಪೂರ್ಣವಾಗಿ ಲಯಬದ್ಧವಾದ ಅಭಿನಯದೊಂದಿಗೆ ಧ್ವನಿಯ ಏರಿಳಿತದೊಂದಿಗೆ ಹೇಳುವುದು.
3. ನೀವು ಹೇಳಿದ ನಂತರ ಪ್ರತಿಯೊಂದೂ ಸಾಲನ್ನು ಮಕ್ಕಳಿಗೆ ಪುನರಾವರ್ತನೆ ಮಾಡಲು ಹೇಳಿ. ಚಿತ್ರವನ್ನು ತೋರಿಸುತ್ತ ಪ್ರತಿ ಸಾಲಿನ ಅರ್ಥವನ್ನು ವಿವರಿಸುವುದು.
4. ಶಿಶುಗೀತೆಯ ಜೊತೆಗೆ ಮಾಡುವ ಅಭಿನಯವನ್ನು ತೋರಿಸಿ, ನಿಮ್ಮನ್ನು ಅನುಕರಿಸಲು ಮಕ್ಕಳಿಗೆ ಹೇಳುವುದು.
5. ಮಕ್ಕಳಿಗೆ ಗುಂಪುಗಳಲ್ಲಿ ಅಥವಾ ಒಬ್ಬೊಬ್ಬರಾಗಿ ಅವರೇ ಹಾಡಲು ಪ್ರೋತ್ಸಾಹಿಸುವುದು.




Scanned with CamScanner

ಶಿಶುಗೀತೆ 1

## ಕಥೆಯು ಹೇಳಿತು ಕಲ್ಪನೆ

ಕಥೆಯು ಹೇಳಿತು ಕಲ್ಪನೆ
ನಾಟಕ ಕಲಿಸಿತು ನೀತಿ
ಗೊಂಬೆಯಾಟವು ಹಾವ ಭಾವ
ನಾಟ್ಯವೆಂದರೆ ಥಕ ಥಕ ತೈ
ಚಿತ್ರ ಬರೆದರೆ ಸುಂದರ ಬಣ್ಣ ಬಣ್ಣ
ಎಲ್ಲಾ ಕಲಿಯುವೆ ನಾ ಅಣ್ಣ ಅಣ್ಣ



ಶಿಶುಗೀತೆ 2

**One potato two potatoes**

One potato two potatoes three potatoes four
Five potatoes, six potatoes, seven potatoes more
Eight potatoes, nine potatoes, ten potatoes in all





Scanned with CamScanner

# ಯಕ್ಷಗಾನ ರಾತ್ರಿ!



## ಕಲಿಕಾ ಫಲಿತಗಳು

ಮಕ್ಕಳು 'ಯಕ್ಷಗಾನ ರಾತ್ರಿ' ಕಥೆಯನ್ನು ಅರ್ಥ ಮಾಡಿಕೊಂಡು, ಅದರ ಮೇಲೆ ಸರಳ ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ಅದನ್ನು ತಮ್ಮದೇ ಪದಗಳಲ್ಲಿ ನಿರೂಪಿಸಲು ಸಮರ್ಥರಾಗುವುದು.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ತಿಳಿದುಕೊಂಡು ಸ್ವಾರಸ್ಯಕರವಾಗಿ ಕಥೆ ಹೇಳುವುದನ್ನು ಅಭ್ಯಾಸ ಮಾಡಿಕೊಳ್ಳುವುದು.



## ಕಥೆಯ ಸಂಕ್ಷಿಪ್ತ ರೂಪ

**ಯಕ್ಷಗಾನ ರಾತ್ರಿ!**

ಅದೊಂದು ಸಣ್ಣ ಹಳ್ಳಿ. ಅಂದು ಅಲ್ಲಿ ತುಂಬಾ ಸಂಭ್ರಮದ ವಾತಾವರಣವಿತ್ತು. ಸಂಜೆಯಾಗುತ್ತಿತ್ತು, ಸೂರ್ಯ ನಿಧಾನವಾಗಿ ಮುಳುಗುತ್ತಿದ್ದ. ಓಹ್... ಹಳ್ಳಿಯ ಮೈದಾನದಲ್ಲಿ ಏನು ನಡೆಯುತ್ತಿದೆ ನೋಡಿ! ಅಲ್ಲಿ ಒಂದು ಸಣ್ಣ ವೇದಿಕೆ ರಚಿಸಿದ್ದಾರೆ, ಕೆಂಪು, ಹಳದಿ, ಹಸಿರು ದೀಪಗಳು ವೇದಿಕೆಯ ಮೇಲೆ ಬೆಳಗುತ್ತಿವೆ. ಬಣ್ಣಬಣ್ಣದ ಉಡುಗೆ ಮತ್ತು ಮುಖವಾಡ ತೊಟ್ಟ ಕಲಾವಿದರು ವೇದಿಕೆಯ ಮೇಲೆ, ಕೆಳಗೆ ಓಡಾಡುತ್ತಿದ್ದಾರೆ.

ಈಗ ಹಳ್ಳಿಯ ಮಕ್ಕಳೆಲ್ಲ ಮೈದಾನಕ್ಕೆ ಓಡಿ ಬಂದರು. ಯಾವುದನ್ನೂ ಸ್ವಲ್ಪವೂ ತಪ್ಪಿಸಿಕೊಳ್ಳುವುದು ಅವರಿಗೆ ಇಷ್ಟವಿಲ್ಲ. ಅವರು ಜೋರಾಗಿ ನಗುತ್ತ, ಒಬ್ಬರನ್ನೊಬ್ಬರು ಕರೆಯುತ್ತ, ವೇದಿಕೆಯ ಮುಂಭಾಗದಲ್ಲಿ ಕುಳಿತರು. ದೊಡ್ಡವರು ತುಂಬ ನಿಧಾನವಾಗಿ ಬಂದರು. ಅವರಿಗೆ ಕೈತುಂಬ ಕೆಲಸ, ಅದನ್ನೆಲ್ಲ ಮುಗಿಸಿ ಬರಬೇಕಲ್ಲ. ಎಲ್ಲರೂ ಕುಳಿತುಕೊಳ್ಳಲು ಶುರುಮಾಡಿದಾಗ, ಜೋರಾದ ಶಬ್ದ ಕೇಳಿತು. ಏನದು? ಅದು ಚಂಡೆ ಬಾರಿಸುವುದು. ಅಂದರೆ ಇನ್ನು ಸ್ವಲ್ಪ ಹೊತ್ತಿನಲ್ಲಿ ಪ್ರದರ್ಶನ ಶುರುವಾಗುತ್ತದೆ ಎಂದು ಎಲ್ಲರಿಗೂ ತಿಳಿಯಿತು. ಚಂಡೆಯ ಸದ್ದು ತಾರಕಕ್ಕೇರಿದಂತೆ, ಕಲಾವಿದರು ವೇದಿಕೆಯ ಮೇಲೆ ಬರಲು ಶುರು ಮಾಡಿದರು. ಅವರ ಉಡುಗೆ ತೊಡುಗೆಗಳು, ಮುಖದ ಅಲಂಕಾರ, ತಲೆಗೆ ಹಾಕಿರುವ ಜಗಮಗಿಸುವ ಕಿರೀಟಗಳನ್ನು ನೋಡಿ!

ಭಾಗವತರು ಮಹಾಭಾರತದ ಒಂದು ಕಥೆಯನ್ನು ಹೇಳಲು ಆರಂಭಿಸಿದರು. ಕಲಾವಿದರು ಸಂಗೀತಕ್ಕೆ ಅನುಗುಣವಾಗಿ ಹೆಜ್ಜೆಹಾಕುತ್ತ, ಅಭಿನಯಿಸತೊಡಗಿದರು. ಭಾಗವತರು ಮಾತು ನಿಲ್ಲಿಸಿದಾಗ, ಕಲಾವಿದರು ಸಂಭಾಷಣೆ ಹೇಳುತ್ತಿದ್ದರು. ಅವರು ಸಂಭಾಷಣೆಗಳನ್ನು ಹಾಡುಗಳ ರೂಪದಲ್ಲಿ ಹೇಳುತ್ತಿದ್ದರು ಮತ್ತು ಅರ್ಜುನನು ಹಕ್ಕಿಯ ಕಣ್ಣಿಗೆ ಗುರಿಯಿಡುವ ಪರೀಕ್ಷೆಯ ಕಥೆಯನ್ನು ಹೇಳುತ್ತಿದ್ದರು. ಪ್ರೇಕ್ಷಕರು ನಗುತ್ತಿದ್ದರು, ಚಪ್ಪಾಳೆ ತಟ್ಟಿ, ಅರ್ಜುನನನ್ನು ಪ್ರೋತ್ಸಾಹಿಸುತ್ತಿದ್ದರು. ರಾತ್ರಿಯಾಗುತ್ತಿದ್ದಂತೆ, ಚಿಕ್ಕ ಮಕ್ಕಳು ನಿದ್ದೆ ಮಾಡಲು ಶುರುಮಾಡಿದರು. ಆದರೆ ಪ್ರದರ್ಶನ ನಿಲ್ಲಿಸಲಾಗುವುದೇ? ರಾತ್ರಿ ಆಕಾಶದಲ್ಲಿ ನಕ್ಷತ್ರಗಳು ಮಿನುಗಲಾರಂಭಿಸಿದಾಗ, ಪ್ರದರ್ಶನವು ಮುಕ್ತಾಯಗೊಂಡಿತು. ಪ್ರೇಕ್ಷಕರು ಮನೆಗೆ ಹೋಗಲು ಶುರು ಮಾಡಿದರು.



Scanned with CamScanner



## ಸೂಚನೆಗಳು

ಹಂತ 1. ಕಥೆಯ ಪರಿಚಯ: (ಮಕ್ಕಳೊಂದಿಗೆ ವಿಷಯದ ಕುರಿತು ಚರ್ಚೆ, ಅವರ ಬದುಕಿನ ಅನುಭವಗಳಿಗೆ ಸಂಬಂಧಿಸಿದಂತೆ ಮತ್ತು ಮುಖಪುಟವನ್ನು ತೋರಿಸಿ, ಕಥೆಯು ಯಾವುದರ? ಬಗ್ಗೆ ಇರಬಹುದು ಎಂದು ಸ್ವಲ್ಪ ಚರ್ಚೆ ಮಾಡುವುದು)

ಹಂತ 2. ಕಥೆಯನ್ನು ನಿಮ್ಮದೇ ಮಾತುಗಳಲ್ಲಿ ಹೇಳುವುದು.

ಹಂತ 3. ಕಥೆಯನ್ನು ಓದುತ್ತ, ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳಿ, ಜೊತೆಗೆ ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು ಮುಖ್ಯವಾದ ಪದಗಳನ್ನು ವಿವರಿಸುತ್ತ ಯಕ್ಷಗಾನದ ಕಥೆಯನ್ನು ವಿವರಿಸುವ ಚಿತ್ರದ ಕಾರ್ಡ್‌ನ್ನು ಎಲ್ಲರಿಗೂ ಕಾಣುವಂತೆ ಪ್ರದರ್ಶಿಸುವುದು. ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ, ಉತ್ತರಗಳನ್ನು ಪಡೆಯುವುದು.

- ಒಂದು ಸಣ್ಣ ವೇದಿಕೆಯನ್ನು ರಚಿಸಿದ್ದರು. ಏನನ್ನು ರಚಿಸಿದ್ದರು?
- ಬಣ್ಣಬಣ್ಣದ ಉಡುಗೆ ಮತ್ತು ಮುಖವಾಡ ತೊಟ್ಟ ಕಲಾವಿದರು ವೇದಿಕೆಯ ಮೇಲೆ, ಕೆಳಗೆ ಓಡಾಡುತ್ತಿದ್ದರು. ವೇದಿಕೆಯ ಮೇಲೆ, ಕೆಳಗೆ ಯಾರು ಓಡಾಡುತ್ತಿದ್ದರು?
- ಭಾಗವತರು ಮಹಾಭಾರತದ ಒಂದು ಕಥೆಯನ್ನು ಹೇಳಲು ಆರಂಭಿಸಿದರು. ಮಹಾಭಾರತದ ಕಥೆಯನ್ನು ಹೇಳಲು ಆರಂಭಿಸಿದ್ದು ಯಾರು?
- ರಾತ್ರಿಯಾಗುತ್ತಿದ್ದಂತೆ, ಚಿಕ್ಕ ಮಕ್ಕಳು ನಿದ್ದೆ ಮಾಡಲು ಶುರುಮಾಡಿದರು. ಯಾರು ನಿದ್ದೆ ಮಾಡಲು ಶುರುಮಾಡಿದರು?

ಹಂತ 5. ಕಥೆಯ ಕೊನೆಯಲ್ಲಿ, ಗ್ರಹಿಸುವ ಮತ್ತು ನೆನಪಿಸಿಕೊಳ್ಳುವ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಪ್ರಶ್ನೆಗಳಿಗೆ ಕೆಲವು ಉದಾಹರಣೆಗಳು:

- ವೇದಿಕೆಯ ಮೇಲೆ ಯಾವ ಯಾವ ಬಣ್ಣದ ದೀಪಗಳು ಬೆಳಗುತ್ತಿದ್ದವು?
- ಮಕ್ಕಳೆಲ್ಲ ಎಲ್ಲಿಗೆ ಹೋದರು ಮತ್ತು ಎಲ್ಲಿ ಕುಳಿತರು?
- ದೊಡ್ಡವರೆಲ್ಲ ಏಕೆ ನಿಧಾನವಾಗಿ ಬಂದರು?
- ಭಾಗವತರು ಯಾವ ಕಥೆಯನ್ನು ಹೇಳಿದರು?

ಹಂತ 6. ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಸಂವೇದನೆಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು.

- ಒಂದು ನಾಟಕ ಅಥವಾ ಸಿನಿಮಾ ನೋಡಲು ಹೋಗುವಾಗ, ಮಕ್ಕಳಿಗೆ ಏನು ಅನ್ನಿಸುತ್ತದೆ ಎಂದು ನೀವು ಯೋಚಿಸುತ್ತೀರಿ?
- ಜನರಿಗೆ ಯಕ್ಷಗಾನ ಇಷ್ಟವಾಯಿತಾ? ಏಕೆ?

ಹಂತ 7. ಮಕ್ಕಳು ಕಥೆ ಕೇಳಿದ ನಂತರ ಊಹಿಸಬಹುದಾದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ವೇದಿಕೆಯ ಮೇಲೆ ಏಕೆ ದೀಪಗಳನ್ನು ಹಾಕಿದ್ದರು?
- ಮಕ್ಕಳು ಏಕೆ ನಿದ್ರೆ ಮಾಡಿದರು?
- ಕಾರ್ಯಕ್ರಮ ಯಾವಾಗ ಮುಗಿಯಿತು?
- ಭಾಗವತರು ಯಕ್ಷಗಾನದಲ್ಲಿ ಅಭಿನಯ ಮಾಡಿದ್ದಾರಾ?

ಹಂತ 8: ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಸಹಾಯ ಮಾಡುವುದು.



Scanned with CamScanner

ಚಟುವಟಿಕೆ 1


## ಬಣ್ಣ ಹಚ್ಚುವ ಸಮಯ!

### ಕಲಿಕಾ ಸಾಮಗ್ರಿಗಳು

ಅಭ್ಯಾಸ ಹಾಳೆಗಳು.

### ಸೂಚನೆಗಳು

ಅಭ್ಯಾಸ ಹಾಳೆಗಳನ್ನು ಮಕ್ಕಳಿಗೆ ಹಂಚಿ ಯಕ್ಷಗಾನದ ಕಲಾವಿದರ ಚಿತ್ರಕ್ಕೆ ಬಣ್ಣ ತುಂಬುವಂತೆ ಹೇಳುವುದು.





Scanned with CamScanner

## ಚಟುವಟಿಕೆ 2

## ಒಂದು ಪೋಸ್ಟರ್ ಮಾಡಿ!

### ಕಲಿಕಾ ಸಾಮಗ್ರಿಗಳು

ದೊಡ್ಡ ಚಾರ್ಟ್ ಹಾಳೆ, ಕ್ರೆಯಾನ್‌ಗಳು, ಹಳೆಯ ನಿಯತಕಾಲಿಕ/ಪತ್ರಿಕೆಗಳು

### ಸೂಚನೆಗಳು

1. ಮಕ್ಕಳಿಗೆ ಹೀಗೆ ಹೇಳುವುದು– ಶಾಲೆಯಲ್ಲಿ ಒಂದು ಹಣ್ಣಿನ ಮೇಳ ನಡೆಯುತ್ತದೆ. ಪೋಷಕರನ್ನು ಈ ಹಣ್ಣಿನ ಮೇಳಕ್ಕೆ ಬರುವಂತೆ ಆಹ್ವಾನಿಸಲು ಒಂದು ಪೋಸ್ಟರ್‌ನ್ನು ಮಕ್ಕಳ ಸಹಾಯದೊಂದಿಗೆ ತೋರಿಸಿ ಪ್ರದರ್ಶಿಸುವುದು.
2. ಚಾರ್ಟ್ ಹಾಳೆಯ ಮೇಲೆ ಬೇರೆಬೇರೆ ಹಣ್ಣುಗಳ ಚಿತ್ರವನ್ನು ಬಿಡಿಸಲು ಅವರಿಗೆ ಸಹಾಯ ಮಾಡಿ, ಅವುಗಳಿಗೆ ಬಣ್ಣ ತುಂಬಿ ಮತ್ತು ಅದನ್ನು ಆಕರ್ಷಕವಾಗಿ ಮಾಡಲು ಪ್ರಯತ್ನಿಸಲಿ.
3. ಹಳೆಯ ನಿಯತಕಾಲಿಕಗಳು ಮತ್ತು ಪತ್ರಿಕೆಗಳಿಂದ ಚಿತ್ರಗಳನ್ನು ಕತ್ತರಿಸಿ, ಅವನ್ನು ಪೋಸ್ಟರಿನ ಮೇಲೆ ಅಂಟಿಸಲು ತಿಳಿಸುವುದು.

---

## ಚಟುವಟಿಕೆ 3

## ಹೊಂದಾಣಿಕೆಯ ಚಟುವಟಿಕೆ

### ಕಲಿಕಾ ಸಾಮಗ್ರಿಗಳು

- ಸಂಖ್ಯೆಯ ಕಾರ್ಡ್‌ಗಳು
- ಬಿಂದಿಗಳು
- ಎರಡು ಬೇರೆ ಬೇರೆ ಬಣ್ಣದ, ಒಂದೇ ಗಾತ್ರದ 2 ಜೋಡಿ ಹಾಳೆಗಳು
- ಸಣ್ಣ ಎಲೆಗಳು
- ಒಂದು ಸಣ್ಣ ರೆಂಬೆ.

### ಶಿಕ್ಷಕರ ಪೂರ್ವಸಿದ್ಧತೆ

ಈ ಎಲ್ಲ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

1. ಮಕ್ಕಳಿಗೆ 1, 2, 3, 4, 5 ಅಂಕಿಯ ಕಾರ್ಡುಗಳನ್ನು ಹೇಗೆ ಒಂದರ ಕೆಳಗೆ ಒಂದು ಅಂಟಿಸುವುದು ಎಂದು ತೋರಿಸುವುದು.
2. 1 ಅಂಕಿಯ ಕಾರ್ಡಿನ ಪಕ್ಕ ಹೇಗೆ 1 ವಸ್ತುವನ್ನು ಅಂಟಿಸುವುದು ಎಂದು ತೋರಿಸುವುದು.
3. ಹಾಗೆಯೇ ಒಂದು ಮಗುವಿಗೆ 2 ವಸ್ತುಗಳನ್ನು 2 ಅಂಕಿಯ ಕಾರ್ಡಿನ ಪಕ್ಕದಲ್ಲಿ ಅಂಟಿಸಲು ಹೇಳುವುದು.
4. ಇದನ್ನು ಹಾಗೆಯೇ 3, 4 ಮತ್ತು 5 ಅಂಕಿಯ ಕಾರ್ಡುಗಳಿಗೆ ಅವರು ಮಾಡಬೇಕು.
5. ಇನ್ನುಳಿದ ಮಕ್ಕಳಿಗೆ ಇದೇ ರೀತಿಯಾಗಿ ಅಂಕಿಯ ಕಾರ್ಡುಗಳಿಗೆ ಅದರ ಅನುಗುಣವಾದ ಅಂಕಿಯ ವಸ್ತುಗಳನ್ನು ಅಂಟಿಸಲು ಹೇಳುವುದು.
6. ಮಕ್ಕಳನ್ನು ಎಚ್ಚರಿಕೆಯಿಂದ ಗಮನಿಸಿ ಅಗತ್ಯವಿದ್ದರೆ ಅವರಿಗೆ ಮಾರ್ಗದರ್ಶನ ಮಾಡುವುದು.
7. ಅವರು ಕನಿಷ್ಠ 2 ಅಂಕಿಗಳನ್ನು ಪೂರ್ಣಗೊಳಿಸಲು ಸಮರ್ಥರಾದರೆ ಮೆಚ್ಚುಗೆ ವ್ಯಕ್ತಪಡಿಸುವುದು.
8. ಇನ್ನುಳಿದಿದ್ದನ್ನು ಪೂರ್ಣಗೊಳಿಸಲು ಅವರಿಗೆ ಪ್ರೋತ್ಸಾಹಿಸುವುದು.



Scanned with CamScanner

ಚಟುವಟಿಕೆ 1

## ವೃತ್ತದೊಳಗೆ ನೃತ್ಯ ಮಾಡಿ!

### ಕಲಿಕಾ ಸಾಮಗ್ರಿಗಳು

ಸೀಮೆಸುಣ್ಣಗಳು, ಫೋನಿನಲ್ಲಿ ಸಂಗೀತ

### ಸೂಚನೆಗಳು

1. ನೆಲದ ಮೇಲೆ ದೊಡ್ಡದೊಂದು ವೃತ್ತವನ್ನು ರಚಿಸುವುದು.
2. ಎಲ್ಲ ಮಕ್ಕಳಿಗೆ ವೃತ್ತದ ಒಳಗೆ ನಿಲ್ಲುವಂತೆ ಹೇಳುವುದು. ನೀವು ಸಂಗೀತವನ್ನು ಹಾಕಿದಾಗ ಅವರೆಲ್ಲ ನೃತ್ಯ ಮಾಡಬೇಕು, ಆದರೆ ಅವರು ವೃತ್ತದ ಒಳಗೇ ಇರಬೇಕು, ಹೊರಗೆ ಹೋಗಬಾರದು.
3. ಐದಾರು ನಿಮಿಷ ಆದ ಮೇಲೆ, ಸಂಗೀತವನ್ನು ನಿಲ್ಲಿಸಿ. ಮಕ್ಕಳಿಗೆ ನೃತ್ಯ ನಿಲ್ಲಿಸಲು ಹೇಳಿ. ವೃತ್ತವನ್ನು ಚಿಕ್ಕದಾಗಿಸುವುದು.
4. ಸಂಗೀತವನ್ನು ಶುರು ಮಾಡಿ. ಮಕ್ಕಳು ಮತ್ತೆ ವೃತ್ತದ ಒಳಗೇ ನರ್ತಿಸಲಿ. ಹೀಗೆ ಐದಾರು ನಿಮಿಷದ ನಂತರ ಸಂಗೀತವನ್ನು ನಿಲ್ಲಿಸಿ, ಮತ್ತೆ ಇನ್ನೊಂದು ಚಿಕ್ಕ ವೃತ್ತವನ್ನು ಎಳೆಯಿರಿ. ಮಕ್ಕಳು ಮತ್ತೆ ಚಿಕ್ಕ ವೃತ್ತದೊಳಗೆ ನರ್ತಿಸಲು. ಹೀಗೆ ಪ್ರತಿ ಸಲ ವೃತ್ತದ ಗಾತ್ರವನ್ನು ಚಿಕ್ಕದು ಮಾಡುತ್ತ ಬನ್ನಿ. ಮಕ್ಕಳು ಒಂದಿಷ್ಟೂ ಹೊರಗೆ ಬರದಂತೆ, ವೃತ್ತದ ಒಳಗೇ ನರ್ತಿಸಲು/ಓಡಾಡಲು ಕಲಿಯಬೇಕು.
5. ನೀವು ಇದನ್ನು ವಿದ್ಯಾರ್ಥಿಗಳ ಚಿಕ್ಕ ಚಿಕ್ಕ ಗುಂಪಿನೊಂದಿಗೂ ಮಾಡಬಹುದು.

---

ಚಟುವಟಿಕೆ 2

## ಪ್ರಾಣಿಗಳ ರೇಸ್

### ಸೂಚನೆಗಳು

1. ಇಡೀ ತರಗತಿಯನ್ನು 10 ಗುಂಪುಗಳನ್ನಾಗಿ ಮಾಡಿ, ಪ್ರತಿ ಗುಂಪಿನಲ್ಲಿ 3 ವಿದ್ಯಾರ್ಥಿಗಳು ಇರಲಿ. ತರಗತಿಯ ಎರಡೂ ತುದಿಗಳಲ್ಲಿ 5 ಗುಂಪುಗಳು ನಿಂತುಕೊಳ್ಳಬೇಕು. ಪ್ರತೀ ಗುಂಪಿಗೂ ಒಂದು ಹೆಸರು ಕೊಡುವುದು.
2. ನೀವು ಕೈಯಲ್ಲಿ ಸಂಖ್ಯೆಯ ಕಾರ್ಡನ್ನು ಹಿಡಿದು, ತೋರಿಸಿದಾಗ, ಮಕ್ಕಳು ಅಷ್ಟು ಹೆಜ್ಜೆ ಮುಂದೆ ಬರಬೇಕು.
3. ಗುಂಪುಗಳು ಸಿದ್ಧವಾಗಲಿ. 1–5 ಕಾರ್ಡುಗಳನ್ನು ಮಿಶ್ರ ಮಾಡಿ, ಅದರಿಂದ ಒಂದು ಕಾರ್ಡನ್ನು ಹೊರತೆಗೆದು ಹಿಡಿಯಿರಿ. ಎರಡೂ ಕಡೆಯ ಸಾಲಿನಲ್ಲಿ ಮೊದಲು ನಿಂತ ಮಗು ಕಾರ್ಡಿನಲ್ಲಿ ತೋರಿಸಿದಷ್ಟು ಸಂಖ್ಯೆಯ ಹೆಜ್ಜೆಗಳನ್ನು ಮುಂದಿಡಲಿ.
4. ಆಮೇಲೆ ಇನ್ನೊಂದು ಕಾರ್ಡನ್ನು ಹೊರತೆಗೆದು ಹಿಡಿಯಿರಿ. ಈಗ ಎರಡೂ ಕಡೆಯ ಸಾಲಿನಲ್ಲಿ ನಿಂತ ಎರಡನೆಯ ಮಗು ಕಾರ್ಡಿನಲ್ಲಿ ತೋರಿಸಿದಷ್ಟು ಸಂಖ್ಯೆಯ ಹೆಜ್ಜೆಗಳನ್ನು ಮುಂದಿಡಲಿ.
5. ಹೀಗೆಯೇ ಒಂದರ ನಂತರ ಇನ್ನೊಂದು ಕಾರ್ಡುಗಳನ್ನು ತೋರಿಸುತ್ತ ಹೋಗಿ.
6. ಒಂದು ಗುಂಪಿನ ಮಕ್ಕಳು ಕೇಂದ್ರದಲ್ಲಿ ಹತ್ತಿರ ಬರುವವರೆಗೂ ಈ ಚಟುವಟಿಕೆ ಮುಂದುವರೆಸಿ.



Scanned with CamScanner

ಚಟುವಟಿಕೆ 1

## ಫೈರ್ ಇನ್ ದಿ ಮೌಂಟೇನ್



### ಸೂಚನೆಗಳು

1. ಫೈರ್ ಇನ್ ದಿ ಮೌಂಟೇನ್, ರನ್ ರನ್ ರನ್ ಹೇಗೆ? ಆಡುವುದು ಎಂದು ಮಕ್ಕಳಿಗೆ ತೋರಿಸುವುದು.
2. ಆಟವನ್ನು ತೋರಿಸಲು ಕೆಲವು ಮಕ್ಕಳನ್ನು ನಿಮ್ಮೊಂದಿಗೆ ಕರೆದುಕೊಳ್ಳಿ, ಗುಂಪಿಗೆ ವೃತ್ತದೊಳಗೆ ಓಡುತ್ತ ಇರಲು ಹೇಳಿ. ನೀವು ಫೈರ್ ಇನ್ ದಿ ಮೌಂಟೇನ್ ಶಿಶುಗೀತೆಯನ್ನು ಹಾಡುವುದು. 20–30 ಸೆಕೆಂಡುಗಳ ನಂತರ, ಮೂರು ಮೂರು ಮಕ್ಕಳ ಗುಂಪುಗಳನ್ನು ಮಾಡುವುದು. ಹೀಗೆ ಗುಂಪು ಮಾಡಲಾಗದೆ ಉಳಿದ' ಮಕ್ಕಳನ್ನು ಆಟದಿಂದ ಹೊರಗೆ ಕಳುಹಿಸುವುದು.
3. ಇದನ್ನು 2 ಮಕ್ಕಳ ಗುಂಪು, 4 ಮಕ್ಕಳ ಗುಂಪು, 5 ಮಕ್ಕಳ ಗುಂಪು, ಹೀಗೆ ವಿವಿಧ ಗುಂಪು ಮಾಡಿ ಆಡಿಸಿ.

ಚಟುವಟಿಕೆ 2

## ನಾನೂ ನೀನೂ ಜೋಡಿ!

### ಕಲಿಕಾ ಸಾಮಗ್ರಿಗಳು

ಒಂದು ಸಣ್ಣ ಬಾಕ್ಸಿನಲ್ಲಿ 1–5 ಸಂಖ್ಯೆಗಳನ್ನು ಬರೆದಿರುವ ಚಿಕ್ಕ ಕಾಗದದ ಚೀಟಿಗಳು.

### ಸೂಚನೆಗಳು

1. ಮಕ್ಕಳಿಗೆ ಅವರ ಕೈಯನ್ನು ಬಾಕ್ಸಿನಲ್ಲಿ ಹಾಕಿ, ಒಂದು ಸಂಖ್ಯೆಯ ಚೀಟಿಯನ್ನು ತೆಗೆದುಕೊಳ್ಳಲು ಹೇಳುವುದು.
2. ಮಕ್ಕಳು ತಾವು ತೆಗೆದುಕೊಂಡ ಚೀಟಿಯನ್ನು ಪರೀಕ್ಷಿಸಿ, ಅದರ ಮೇಲೆ ಏನು ಬರೆದಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು.
3. ಮಕ್ಕಳು ಒಂದು ವೃತ್ತದೊಳಗೆ ಓಡುವಾಗ ಸಂಗೀತವನ್ನು ಹಾಕಿ ಅಥವಾ ಚಪ್ಪಾಳೆ ತಟ್ಟುತ್ತಿರುವುದು.
4. ಚಪ್ಪಾಳೆ ತಟ್ಟುವುದನ್ನು ಅಥವಾ ಸಂಗೀತವನ್ನು ನಿಲ್ಲಿಸಿ, ನಂತರ 1–5ರ ಒಳಗಿನ ಯಾವುದಾದರೂ ಒಂದು ಸಂಖ್ಯೆಯನ್ನು ಹೇಳಿ. ಆಗ ಅದೇ ಸಂಖ್ಯೆಯನ್ನು ಹೊಂದಿರುವ ಮಕ್ಕಳು ಒಂದು ಗುಂಪು ಆಗಬೇಕು.
5. ಅವರು ತಮ್ಮ ಸಂಖ್ಯೆಯನ್ನು ಜೋರಾಗಿ ಹೇಳಬೇಕು ಮತ್ತು ಅದೇ ಸಂಖ್ಯೆಯನ್ನು ಹೊಂದಿರುವ ತಮ್ಮ ಜೊತೆಗಾರರೊಂದಿಗೆ ಹೋಲಿಸಿಕೊಳ್ಳಬೇಕು.
6. ನಂತರ ಇನ್ನೊಂದು ಸಂಖ್ಯೆಯನ್ನು ಹೇಳಬಹುದು.



Scanned with CamScanner

## ಸಂವಹನದ ವಿಧಾನಗಳು



### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 5 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು

1. Greet in Hindi (namaste)
2. Greet in English (hello)
3. Greet in Kannada (namaskara)

1. Greet in Hindi (namaste)
2. Greet in English (hello)
3. Greet in Kannada (namaskara)

1. Greet in Hindi (namaste)
2. Greet in English (hello)
3. Greet in Kannada (namaskara)

1. Greet in Urdu (aadaab)
2. Greet in Tamil (vanakkam)

1. Greet in Urdu (aadaab)
2. Greet in Tamil (vanakkam)

1. Greet in Urdu (aadaab)
2. Greet in Tamil (vanakkam)

Say
gesture
model

1. Greet in Hindi (namaste)
2. Greet in English (hello)
3. Greet in Kannada (namaskara)
4. Greet in Urdu (aadaab)
5. Greet in Tamil (vanakkam)

1. Greet in Kannada (namaskara)
2. Greet in Hindi (namaste)
3. Greet in Tamil (vanakkam)
4. Greet in English (hello)
5. Greet in Urdu (aadaab)




Scanned with CamScanner



## ಸಂವಹನದ ವಿಧಾನಗಳು

# ಸಮೂಹ ಸಂವಹನದ ವಿಧಾನಗಳು



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 9.2: ಸಮೂಹ ಸಂವಹನದ ವಿಧಾನಗಳು

### 3–4 ವರ್ಷಗಳು

1. ಒಬ್ಬರು ಇನ್ನೊಬ್ಬರೊಂದಿಗೆ ನಡೆಸುವ ಸಂಭಾಷಣೆ, ಚಿಕ್ಕ ಗುಂಪುಗಳಲ್ಲಿ ನಡೆಸುವ ಚರ್ಚೆ ಮತ್ತು ಸಮೂಹ ಸಂವಹನವೂ ಸೇರಿದಂತೆ ಸಂವಹನ ಮಾಡುವ ವಿವಿಧ ವಿಧಾನಗಳನ್ನು ಅರ್ಥ ಮಾಡಿಕೊಳ್ಳುವುದು.
2. ಪೋಷಕರಿಗೆ ಎಲ್ಲವನ್ನೂ ಹೇಳಬಹುದು ಮತ್ತು ಶಿಕ್ಷಕರು ಹೇಳುವ ಮಾಹಿತಿಯನ್ನು ನಂಬಬಹುದು ಎಂದು ಅರಿಯುವುದು.

### 4–5 ವರ್ಷಗಳು

1. ದೊಡ್ಡ ಗುಂಪಿನಲ್ಲಿರುವ ಜನರೊಂದಿಗೆ ಸಂವಹನ ಮಾಡುವ ವಿಧಾನಗಳೆಂದರೆ ಮೈಕುಗಳು, ದಿನಪತ್ರಿಕೆಗಳು, ರೇಡಿಯೋ, ಟಿವಿ ಮತ್ತು ಸಿನಿಮಾ ಮುಂತಾದವು ಎಂದು ಅರಿಯುವುದು.
2. ಮಕ್ಕಳು ಪತ್ರಿಕೆ, ರೇಡಿಯೋ ಕಾರ್ಯಕ್ರಮಗಳು ಮತ್ತು ಟಿವಿ ವಾಹಿನಿಗಳ ವಿವಿಧ ಭಾಗಗಳನ್ನು ಗುರುತಿಸಿ, ಯಾವುವು ಮಕ್ಕಳ ಕಾರ್ಯಕ್ರಮಗಳು, ಯಾವುವು ದೊಡ್ಡವರ ಕಾರ್ಯಕ್ರಮಗಳು ಎಂದು ವಿವರಿಸಬಲ್ಲವರಾಗುವುದು.

### 5–6 ವರ್ಷಗಳು

1. ಒಬ್ಬರು ಇನ್ನೊಬ್ಬರೊಂದಿಗೆ ಮತ್ತು ಗುಂಪು ಹಾಗೂ ಸಮೂಹ ಸಂವಹನದ ಒಂದು ವಿಧಾನವಾಗಿ ಮೊಬೈಲ್ ಫೋನುಗಳ ಬಳಕೆಯ ಕುರಿತು ಅರಿಯುವುದು.
2. ಫೋನುಗಳ ಮೂಲಕ ಹೇಗೆ ಮಾಹಿತಿಯನ್ನು ಹಲವಾರು ಜನರಿಗೆ ತಲುಪಿಸಬಹುದು ಎಂಬುದನ್ನು ವಿವರಿಸುವುದು.
3. ವ್ಯಕ್ತಿ–ವ್ಯಕ್ತಿಗಳ ನಡುವಿನ ಒಡನಾಟ, [illegible] ಮತ್ತು ಸಮೂಹ ಸಂವಹನದ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವುದು.
4. ತುರ್ತು ಸಂದರ್ಭಗಳಲ್ಲಿ ಫೋನನ್ನು ಹೇಗೆ ಬಳಸುವುದು ಎಂದು ಅರಿಯುವುದು.

Scanned with CamScanner

ಉಪವಿಷಯ 9.2

# ಸಮೂಹ ಸಂವಹನದ ವಿಧಾನಗಳು



## ಕಲಿಕಾ ಉದ್ದೇಶಗಳು

- ದೊಡ್ಡ ಗುಂಪಿನಲ್ಲಿರುವ ಜನರೊಂದಿಗೆ ಸಂವಹನ ಮಾಡುವ ವಿಧಾನಗಳೆಂದರೆ ಮೈಕುಗಳು, ದಿನಪತ್ರಿಕೆಗಳು, ರೇಡಿಯೋ, ಟಿವಿ ಮತ್ತು ಸಿನಿಮಾ ಮುಂತಾದವು ಎಂದು ಅರಿಯುವುದು.
- ಮಕ್ಕಳು ಪತ್ರಿಕೆ, ರೇಡಿಯೋ ಕಾರ್ಯಕ್ರಮಗಳು ಮತ್ತು ಟಿವಿ ವಾಹಿನಿಗಳ ವಿವಿಧ ಭಾಗಗಳನ್ನು ಗುರುತಿಸಿ, ಯಾವುವು ಮಕ್ಕಳ ಕಾರ್ಯಕ್ರಮಗಳು, ಯಾವುವು ದೊಡ್ಡವರ ಕಾರ್ಯಕ್ರಮಗಳು ಎಂದು ವಿವರಿಸಬಲ್ಲವರಾಗುವುದು.



Scanned with CamScanner

ಸಂಭಾಷಣೆ 1

## ಒಬ್ಬರು ಇನ್ನೊಬ್ಬರೊಂದಿಗೆ ಸಂಭಾಷಿಸುವುದು



### ಕಲಿಕಾ ಫಲಿತಗಳು

- ನಾವು ಸಂವಹನ ಮಾಡುವ ವಿವಿಧ ಬಗೆಯ ಸಂದೇಶಗಳಲ್ಲಿ ವ್ಯತ್ಯಾಸವಿದೆ ಎಂಬುದನ್ನು ಅರಿಯುವುದು.

### ಸೂಚನೆಗಳು

#### ಹಂತ 1

ಜನರು ಸಂವಹನ ಮಾಡುವ ವಿವಿಧ ವಿಧಾನಗಳನ್ನು ಮತ್ತೆ ನೆನಪಿಸಿಕೊಳ್ಳುವುದು – ಮಾತನಾಡಬಹುದು, ಹಾವಭಾವದ ಮೂಲಕ ತಿಳಿಸಬಹುದು, ಮುಖಭಾವದ ಮೂಲಕ ಅಭಿವ್ಯಕ್ತಿಸಬಹುದು, ಪುಟ್ಟ ಕಂದಮ್ಮಗಳು ತಮ್ಮನ್ನು ಆರೈಕೆ ಮಾಡುವವರ ಗಮನ ಸೆಳೆಯಲು ಹೇಗೆ? ಅಳುತ್ತವೆ, ಪ್ರಾಣಿಗಳು ತಮ್ಮದೇ ವಿಶೇಷ ಸ್ವರಗಳನ್ನು ಹೇಗೆ ಮಾಡುತ್ತವೆ? ಇತ್ಯಾದಿ..

**ಎರಡು ಮಾಹಿತಿಗಳನ್ನು ವಿವರಿಸುವುದು:**

1. ನಾನು ಇವತ್ತು ಸಂಜೆ ರಘುವಿನ ಮನೆಗೆ ಹೋಗುತ್ತೇನೆ.
2. ನಾಳೆ ರಜೆ ಇದೆ.

ನಾನು ರಘುವಿನ ಮನೆಗೆ ಹೋಗಬೇಕು, ಆದರೆ ನಾನು ಸುರೇಶನಿಗೆ ಫೋನು ಮಾಡಿ, ನಾನು ಇವತ್ತು ಸಂಜೆ ರಘುವಿನ ಮನೆಗೆ ಹೋಗುತ್ತೇನೆ ಎಂದು ಹೇಳುತ್ತೇನೆ. ನಾನು ಏನು ತಪ್ಪು ಮಾಡಿದೆ? ನಾನು ಈ ಮಾಹಿತಿಯನ್ನು ಯಾರಿಗೆ ಹೇಳಬೇಕು? ರಘುವಿಗೋ ಅಥವಾ ಸುರೇಶನಿಗೋ? ರಘುವಿಗೆ ಹೇಳದೆಯೇ, ನಾನು ಇವತ್ತು ಸಂಜೆ ಅವನ ಮನೆಗೆ ಹೋದರೆ ಏನಾಗುತ್ತದೆ? ಅವನು ಮನೆಯಲ್ಲಿ ಇರುತ್ತಾನೆಯೇ?

ಒಂದು ಮಗುವಿಗೆ ಹತ್ತಿರ ಕರೆದು, ಅವಳ ಕಿವಿಯಲ್ಲಿ, 'ನಾಳೆ ರಜೆ ಇದೆ' ಎಂದು ಪಿಸುಗುಟ್ಟಿ, ನಾನು ಅವಳಿಗೆ ಹೇಳಿದ್ದು ನಿಮಗೆ ಕೇಳಿಸಿತೆ? ಎಂದು ಉಳಿದವರಿಗೆ ಕೇಳುವುದು. ನಾನು ಏನು ಹೇಳಿದೆ ಎಂದು ನೀವು ಭಾವಿಸುತ್ತೀರಿ? ಮಕ್ಕಳು, 'ನೀವು ಅವಳ ಮನೆಗೆ ಹೋಗುತ್ತಿದ್ದೀರಿ!' ಎಂದು ಹೇಳಬಹುದು. ನೀವು 'ನಾಳೆ ರಜೆ ಇದೆ' ಎಂಬುದನ್ನು ಹೇಳಿದೆ ಎಂದು ಮಕ್ಕಳಿಗೆ ವಿವರಿಸುವುದು.

ನಾನು ಒಂದೇ ಒಂದು ಮಗುವಿಗೆ ನಾಳೆ ರಜೆ ಇದೆ ಎಂದು ಹೇಳಿದ್ದರೆ, ಉಳಿದ ಎಲ್ಲರಿಗೂ ನಾಳೆ ಶಾಲೆಗೆ ರಜೆ ಇದೆ ಎಂಬುದು ಗೊತ್ತಾಗುತ್ತಿತ್ತೇ? ಎಂದು ಕೇಳುವುದು. ಮಕ್ಕಳು ಪ್ರತಿಕ್ರಿಯೆ ನೀಡಲು ಆಸ್ಪದ ಕೊಡುವುದು. 'ನಾಳೆ ರಜೆ ಇದೆ ಎಂದು ಗೊತ್ತಿರುವ ಮಗು, (ಮಗುವಿನ ಹೆಸರು ಹೇಳಿ), ಶಾಲೆಗೆ ಬರುವುದಿಲ್ಲ'.

#### ಹಂತ 2

ಈ ಮಾಹಿತಿ ಎರಡು ರೀತಿಯದು ಎಂಬುದನ್ನು ವಿವರಿಸುವುದು.

- ಒಂದನೇ ಮಾಹಿತಿ ಎಂದರೆ ನೀವು ಒಬ್ಬರು ಅಥವಾ ಇಬ್ಬರಿಗೆ ಹೇಳಬೇಕಾಗಿರುವುದು, ಉದಾಹರಣೆಗೆ ರಘುವಿಗೆ ನೀವು ಅವನ ಮನೆಗೆ ಹೋಗುತ್ತಿದ್ದೀರೆಂದು ಹೇಳುವುದು.
- ಇನ್ನೊಂದು ಎಂದರೆ ನೀವು ಸಾಮೂಹಿಕವಾಗಿ ಹೇಳುವ ಅಗತ್ಯವಿರುವುದು, ಉದಾಹರಣೆಗೆ, ನಾಳೆ ಶಾಲೆಗೆ ರಜೆ ಎಂಬುದು ಎಲ್ಲ ಮಕ್ಕಳಿಗೂ ಗೊತ್ತಾಗಬೇಕಾಗಿದೆ.

**ಈಗ ಮೇಲಿನ ಮಾಹಿತಿಗಳಲ್ಲಿ ಮೊದಲ ಮಾಹಿತಿಯನ್ನು ಯಾರಿಗೆ ಹೇಳಬೇಕು? ಮತ್ತು ಎರಡನೇ ಮಾಹಿತಿಯನ್ನು ಯಾರಿಗೆ ಹೇಳಬೇಕು? ಎಂದು ಮಕ್ಕಳಿಗೆ ಕೇಳಿ ಅವರಿಂದ ಪ್ರತಿಕ್ರಿಯೆಗಳನ್ನು ಪಡೆಯುವುದು.**



Scanned with CamScanner

## ಹಂತ 3

ಕೆಲವರಿಗೆ ಮಾತ್ರ ಹೇಳುವ ಮಾಹಿತಿ ಮತ್ತು ಸಾಮೂಹಿಕವಾಗಿ ಹೇಳುವ ಮಾಹಿತಿಯ ಉದಾಹರಣೆಗಳು:

ಕೆಳಗೆ ನೀಡಿರುವ ಪ್ರತಿ ಸನ್ನಿವೇಶವನ್ನು ನೀಡಿ, ಇದನ್ನು ಯಾರೆಲ್ಲ ಕೇಳಿಸಿಕೊಳ್ಳಬೇಕು ಎಂದು ಮಕ್ಕಳನ್ನು ಕೇಳುವುದು. ಏಕೆ? ಎಂಬ ಪ್ರಶ್ನೆಯನ್ನೂ ಕೇಳುವುದು.

- ಈಗ ಊಟದ ಸಮಯ – ಎಲ್ಲರೂ ಈಗ ಹೋಗಿ, ಕೈಗಳನ್ನು ತೊಳೆದುಕೊಳ್ಳಿ.
- ನನಗೆ ಹಸಿವೆಯಾಗುತ್ತಿದೆ – ಏನಾದರೂ ತಿನ್ನಲು ಸಿಗುತ್ತದೆಯೇ?
- ತರಗತಿಯ ಎಲ್ಲ ಮಕ್ಕಳು ಸ್ವಲ್ಪ ಬೇಗ ಬನ್ನಿ – ನಾಳೆ ನಾವು ಹೊರ ಸಂಚಾರ ಹೋಗೋಣ.
- ದಯವಿಟ್ಟು ಅಷ್ಟು ಜೋರಾಗಿ ಗಲಾಟೆ ಮಾಡುವುದನ್ನು ನಿಲ್ಲಿಸಿ – ಪಕ್ಕದ ತರಗತಿಯ ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ.





Scanned with CamScanner

## ಸಂಭಾಷಣೆ 2

# ಸಮೂಹ ಸಂವಹನದ ವಿಧಾನಗಳು




### ಕಲಿಕಾ ಫಲಿತಗಳು

- ಸಮೂಹ ಸಂವಹನದ ವಿವಿಧ ವಿಧಾನಗಳನ್ನು ಅರ್ಥ ಮಾಡಿಕೊಳ್ಳುವುದು.

### ಕಲಿಕಾ ಸಾಮಗ್ರಿಗಳು

ಪೋಸ್ಟರ್ P9.2.1.




### ಶಿಕ್ಷಕರ ಪೂರ್ವಸಿದ್ಧತೆ

ತರಗತಿಗೆ ಕೊಡಲು ಎಲ್ಲ ಮಿಂಚುಪಟ್ಟಿಗಳನ್ನೂ ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1**

ಮೊದಲಿನ ಸಂಭಾಷಣೆಯನ್ನು ಪುನರಾವಲೋಕಿಸುವುದು.

ಹಿಂದಿನ ಮಾಹಿತಿಗೆ ಮರಳಿ ಹೋಗಿ. ನಾಳೆ ರಜೆ ಎಂದು ಶಿಕ್ಷಕರು ಮಕ್ಕಳಿಗೆ ಹೇಳುವ ಅತ್ಯುತ್ತಮ ವಿಧಾನ ಯಾವುದು? ಶಿಕ್ಷಕಿಯು ತರಗತಿಯಲ್ಲಿ ಜೋರಾಗಿ ಹೇಳಬಹುದು ಅಥವಾ ಮಕ್ಕಳ ಮನೆಗೆ ಒಂದು ಟಿಪ್ಪಣಿಯನ್ನು ಬರೆದು ಕಳುಹಿಸಹುದು. ನಾಳೆ ರಜೆ ಎಂದು ಎಲ್ಲರಿಗೂ ಹೇಳಲು ನಾವು ಬಯಸಿದ್ದೇವೆ ಎಂದು ಊಹಿಸಿ – ಬರೀ ಶಾಲೆ ಮಾತ್ರವಲ್ಲ, ಬೇರೆ ಎಲ್ಲರಿಗೂ ಕೂಡ. ಆಗ ಬರೀ ಶಾಲೆಯಲ್ಲಿ ಪ್ರಕಟಿಸಿದರೆ ಸಾಕೆ? ಏಕೆ ಇಲ್ಲ? ಎಲ್ಲರಿಗೂ ನಾವು ಹೇಗೆ ಹೇಳಬಹುದು? ವಿದ್ಯಾರ್ಥಿಗಳು ಅವರದೇ ಒಂದಿಷ್ಟು ಉತ್ತರಗಳನ್ನು ಹೇಳಲು ಅಸ್ಪದ ನೀಡುವುದು. ಚರ್ಚೆಯ ಕೊನೆಯಲ್ಲಿ ಉತ್ತರಗಳನ್ನು ಸಾರಾಂಶೀಕರಿಸಿ ಮತ್ತು ವಿದ್ಯಾರ್ಥಿಗಳು ಹೇಳದೇ ಬಿಟ್ಟಿರುವ ಯಾವುದಾದರೂ ವಿಧಾನವಿದ್ದರೆ ಅದನ್ನು ನೀವು ಹೇಳುವುದು.

**ಹಂತ 2**

ಸಮೂಹ ಸಂವಹನದ ವಿವಿಧ ವಿಧಾನಗಳನ್ನು ಚರ್ಚೆ ಮಾಡುವುದು.

ಸಂವಹನದ ಕುರಿತಾಗಿ ಇರುವ ಮಿಂಚುಪಟ್ಟಿಗಳನ್ನು ಬಳಸಿ. ಪ್ರತಿಯೊಂದು ಸನ್ನಿವೇಶದಲ್ಲಿಯೂ ಏನು ನಡೆಯುತ್ತಿದೆ ಎಂಬುದನ್ನು ಚರ್ಚಿಸಿ. ಮಕ್ಕಳಿಗೆ ಈ ಎಲ್ಲ ಸಂವಹನದ ವಿಧಾನಗಳು ಗೊತ್ತಿವೆಯೇ? ಎಂದು ಕೇಳುವುದು. ಮತ್ತು ಯಾವ ಬಗೆಯ ಮಾಹಿತಿಯನ್ನು ಆ ಪ್ರತಿಯೊಂದು ವಿಧಾನದಲ್ಲಿ ನೀಡಬಹುದು? ಎಂಬುದನ್ನು ಚರ್ಚಿಸುವುದು.

**ಹಂತ 3**

ವಿವಿಧ ಸಂದೇಶಗಳು ಮತ್ತು ಸಂವಹನದ ವಿಧಾನಗಳ ಉದಾಹರಣೆಗಳು.

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಹರಡಿ, ಇವುಗಳಿಗೆ ಬಳಸಬಹುದಾದ ಸೂಕ್ತವಾದ ಮಾಧ್ಯಮವನ್ನು ಆಯ್ಕೆ ಮಾಡಲು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ವಿವರಿಸಲು ಬಿಡುವುದು. ಆಯ್ಕೆ ಮಾಡಿಕೊಳ್ಳಲು ಅವರದೇ ಸೂಕ್ತ ಕಾರಣಗಳು ಇರಬಹುದು, ಆದ್ದರಿಂದ ಅವರ ವಿವರಣೆಯ ಮೇಲೆ ಗಮನವಿಡುವುದು.

- ಬೆಳಗಿನ ಪ್ರಾರ್ಥನೆ
- ಬೆಳಗಿನ ಸುದ್ದಿ
- ಸಿನಿಮಾ
- ಒಂದು ಧಾರ್ಮಿಕ ಭಜನೆ/ಪ್ರಾರ್ಥನೆ
- ಮಕ್ಕಳ ಕಾರ್ಟೂನ್‌ಗಳು
- ಸಿನಿಮಾ ಹಾಡುಗಳು



Scanned with CamScanner

ಸಂಭಾಷಣೆ 3

## ಮಾಹಿತಿ ನೀಡುವವರು



### ಕಲಿಕಾ ಫಲಿತಗಳು

- ಪತ್ರಿಕೆ, ರೇಡಿಯೋ ಕಾರ್ಯಕ್ರಮಗಳು ಮತ್ತು ಟಿವಿ ವಾಹಿನಿಗಳ ವಿವಿಧ ಭಾಗಗಳನ್ನು ಗುರುತಿಸಿ, ಮಕ್ಕಳ ಕಾರ್ಯಕ್ರಮಗಳು ಯಾವುವು? ದೊಡ್ಡವರ ಕಾರ್ಯಕ್ರಮಗಳು ಯಾವುವು? ಎಂದು ಮಕ್ಕಳು ವಿವರಿಸಬಲ್ಲರು.

### ಕಲಿಕಾ ಸಾಮಗ್ರಿಗಳು

- ಮೊಬೈಲ್ ಫೋನಿನಲ್ಲಿ ರೇಡಿಯೋ/ಟ್ರಾನ್ಸಿಸ್ಟರ್
- 2–3 ಬೇರೆ ಬೇರೆ ಭಾಷೆಗಳ ಪತ್ರಿಕೆಗಳು (ಕನ್ನಡ, ಇಂಗ್ಲೀಷ್ ಮತ್ತು ಬೇರೆ ಯಾವುದಾದರೂ ಭಾಷೆ)

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಸಾಮಗ್ರಿಗಳನ್ನು ತರಗತಿಗೆ ಕೊಡಲು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1**

ನಾವು ಹಲವಾರು ಮೂಲಗಳಿಂದ ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಿದ್ದರೂ, ಕೆಲವೊಮ್ಮೆ ಸುಮ್ಮನೆ ಯಾರನ್ನೋ ಕೇಳುವುದರ ಬದಲಿಗೆ, ಆ ವಿಷಯದ ಬಗ್ಗೆ ಗೊತ್ತಿರುವ ಜನರನ್ನು ಕೇಳುವುದು ಒಳ್ಳೆಯದು ಎಂಬುದನ್ನು ವಿದ್ಯಾರ್ಥಿಗಳಿಗೆ ವಿವರಿಸುವುದು. ನೀವು ಮಾಹಿತಿಯನ್ನು ಪಡೆಯಬಹುದಾದ ವಿವಿಧ ಬಗೆಗಳು ಯಾವುವು? ಮಕ್ಕಳಿಗೆ ಪಟ್ಟಿ ಮಾಡಲು ಅವಕಾಶ ನೀಡುವುದು.

ದಿನಪತ್ರಿಕೆಗಳು, ರೇಡಿಯೋ ಮತ್ತು ಟಿವಿಗಳಲ್ಲಿ ನೀವು ವಿಶೇಷ ಮಾಹಿತಿಗಳನ್ನು ಪಡೆಯುವಂತಹ ವಿಶೇಷ ವಿಭಾಗಗಳು ಇರುತ್ತವೆ ಎಂಬುದನ್ನು ವಿವರಿಸುವುದು.

**ಹಂತ 2**

ತರಗತಿಗೆ ಒಂದು ದಿನಪತ್ರಿಕೆಯನ್ನು ತಂದು ಸುದ್ದಿ, ಕ್ರೀಡೆ ಹಾಗೂ ಮನೋರಂಜನೆಯ ಕುರಿತು ಇರುವ ವಿವಿಧ ಪುಟಗಳನ್ನು ತೋರಿಸುವುದು. ಎರಡು ಬೇರೆ ಭಾಷೆಗಳ ದಿನಪತ್ರಿಕೆಗಳನ್ನು ತಂದು, ಹೇಗೆ ಒಂದೇ ಸುದ್ದಿಯನ್ನು ಎರಡು ಬೇರೆ ಭಾಷೆಗಳಲ್ಲಿ ಕೊಟ್ಟಿದ್ದಾರೆ ಎಂಬುದನ್ನು ವಿವರಿಸುವುದು. ಒಂದು ಟ್ರಾನ್ಸಿಸ್ಟರ್ ಅನ್ನು ತರಗತಿಗೆ ತಂದು ಮಾಹಿತಿಗೆ ಅಥವಾ ಮನರಂಜನೆಗೆ, ಬೇರೆ ಬೇರೆ ಭಾಷೆಗಳಿಗೆ ಅದರಲ್ಲಿರುವ ಗುಂಡಿ/ನಾಬ್‌ಗಳನ್ನು ಹೇಗೆ? ತಿರುಗಿಸಬೇಕು ಎಂಬುದನ್ನು ತೋರಿಸುವುದು.

**ಹಂತ 3**

ಹತ್ತಿರದಲ್ಲಿ ಟಿವಿ ಇರುವ ಮನೆಗೆ ಎಲ್ಲ ಮಕ್ಕಳನ್ನು ಕರೆದುಕೊಂಡು ಹೋಗಿ (ಶಾಲೆಯಲ್ಲಿ ಟಿವಿ ಇಲ್ಲದಿದ್ದರೆ) ವಿವಿಧ ಪ್ರಸಾರ ವಾಹಿನಿಗಳನ್ನು ತೋರಿಸುವುದು.

ಈ ಎಲ್ಲ ಸಂದರ್ಭಗಳಲ್ಲಿ ದಿನಪತ್ರಿಕೆಯ ಮಕ್ಕಳ ಪುಟಗಳನ್ನು, ಟಿವಿಯಲ್ಲಿ ಮಕ್ಕಳ ಚಾನಲ್‌ಗಳನ್ನು ತೋರಿಸಿ, ಇವು ಮಕ್ಕಳು ನೋಡಬೇಕಾದದ್ದು ಎಂದು ವಿವರಿಸುವುದು.



Scanned with CamScanner

ಯೋಜನಾ ಕಾರ್ಯ 1

## ಸುದ್ದಿ ಎಂದರೆ ಏನು?

### ಕಲಿಕಾ ಸಾಮಗ್ರಿಗಳು

ಯಾವುದಾದರೂ ದಿನಪತ್ರಿಕೆಯ ಸುದ್ದಿ ಶೀರ್ಷಿಕೆಗಳ ತುಣುಕುಗಳು.

### ಶಿಕ್ಷಕರ ಪೂರ್ವಸಿದ್ಧತೆ

1. ದಿನಪತ್ರಿಕೆಯ ಅಥವಾ ನಿಯತಕಾಲಿಕೆಯ ಒಂದು ಪುಟವನ್ನು ಮನೆಯಿಂದ ತರಲು ಹಿಂದಿನ ದಿನವೇ ತಿಳಿಸುವುದು.
2. ಹಲವರ ಮನೆಗಳಲ್ಲಿ ದಿನಪತ್ರಿಕೆ ಇರಲಿಕ್ಕಿಲ್ಲ – ಅವರು ಕೈಗೆ ಸಿಕ್ಕ ಯಾವುದೇ ಬಗೆಯ ಮುದ್ರಿತ ಹಾಳೆಯ ತುಣುಕನ್ನು ಕಳುಹಿಸಬಹುದು – ಏನಾದರೂ ಜಾಹೀರಾತು ಕಾಗದದ ತುಣುಕುಗಳಾದರೂ ಸರಿಯೇ, ಅದನ್ನು ತರಲಿ.
3. ಕೆಲವು ಮಕ್ಕಳು ಏನನ್ನೂ ತರದೆ ಇರುವ ಸಂದರ್ಭಕ್ಕೂ ನೀವು ತಯಾರಾಗಿರಬೇಕಾಗುತ್ತದೆ. ನೀವು ಕನಿಷ್ಠ 5–6 ಸುದ್ದಿ ತುಣುಕುಗಳನ್ನು ಇಟ್ಟುಕೊಂಡಿರುವುದು.

### ಸೂಚನೆಗಳು

1. ಎಲ್ಲರೂ ಒಂದು ವೃತ್ತಾಕಾರದಲ್ಲಿ ಕುಳಿತುಕೊಳ್ಳಲಿ ಮತ್ತು ತಾವು ತಂದಿರುವ ಸುದ್ದಿಗಳ ತುಣುಕುಗಳನ್ನು ಹಂಚಿಕೊಳ್ಳಲಿ.
2. ಆ ಸುದ್ದಿಗಳ ಶೀರ್ಷಿಕೆಯ ಅಕ್ಷರಗಳ ಗಾತ್ರದ ಆಧಾರದ ಮೇಲೆ ಆ ಸುದ್ದಿ ತುಂಬಾ ಮುಖ್ಯವೇ? ಅಥವಾ ಸ್ವಲ್ಪ ಮುಖ್ಯವೇ? ಅಥವಾ ಬಹಳ ಕಡಿಮೆ ಮುಖ್ಯವೇ? ಎಂಬುದನ್ನು ಊಹಿಸಲು ಮಕ್ಕಳಿಗೆ ಹೇಳುವುದು.
3. ಪ್ರತಿಯೊಂದೂ ಸುದ್ದಿಯ ತುಣುಕನ್ನು ಚರ್ಚೆ ಮಾಡಿ, ಅವುಗಳನ್ನು ಹೇಗೆ? ಒಂದು ಚಾರ್ಟ್‌ನಲ್ಲಿ ವ್ಯವಸ್ಥಿತವಾಗಿ ಜೋಡಿಸಬಹುದು ಎಂದು ನಿರ್ಧರಿಸುವುದು.
4. ಮಕ್ಕಳಿಗೆ ಅವರೇ ಸುದ್ದಿಗಳನ್ನು ಚಾರ್ಟ್‌ನಲ್ಲಿ ಅಂಟಿಸಿ, ಅವರ ಸುದ್ದಿ ಹಾಳೆಯನ್ನು ರಚಿಸಲು ಆಸ್ಪದ ನೀಡುವುದು.



Scanned with CamScanner

ಯೋಜನಾ ಕಾರ್ಯ 2

## ಸಂಗ್ರಹಿಸಿದ ಚಿತ್ರಗಳನ್ನು ಚಿತ್ರ ಸಂಪುಟ (ಕೊಲಾಜ್) ಮಾಡುವುದು

### ಕಲಿಕಾ ಸಾಮಗ್ರಿಗಳು

- ವಿವಿಧ ಭಾಷೆಗಳ ದಿನಪತ್ರಿಕೆಗಳು, ನಿಯತಕಾಲಿಕಗಳು (ಟ್ವಿಂಕಲ್, ಮಟಾಣಿ ವಿಜಯ, ಬಾಲಮಂಗಳ ಇತ್ಯಾದಿ ಮಕ್ಕಳ ನಿಯತಕಾಲಿಕಗಳು)
- ಚಾರ್ಟ್ ಹಾಳೆ, ಅಂಟು, ಕತ್ತರಿ

### ಶಿಕ್ಷಕರ ಪೂರ್ವಸಿದ್ಧತೆ

1. ಎಲ್ಲ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.
2. ಸಂಗ್ರಹಿಸಿದ ದಿನಪತ್ರಿಕೆಗಳು ಮತ್ತು ನಿಯತಕಾಲಿಕಗಳಿಂದ ಕೆಲವು ಸಂಬಂಧಿತ ವಿಭಾಗಗಳು ಮತ್ತು ಚಿತ್ರಗಳನ್ನು ಕತ್ತರಿಸುವುದು.

### ಸೂಚನೆಗಳು

1. ಕತ್ತರಿಸಿದ ತುಣುಕುಗಳು ಮತ್ತು ಚಿತ್ರಗಳನ್ನು ಮಕ್ಕಳಿಗೆ ಹಂಚುವುದು.
2. ಅವರ ತರಗತಿಗೆ ಬಂದಿರುವವರಿಗೆ ಯಾವ ಸಂದೇಶವನ್ನು ಅವರು ತಲುಪಿಸಲು ಬಯಸಿದ್ದಾರೆ? ಎಂದು ಕೇಳುವುದು.
   ಕೆಲವು ಸಲಹೆಗಳು:
   - ತರಗತಿಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಪ್ರತಿಯೊಬ್ಬರೂ ಹೇಳುವುದನ್ನು ಆಲಿಸುವುದು, ಸಮಯಕ್ಕೆ ಸರಿಯಾಗಿ ತಿನ್ನುವುದು, ಆಟ ಆಡಿ, ನಲಿಯುವುದು – ಈ ಬಗೆಯ ತರಗತಿಯ ನಿಯಮಗಳು.
   - ಈಗಾಗಲೇ ಚರ್ಚಿಸಿರುವ ಪರಿಸರಕ್ಕೆ ಸಂಬಂಧಿಸಿದ ವಿಚಾರಗಳು – ಕಸವನ್ನು ಕಸದ ಬುಟ್ಟಿಯಲ್ಲಿಯೇ ಹಾಕಿ, ಕೆರೆ, ನದಿ, ಬಾವಿ ಇತ್ಯಾದಿ ನೀರಿನ ಸ್ಥಳಗಳಲ್ಲಿ ಬಿಸಾಡದಿರುವುದು; ಹೆಚ್ಚು ಮರಗಳನ್ನು ನೆಡುವುದು ಇತ್ಯಾದಿ.
   - ಆಹಾರದ ಅಭ್ಯಾಸಗಳು.
3. ಹೀಗೆ ಆಯ್ಕೆ ಮಾಡಿಕೊಂಡ ಸಂದೇಶವನ್ನು ಅರ್ಥಪೂರ್ಣ ರೀತಿಯಲ್ಲಿ ಸಂವಹನ ಮಾಡುವಂತೆ ಸಾಮಗ್ರಿಗಳಿಂದ ಒಂದು ಕೊಲಾಜ್ ಮಾಡುವುದು.
4. ಮಕ್ಕಳ ಕಣ್ಣಿನ ಮಟ್ಟಕ್ಕೆ ಇರುವಂತೆ ಕೊಲಾಜ್ ಅನ್ನು ಸ್ವಲ್ಪ ದಿನ ತರಗತಿಯಲ್ಲಿ ಪ್ರದರ್ಶಿಸುವುದು.
5. ಒಂದು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಮಕ್ಕಳಿಗೆ ಅಭಿನಂದಿಸುವುದು.



Scanned with CamScanner

# ಶಿಶುಗೀತೆಯ ಸೂಚನೆಗಳು

## ಕಲಿಕಾ ಫಲಿತಗಳು

'ಜಾಣರಾಗಲು ಬೇಕು' ಮತ್ತು "Every night as I go to sleep" ಎಂಬ ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯದೊಂದಿಗೆ ಹಾಡಲು ಮಕ್ಕಳು ಸಮರ್ಥರಾಗುವುದು.

## ಶಿಕ್ಷಕರ ಪೂರ್ವಸಿದ್ಧತೆ

'ಜಾಣರಾಗಲು ಬೇಕು' ಮತ್ತು "Every night as I go to sleep" ಎಂಬ ಶಿಶುಗೀತೆಗಳನ್ನು ಮತ್ತು ಅದರೊಂದಿಗೆ ಮಾಡಬೇಕಿರುವ ಸೂಕ್ತ ಹಾವಭಾವ ಅಥವಾ ಅಭಿನಯವನ್ನು ತಿಳಿದುಕೊಳ್ಳುವುದು.

## ಸೂಚನೆಗಳು

1. 'ಜಾಣರಾಗಲು ಬೇಕು' ಮತ್ತು "Every night as I go to sleep" ಎಂಬ ಶಿಶುಗೀತೆಗಳನ್ನು ಪರಿಚಯಿಸಿ, ಅದು ಯಾವುದರ? ಕುರಿತಾಗಿದೆ ಎಂಬುದನ್ನು ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ, ಧ್ವನಿಯ ಏರಿಳಿತ ಮತ್ತು ಅಭಿವ್ಯಕ್ತಿಯೊಂದಿಗೆ ಪೂರ್ಣವಾಗಿ ಹೇಳುವುದು. ಮಕ್ಕಳು ಗಮನವಿಟ್ಟು ಆಲಿಸಲಿ.
3. ನಂತರ ಮಕ್ಕಳಿಗೆ ನೀವು ಒಂದು ಸಾಲನ್ನು ಹೇಳಿದ ನಂತರ ಪುನರಾವರ್ತನೆ ಮಾಡಲು ಹೇಳಿ, ಚಿತ್ರವನ್ನು ತೋರಿಸುತ್ತ ಪ್ರತಿ ಸಾಲಿನ ಅರ್ಥವನ್ನು ವಿವರಿಸುವುದು.
4. ಆ ಸಾಲುಗಳೊಂದಿಗೆ ಮಾಡಬೇಕಿರುವ ಅಭಿನಯವನ್ನು ತೋರಿಸಿ, ಮಕ್ಕಳಿಗೆ ನಿಮ್ಮಂತೆಯೇ ಮಾಡಲು ಹೇಳುವುದು.
5. ಈಗ ಮಕ್ಕಳು ನಿಮ್ಮೊಂದಿಗೆ ಹಾಡುತ್ತ, ನಿಮ್ಮಂತೆಯೇ ಅಭಿನಯವನ್ನು ಮಾಡಲಿ.
6. ಮಕ್ಕಳಿಗೆ ಒಬ್ಬೊಬ್ಬರೇ ಅಥವಾ ಗುಂಪಿನಲ್ಲಿ ಅವರಾಗಿಯೇ ಹಾಡಲು ಪ್ರೋತ್ಸಾಹಿಸುವುದು.



Scanned with CamScanner


ಶಿಶುಗೀತೆ 1

## ಜಾಣರಾಗಲು ಬೇಕು

ಜಾಣರಾಗಲು ಬೇಕು
ಜಾಣರಾಗಲು ಬೇಕು
ನಮಗೆ ಹಲವು ವಿಚಾರ
ಅದಕಾಗಿ ಕೇಳುವೆ ನಾ
ರೇಡಿಯೋ ವಾರ್ತಾ ಪ್ರಸಾರ

ದಿನಪತ್ರಿಕೆ ಓದಿ ನಾ
ತಿಳಿವೆ ಸುತ್ತಲ ಸುದ್ದಿ ಸಮಾಚಾರ
ದೂರದರ್ಶನ ನೋಡಿ ನಾ
ಕಾಣುವೆ ಘಟನೆಯ ವಿಚಾರ

ಭಿತ್ತಿಪತ್ರವ ನೋಡಿ ನಾ
ಅರಿವೆ ವಿಧವಿಧ ಪ್ರಚಾರ
ಮೊಬೈಲನಿಂದ ನೀಡುವೆ ನಾ
ದೂರದೂರಕ್ಕೆ ಕ್ಷೇಮ ಸಮಾಚಾರ



ಶಿಶುಗೀತೆ 2

## Every night as I go to sleep

Every night as I go to sleep
Mummy reads me a story book
stories about birds and bees
Stories about the kings and queens
And when at last I go to sleep
they come and meet me in my dreams





Scanned with CamScanner

## ಸೋಮುವಿನ ಸಂದೇಶ




### ಕಲಿಕಾ ಫಲಿತಗಳು

ಜನರು ಒಂದು ಗುಂಪಿನಲ್ಲಿ ಒಂದೆಡೆ ಸೇರಿದ್ದಾಗ ಅವರೊಂದಿಗೆ ಸಂವಹನ ಮಾಡಲು ವಿವಿಧ ವಿಧಾನಗಳಿವೆ ಎಂಬುವದನ್ನು ವಿದ್ಯಾರ್ಥಿಗಳು ಕಲಿಯುತ್ತಾರೆ.

### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ



### ಕಥೆಯ ಸಂಕ್ಷಿಪ್ತ ರೂಪ

**ಸೋಮುವಿನ ಸಂದೇಶ**

ಹಳ್ಳಿಯಲ್ಲಿ ಸಾಕಷ್ಟು ಜನರು ಒಂದು ಸಭೆಗಾಗಿ ಸೇರಿದ್ದರು. ಮುಖ್ಯ ಅತಿಥಿಗಳು ಕೆಲವೇ ನಿಮಿಷಗಳಲ್ಲಿ ಆಗಮಿಸಲಿದ್ದರು. ಮುಖ್ಯ ಅತಿಥಿಗಳು ಹೋದ ನಂತರ ಎಲ್ಲರಿಗೂ ಊಟ ಬಡಿಸಲಾಗುತ್ತದೆ ಎಂದು ಸೇರಿದ್ದ ಜನರಿಗೆ ತಿಳಿಸುವಂತೆ ಪಂಚಾಯಿತಿ ಅಧ್ಯಕ್ಷರು ಸೋಮುವಿಗೆ ಹೇಳಿದರು. ಸೋಮು ವೇದಿಕೆಯನ್ನೇರಿ, ಇನ್ನೇನು ಹೇಳಬೇಕು ಎನ್ನುವಷ್ಟರಲ್ಲಿ ಮುಖ್ಯ ಅತಿಥಿಗಳಾಗಿದ್ದ ಮಂತ್ರಿಗಳನ್ನು ಕರೆದುಕೊಂಡು ಬರುತ್ತಿದ್ದ ಹೆಲಿಕಾಪ್ಟರ್ ಬಂದಿತು. ಅದು ಜೋರಾಗಿ ಸದ್ದು ಮಾಡುತ್ತ ತಲೆ ಮೇಲೆ ಹಾರುತ್ತಿದ್ದಾಗ, ಸೋಮು ವೇದಿಕೆಯನ್ನೇರಿ ಏನು ಹೇಳಿದ ಎನ್ನುವುದು ಯಾರಿಗೂ ಕೇಳಲೇ ಇಲ್ಲ. ಸೋಮು ಧ್ವನಿವರ್ಧಕ ಬಳಸಿಕೊಂಡು ಹೇಳೋಣ ಎಂದು ಮೈಕ್ ತೆಗೆದುಕೊಂಡರೆ, ಅದು ಕೂssss.... ಎಂದು ಸದ್ದು ಮಾಡಿತು. ಅವನು ಏನು ಹೇಳಿದ್ದು ಎಂದು ಯಾರಿಗೂ? ಗೊತ್ತಾಗಲಿಲ್ಲ. ಸರಿ, ಹಿಂದೆ ಇದ್ದ ದೊಡ್ಡ ತೆರೆಯ ಮೇಲೆ ತೋರಿಸೋಣ ಎಂದು ಪ್ರಯತ್ನಿಸಿದ. ಆದರೆ ಜನರೆಲ್ಲ ಹೆಲಿಕಾಪ್ಟರ್ ಆಕಾಶದಿಂದ ಕೆಳಗೆ ಇಳಿಯುವುದನ್ನು ನೋಡುವುದರಲ್ಲೇ ಮಗ್ನರಾಗಿದ್ದರು. ಏನು ಮಾಡಬೇಕೆಂದು ಸೋಮುವಿಗೆ ಹೊಳೆಯಲಿಲ್ಲ.

ಕೆಲವು ಕ್ಷಣದಲ್ಲಿ ಅವನಿಗೊಂದು ವಿಚಾರ ಹೊಳೆಯಿತು. ಅವನು ಮೊಬೈಲ್ ವಿಡಿಯೋ ಕ್ಯಾಮರಾ ತೆಗೆದುಕೊಂಡು, ಜನರ ಮಧ್ಯೆ ಹೋಗಿ, 'ಫೋಟೋ ಫೋಟೋ... ದಯವಿಟ್ಟು ಫೋಟೋಗೆ ನಿಲ್ಲಿ, ಫೋಟೋ ತೆಗೀತೀನಿ' ಎಂದ. ಜನರೆಲ್ಲ ತಟ್ಟನೆ ಅವನತ್ತ ತಿರುಗಿ, ಅವನ ಹತ್ತಿರಕ್ಕೆ ಬರತೊಡಗಿದರು. ಈಗ ಜನರ ಗಮನವೆಲ್ಲ ಅವನತ್ತ ಹೊರಳಿತು! ಫೋಟೋ ತೆಗೆಯುತ್ತಲೇ, ಅವರಿಗೆ ಅತಿಥಿಗಳು ಹೋದಮೇಲೆ ಊಟ ಇದೆ ಎಂಬ ಸಂದೇಶ ಹೇಳಿದ. ಮತ್ತೆ ಇನ್ನೂ ಸ್ವಲ್ಪ ಮುಂದೆ ಹೋಗುತ್ತಲೇ, ಇನ್ನೊಂದಿಷ್ಟು ಜನರು ಹತ್ತಿರ ಬಂದರು. ಅವರಿಗೂ ಅದೇ ಸಂದೇಶ ಹೇಳಿದ. ಅಂತೂ ಎಲ್ಲರೂ ಅವನ ಸಂದೇಶ ಕೇಳುವವರೆಗೂ ಅವನು ಇದೇ ರೀತಿ ಗುಂಪಿನಲ್ಲಿ 'ಫೋಟೋ ತೆಗೀತೀನಿ' ಎನ್ನುತ್ತ ಹೋದ.

## ಸೋಮುವಿನ ಸಂದೇಶ



### ಸೂಚನೆಗಳು

ಹಂತ 1. ಕಥೆಯನ್ನು ಪರಿಚಯಿಸುವುದು. (ಮಕ್ಕಳೊಂದಿಗೆ ವಿಷಯದ ಕುರಿತು ಚರ್ಚಿಸಿ, ಅವರ ಬದುಕಿನ ಅನುಭವಗಳಿಗೆ ಸಂಬಂಧೀಕರಿಸುವುದು. ಮುಖಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಸ್ವಲ್ಪ ಚರ್ಚೆ ಮಾಡುವುದು)

ಹಂತ 2. ಕಥೆಯನ್ನು ನಿಮ್ಮದೇ ಮಾತುಗಳಲ್ಲಿ ಹೇಳುವುದು.

ಹಂತ 3. ಕಥೆಯನ್ನು ಓದುತ್ತ, ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳಿ, ಜೊತೆಗೆ ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು, ಮುಖ್ಯವಾದ ಪದಗಳನ್ನು ಗುರುತಿಸಿ ವಿವರಿಸುವುದು.

ಹಂತ 4. ಕಥೆಯನ್ನು ಆಧರಿಸಿ, ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು.

ಹಂತ 5. ಕಥೆಯ ಕೊನೆಯಲ್ಲಿ, ಗ್ರಹಿಕೆ ಮತ್ತು ನೆನಪಿಸಿಕೊಳ್ಳುವ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು. ನೆನಪಿಸಿಕೊಳ್ಳುವ ಪ್ರಶ್ನೆಗಳಿಗೆ ಕೆಲವು ಉದಾಹರಣೆಗಳು:

- ಸೋಮು ಏನು ಮಾಡಲು ಪ್ರಯತ್ನಿಸಿದ?
- ಅವನು ಧ್ವನಿವರ್ಧಕದಲ್ಲಿ ಹೇಳಿದರೂ ಜನರು ಏಕೆ ಆಲಿಸಲಿಲ್ಲ?
- ಪರದೆಯ ಮೇಲೆ ತೋರಿಸುವ ಆಲೋಚನೆಯೂ ಏಕೆ ಸರಿಹೋಗಲಿಲ್ಲ?
- ಕೊನೆಯಲ್ಲಿ ಯಾವ ಉಪಾಯ ಕೈಗೂಡಿತು?

ಹಂತ 6. ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಸಂವೇದನೆಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು.

- ಯಾರೂ ತನ್ನ ಮಾತನ್ನು ಆಲಿಸದೆ ಇದ್ದಾಗ ಸೋಮುವಿಗೆ ಏನು ಅನ್ನಿಸಿತು?
- ಆಮೇಲೆ ಊಟ ಕೊಡುತ್ತಾರೆ ಎಂಬುದನ್ನು ಕೇಳಿದಾಗ ಜನರಿಗೆ ಏನು ಅನ್ನಿಸಿತು ಎಂದು ನೀವು ಯೋಚಿಸುತ್ತೀರಿ?

ಹಂತ 7. ಮಕ್ಕಳು ಕಥೆ ಕೇಳಿದ ನಂತರ ಊಹಿಸಬಹುದಾದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಜನರು ಏಕೆ ಸಭೆಗೆ ಸೇರಿದ್ದರು?
- ಮುಖ್ಯ ಅತಿಥಿ ಸಭೆಗೆ ಹೇಗೆ ಬಂದರು?
- ಸೋಮುವಿಗೆ ಜನರ ಫೋಟೋ ತೆಗೆಯುವ ಉದ್ದೇಶ ಇತ್ತೇ?

ಹಂತ 8. ಮಕ್ಕಳು ತಮ್ಮದೇ ನಾಲ್ಕಾರು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಬೆಂಬಲಿಸುವುದು.



Scanned with CamScanner

## ಚಟುವಟಿಕೆ 1


# ಭಾವನೆಗಳಿಗೆ ಬಣ್ಣ ಹಚ್ಚಿ

### ಕಲಿಕಾ ಸಾಮಗ್ರಿಗಳು

ಅಭ್ಯಾಸ ಹಾಳೆ

### ಸೂಚನೆಗಳು

1. ವಿವಿಧ ಅಭಿವ್ಯಕ್ತಿಗಳಿಗೆ ಬಣ್ಣ ತುಂಬುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು.
2. ಅವರು ಬಣ್ಣ ತುಂಬುತ್ತಿರುವಂತೆ ವಿವಿಧ ಭಾವನೆಗಳ ವಿಚಾರವನ್ನು ಅವರೊಂದಿಗೆ ಚರ್ಚಿಸುವುದು.






Scanned with CamScanner

ಚಟುವಟಿಕೆ 2

## ಟಿವಿ ಪರದೆಯನ್ನು ಚಿತ್ರಗಳಿಂದ ತುಂಬುವುದು

### ಕಲಿಕಾ ಸಾಮಗ್ರಿಗಳು


ಖಾಲಿ ಟಿವಿ ಪರದೆಯ ಚಿತ್ರವಿರುವ ಅಭ್ಯಾಸಹಾಳೆ.

### ಶಿಕ್ಷಕರ ಪೂರ್ವಸಿದ್ಧತೆ

ಕಲಿಕಾ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.

### ಸೂಚನೆಗಳು

1. ಮಕ್ಕಳನ್ನು 3 ಗುಂಪುಗಳಾಗಿ ವಿಭಾಗಿಸುವುದು.
2. ಟಿವಿಯ ಪರದೆಯನ್ನು ಅವರಿಗಿಷ್ಟವಾದ ಯಾವುದೇ ಚಿತ್ರದಿಂದ ತುಂಬಿಸಲು ಹೇಳಿ. ಅದಕ್ಕೆ ಬಣ್ಣ ತುಂಬಲು ಹೇಳುವುದು.
3. ಅವರು ಬಿಡಿಸಿರುವ ಚಿತ್ರವನ್ನು ವಿವರಿಸಿ, ಅದಕ್ಕೆ ಒಂದು ಶೀರ್ಷಿಕೆ ಕೊಡುವಂತೆ ಹೇಳುವುದು.





Scanned with CamScanner

## ಚಟುವಟಿಕೆ 1

## ಕನ್ನಡಿ ಚಟುವಟಿಕೆ

### ಸೂಚನೆಗಳು

1. ತರಗತಿಯಲ್ಲಿರುವ ಎಲ್ಲ ಮಕ್ಕಳನ್ನು ಇಬ್ಬರಂತೆ ಗುಂಪು ಮಾಡುವುದು. ಸಾಧ್ಯವಿದ್ದರೆ ನಿಮ್ಮನ್ನು ಸಹಾಯಕ ಶಿಕ್ಷಕಿ ಅಥವಾ ಇನ್ನೊಂದು ವಿದ್ಯಾರ್ಥಿಯೊಂದಿಗೆ ಜೋಡಿ ಮಾಡಿಕೊಳ್ಳುವುದು.
2. ಎಲ್ಲ ಜೋಡಿಗಳು ಎರಡು ಸಾಲಿನಲ್ಲಿ ಒಬ್ಬರಿಗೊಬ್ಬರು ಮುಖ ಮಾಡಿ ನಿಲ್ಲಬೇಕು. ಪ್ರತಿ ಜೋಡಿಯಲ್ಲಿ ಒಬ್ಬ ವಿದ್ಯಾರ್ಥಿಯನ್ನು ಮುಖ್ಯ ಪಾತ್ರಧಾರಿಯಾಗಿ ಆಯ್ಕೆ ಮಾಡಿಕೊಳ್ಳುವುದು. ಈ ವಿದ್ಯಾರ್ಥಿ ಒಂದು ಅಭಿನಯ ಮಾಡಬೇಕು, ಅವರ ಜೋಡಿ ವಿದ್ಯಾರ್ಥಿ ಅದನ್ನು ಅನುಕರಿಸಬೇಕು.
3. ಅವರಿಗೆ ನೀವು ಮೊದಲು ಮಾಡಿ ತೋರಿಸಿ – ಚಪ್ಪಾಳೆ ತಟ್ಟುವುದು, ಕೈ ಅಲ್ಲಾಡಿಸುತ್ತ ತಮಾಷೆಯ ಮುಖಭಾವ ಮಾಡುವುದು, ಏನಾದರೂ ಇರಬಹುದು.
4. ಸ್ವಲ್ಪ ಹೊತ್ತಿನ ನಂತರ, ಆ ಜೋಡಿಯ ಇನ್ನೋರ್ವ ವಿದ್ಯಾರ್ಥಿಯು ಮುಖ್ಯ ಪಾತ್ರಧಾರಿಯಾಗಿ ಅಭಿನಯಿಸಲು, ಇನ್ನೊಬ್ಬರು ಅನುಕರಿಸಲಿ.

---

## ಚಟುವಟಿಕೆ 2

## ನಾನು ಹೇಳಿದಂತೆ ಮಾಡಿ, ನಾನು ಮಾಡಿದಂತೆ ಅಲ್ಲ

### ಸೂಚನೆಗಳು

1. ತರಗತಿಯಲ್ಲಿರುವ ಎಲ್ಲ ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸುವುದು. ಅವರು ನಿಮ್ಮ ಮಾತುಗಳನ್ನು ಗಮನವಿಟ್ಟು ಆಲಿಸಿ ಎಂದು ಹೇಳುವುದು. ನೀವು ಕೆಲವು ಸೂಚನೆಗಳನ್ನು ಕೊಡುತ್ತೀರಿ, ಅವರು ಪಾಲಿಸಬೇಕು.
2. ನೀವು ಸೂಚನೆಗಳಿಗಿಂತ ಬೇರೆಯಾದ ಅಭಿನಯವನ್ನು ಮಾಡಬೇಕು. ಆದರೆ ಮಕ್ಕಳು ನಿಮ್ಮ ಮೌಖಿಕ ಸೂಚನೆಗಳನ್ನು, ಅಂದರೆ ನೀವು ಹೇಳುವ ಸೂಚನೆಗಳನ್ನು ಪಾಲಿಸಬೇಕು. ನೀವು ಏನು ಮಾಡುತ್ತೀರೋ ಅದನ್ನು ಮಾಡಬಾರದು.
3. ಉದಾಹರಣೆಗೆ, ನೀವು 'ನಿಮ್ಮ ತಲೆ ತಟ್ಟಿಕೊಳ್ಳಿ' ಎಂದು ಹೇಳಬಹುದು, ಆದರೆ ನೀವು ಬೆರಳುಗಳ ನೆಟಿಕೆ ಮುರಿಯುತ್ತಿರುವಂತೆ ಅಭಿನಯಿಸಬಹುದು.
4. ಇದನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸ್ವಲ್ಪ ಸಮಯ ಬೇಕಾಗಬಹುದು, ಮೊದಲು ಒಂದೆರಡು ಸುತ್ತು ಅಭ್ಯಾಸ ಮಾಡಿಸುವುದು.



Scanned with CamScanner

ಚಟುವಟಿಕೆ 1

## ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಆಟವಾಡುವುದು



### ಕಲಿಕಾ ಸಾಮಗ್ರಿಗಳು

ದುಪ್ಪಟ್ಟಾ

### ಸೂಚನೆಗಳು

1. ನೆಲದ ಮೇಲೆ ಒಂದು ಜಟಿಲವಾದ ದಾರಿಯ ಚಿತ್ರ ಬಿಡಿಸುವುದು.
2. ಒಬ್ಬ ವಿದ್ಯಾರ್ಥಿಯ ಕಣ್ಣಿಗೆ ದುಪ್ಪಟ್ಟಾ ಕಟ್ಟಿ, ಬೇರೆ ವಿದ್ಯಾರ್ಥಿಗಳು ಜಟಿಲವಾದ ದಾರಿಯ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಲು ಆ ವಿದ್ಯಾರ್ಥಿಗೆ ಸೂಚನೆಗಳನ್ನು ಕೊಡಬೇಕು.

---

**ಚಟುವಟಿಕೆ 2**

## ರಿಲೇ ಓಟ

### ಕಲಿಕಾ ಸಾಮಗ್ರಿಗಳು

ಪೆನ್ಸಿಲ್ ಬಾಕ್ಸುಗಳು

### ಸೂಚನೆಗಳು

1. ವಿದ್ಯಾರ್ಥಿಗಳನ್ನು 6 ಚಿಕ್ಕ ಗುಂಪುಗಳಾಗಿ ವಿಂಗಡಿಸುವುದು. ಪ್ರತಿಯೊಂದು ಗುಂಪಿನಿಂದ ಇನ್ನೊಂದು ಗುಂಪಿಗೆ ಸ್ವಲ್ಪ ಅಂತರವಿರಲಿ. ಅವರು 3 ಸಾಲುಗಳಲ್ಲಿ ಒಬ್ಬರಿಗೊಬ್ಬರು ಎದಿರು ಬದಿರು ಮುಖ ಮಾಡಿ ನಿಲ್ಲಲಿ.
2. ಮುಂದಿನ ಸಾಲಿನಲ್ಲಿ ನಿಂತಿರುವ ವಿದ್ಯಾರ್ಥಿಗಳಿಗೆ ಒಂದು ಪೆನ್ಸಿಲ್ ಬಾಕ್ಸ್ ಅನ್ನು ಕೊಡಿ. ನೀವು ಹೇಳುತ್ತಿರುವಂತೆ ಅವರು ಎದುರು ಸಾಲಿನಲ್ಲಿ ನಿಂತಿರುವ ಒಂದು ಮಗುವಿಗೆ ಓಡಿಹೋಗಿ ಪೆನ್ಸಿಲ್ ಬಾಕ್ಸ್ ಕೊಡಬೇಕು ಮತ್ತು ಆ ಮಗು ಮತ್ತೆ ತನ್ನ ಎದುರು ಸಾಲಿನಲ್ಲಿ ನಿಂತಿರುವ ಮಗುವಿಗೆ ಓಡಿ ಹೋಗಿ ಪೆನ್ಸಿಲ್ ಬಾಕ್ಸ್ ಅನ್ನು ಕೊಡಬೇಕು.
3. ಯಾವ ತಂಡದಲ್ಲಿ ಕೊನೆಯ ಮಗುವು ಎದುರು ಸಾಲಿಗೆ ಪೆನ್ಸಿಲ್ ಬಾಕ್ಸ್ ಅನ್ನು ಕೊಡುತ್ತದೆಯೋ, ಅಂದರೆ ಒಂದು ತಂಡದಲ್ಲಿ ಎಲ್ಲ ಮಕ್ಕಳೂ ಎದುರುಸಾಲಿಗೆ ಪೆನ್ಸಿಲ್ ಬಾಕ್ಸ್ ಕೊಡುವುದನ್ನು ಬೇಗನೆ ಮುಗಿಸುವರೋ, ಆ ತಂಡವನ್ನು 'ಗೆದ್ದ ತಂಡ' ಎಂದು ಪ್ರಕಟಿಸುವುದು.



Scanned with CamScanner


## ಪ್ರಮುಖ ಸಂವಹನದ ವಿಧಾನಗಳು

### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು






Scanned with CamScanner



## ಸಂವಹನದ ವಿಧಾನಗಳು

# ಸಂವಹನದ ನಿಯಮಗಳು



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 9.3: 3 ಸಂವಹನದ ನಿಯಮಗಳು

### 3–4 ವರ್ಷಗಳು

1. ದಿನನಿತ್ಯದ ಶುಭಾಶಯ ಹೇಳುವುದನ್ನು ಅರ್ಥೈಸಿಕೊಂಡು ಬಳಸುವುದು.
2. ಶುಭಾಶಯ ಹೇಳುವ ವಿವಿಧ ವಿಧಾನಗಳು (ಮೌಖಿಕ ಮತ್ತು ಮೌಖಿಕವಲ್ಲದ) ಮತ್ತು ಸಭ್ಯತೆಯಿಂದ ಹೇಳುವ ಹಲೋ, ಥ್ಯಾಂಕ್ ಯು, ಸಾರಿ, ನಮಸ್ಕಾರ ಮುಂತಾದವನ್ನು ಅರಿಯುವುದು.
3. ದಿನದ ಯಾವ ಸಮಯದಲ್ಲಿ ಮತ್ತು ಯಾವ ಸಂದರ್ಭದಲ್ಲಿ ಸೂಕ್ತವಾದ ಶುಭಾಶಯ ಹೇಳುವುದನ್ನು ಅರಿತು, ವಿವರಿಸುವುದು.

### 4–5 ವರ್ಷಗಳು

1. ಹಿರಿಯರೊಂದಿಗೆ ಮಾತಾಡುವ ರೀತಿಯೂ ಸೇರಿದಂತೆ ಸಂವಹನ ಮಾಡುವಾಗ ಅನುಸರಿಸಬೇಕಾದ ನಿಯಮಗಳನ್ನು ತಿಳಿಯುವುದು.
2. ಬೈಯುವುದು ಮತ್ತು ಶಪಿಸುವುದನ್ನು ತಪ್ಪಿಸುವುದು.
3. ಬೇರೆಯವರೊಂದಿಗೆ ಸಂಭಾಷಣೆಯ ನಿಯಮಗಳನ್ನು ಪಾಲಿಸುವುದು – ಅವರಿಗೆ ಮಾತನಾಡಲು ಅವಕಾಶ ಕೊಡುವುದು ಮತ್ತು ಪ್ರತಿಕ್ರಿಯಿಸುವ ಮೊದಲು ಆಲಿಸುವುದು.
4. ಹಿರಿಯರು ಮತ್ತು ಸಹಪಾಠಿಗಳೊಂದಿಗೆ ಉಪಯೋಗಿಸುವ ವಿವಿಧ ಬಗೆಯ ಕ್ರಿಯಾಪದಗಳ ಬಳಕೆಯನ್ನು ವಿವರಿಸುವುದು.


### 5–6 ವರ್ಷಗಳು

1. [illegible]
2. [illegible]
3. [illegible]

Scanned with CamScanner

ಉಪವಿಷಯ 9.3

## ಸಂವಹನದ ನಿಯಮಗಳು



### ಕಲಿಕಾ ಉದ್ದೇಶಗಳು

- ಹಿರಿಯರೊಂದಿಗೆ ಮಾತಾಡುವ ರೀತಿಯೂ ಸೇರಿದಂತೆ ಸಂವಹನ ಮಾಡುವಾಗ ಅನುಸರಿಸಬೇಕಾದ ನಿಯಮಗಳನ್ನು ತಿಳಿಯುವುದು.
- ಬೈಯುವುದು ಮತ್ತು ಶಪಿಸುವುದನ್ನು ತಪ್ಪಿಸುವುದು.
- ಬೇರೆಯವರೊಂದಿಗೆ ಸಂಭಾಷಣೆಯ ನಿಯಮಗಳನ್ನು ಪಾಲಿಸುವುದು – ಅವರಿಗೆ ಮಾತನಾಡಲು ಆಸ್ಪದ ಕೊಡುವುದು ಮತ್ತು ಪ್ರತಿಕ್ರಿಯಿಸುವ ಮೊದಲು ಆಲಿಸುವುದು.
- ಹಿರಿಯರು ಮತ್ತು ಸಹಪಾಠಿಗಳೊಂದಿಗೆ ಉಪಯೋಗಿಸುವ ವಿವಿಧ ಬಗೆಯ ಕ್ರಿಯಾಪದಗಳ ಬಳಕೆಯನ್ನು ವಿವರಿಸುವುದು.



Scanned with CamScanner

ಸಂಭಾಷಣೆ 1

## ಗುಡ್ ಮಾರ್ನಿಂಗ್, ಗುಡ್ ಆಫ್ಟರ್‌ನೂನ್ ಮತ್ತು ಗುಡ್ ನೈಟ್

### ಕಲಿಕಾ ಫಲಿತಗಳು


- ಮಕ್ಕಳು ದಿನನಿತ್ಯದ ಶುಭಾಶಯಗಳನ್ನು ಸೂಕ್ತ ಬಳಕೆಯನ್ನು ಪುನರಾವರ್ತಿಸುತ್ತಾರೆ (ನಮಸ್ಕಾರ, ಹಲೋ, ಗುಡ್ ಮಾರ್ನಿಂಗ್/ಗುಡ್ ಆಫ್ಟರ್‌ನೂನ್/ಗುಡ್ ನೈಟ್, ಪ್ಲೀಸ್/ದಯವಿಟ್ಟು, ಥ್ಯಾಂಕ್ಯೂ /ಧನ್ಯವಾದ, ಸಾರಿ/ಕ್ಷಮಿಸು)



### ಶಿಕ್ಷಕರ ಪೂರ್ವಸಿದ್ಧತೆ

ಮಿಂಚುಪಟ್ಟಿ ಸರಣಿ: 9.3.1 – 1, 2, 3, 4

ತರಗತಿ ಶುರುವಾಗುವುದಕ್ಕಿಂತ ಮೊದಲೇ ಎಲ್ಲ ಮಿಂಚುಪಟ್ಟಿಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು.



### ಸೂಚನೆಗಳು

#### ಹಂತ 1



ಮಕ್ಕಳಿಗೆ ಇಂಗ್ಲೀಷ್‌ನಲ್ಲಿ ಮತ್ತು ಅವರ ಮಾತೃಭಾಷೆಯಲ್ಲಿ ಮೊದಲು ಶುಭಾಶಯ ಹೇಳಿ, ಆಮೇಲೆ ಅವರಿಗೆ ಕೇಳುವುದು – ಈಗ ತಾನೆ ನಾನೇನು ಮಾಡಿದೆ? ನಾವು ಬೆಳಿಗ್ಗೆ ಬಂದ ತಕ್ಷಣ ನಾನು ಏನು ಹೇಳಬೇಕು? (ಹಲೋ, ಮಕ್ಕಳೇ ಗುಡ್ ಮಾರ್ನಿಂಗ್... ನಮಸ್ಕಾರ ಮಕ್ಕಳೇ ಅಥವಾ ಶುಭೋದಯ ಮಕ್ಕಳೇ) ನೀವು ಅದಕ್ಕೆ ಹೇಗೆ ಉತ್ತರಿಸಬೇಕು?



ಇದನ್ನೇ ನಾವು ಮಧ್ಯಾಹ್ನ ಊಟವಾದ ನಂತರ ಹೇಳುತ್ತೇವೆಯೇ? ಇಲ್ಲ? ಏಕೆ ಇಲ್ಲ? ನಾನು ಆಗ ನಿಮಗೆ ಏನು ಹೇಳಬೇಕು? ನೀವು ಏನೆಂದು ಉತ್ತರಿಸಬೇಕು? (ಗುಡ್ ಆಫ್ಟರ್‌ನೂನ್)?

ಯಾರಾದರೂ ಬೈ-ಬೈ ಎಂದರೆ ನೀವು ಏನು ಅರ್ಥ ಮಾಡಿಕೊಳ್ಳುತ್ತೀರಿ? ಹಾಗೆ ಹೇಳಿದ ವ್ಯಕ್ತಿ ಏನು ಮಾಡುತ್ತಾರೆ?

ಒಬ್ಬರು ನಿಮಗೆ ಗುಡ್‌ನೈಟ್ ಹೇಳಿದರೆ ಏನಾಗುತ್ತದೆ? ಹಾಗೆ ಹೇಳಿದ ವ್ಯಕ್ತಿ ಏನು ಮಾಡಲು ಹೋಗುತ್ತಾರೆ ಎಂದು ನೀವು ಯೋಚಿಸುತ್ತೀರಿ? ಮಧ್ಯಾಹ್ನ ಒಬ್ಬರು ಮಲಗಿಕೊಳ್ಳಲು ಹೋದರೆ, ಆಗ ಅವರು ಗುಡ್‌ನೈಟ್ ಎನ್ನುತ್ತಾರೆಯೇ? ಯಾವಾಗ ನಾವು ಗುಡ್‌ನೈಟ್ ಹೇಳುತ್ತೇವೆ?

ನಾವು ಏಕೆ ಈ ಪದಗುಚ್ಛಗಳನ್ನು ಬಳಸುತ್ತೇವೆ? ಕನ್ನಡದಲ್ಲಿ ಇವುಗಳಿಗೆ ಏನು ಹೇಳುತ್ತೇವೆ? ಈ ರೀತಿಯಾಗಿ ನಾವು ಯಾರೆಲ್ಲರಿಗೆ ಶುಭಾಶಯ ಹೇಳುತ್ತೇವೆ? ಆಗ ಯಾವ ಬಗೆಯ ಹಾವಭಾವಗಳನ್ನು ಬಳಸುತ್ತೇವೆ?

#### ಹಂತ 2

ಮಿಂಚುಪಟ್ಟಿ ಸರಣಿ 9.3.1 ಅನ್ನು ಬಳಸಿಕೊಂಡು ಇಬ್ಬರು ಮಕ್ಕಳ ನಡುವಿನ ಸಂಭಾಷಣೆಯನ್ನು ಅಭಿನಯಿಸುವುದು. ದಿನದ ಸಮಯದಲ್ಲಿ ಹೇಗೆ ಶುಭಾಶಯ ಹೇಳುವುದು ಬದಲಾಗುತ್ತದೆ ಎಂದು ಮಕ್ಕಳು ಅರ್ಥ ಮಾಡಿಕೊಳ್ಳಲು ಸಹಾಯವಾಗುವಂತೆ ಸೂರ್ಯನ ಸ್ಥಾನವನ್ನು ತೋರಿಸುವುದು. ನಂತರ ಇಬ್ಬಿಬ್ಬರು ಮಕ್ಕಳಿಗೆ ಇದನ್ನು ಜೋಡಿಯಾಗಿ ಅಭ್ಯಾಸ ಮಾಡಲು ಹೇಳಬಹುದು.



Scanned with CamScanner



## ಹಂತ 3

ಕೆಳಗಿನ ಸಂಭಾಷಣೆಯನ್ನು ಒಂದು ಹಾಡಿನ ಹಾಗೆ ಹಾಡಿ, ಮಕ್ಕಳಿಗೆ ಪುನರಾವರ್ತನೆ ಮಾಡಲು ಹೇಳುವುದು.

ಕ್ಯಾನ್ ಐ ಹಾವ್ ದಿಸ್ ಬಾಲ್ ಪ್ಲೀಸ್?
ಕ್ಯಾನ್ ಐ ಹಾವ್ ದಿಸ್ ಬಾಲ್ ಪ್ಲೀಸ್?
ಹಿಯರ್ ಯು ಆರ್... ಹಿಯರ್ ಯು ಆರ್...
ಥ್ಯಾಂಕ್ಯೂ ಫಾರ್ ಶೇರಿಂಗ್! ಥ್ಯಾಂಕ್ಯೂ ಫಾರ್ ಶೇರಿಂಗ್!

ನೀವು ಇದನ್ನು ಇಂಗ್ಲೀಷ್‌ನಲ್ಲಿ ಹಾಡಬಹುದು ಮತ್ತು ಆಮೇಲೆ ಮಕ್ಕಳಿಗಾಗಿ ಮಾತೃಭಾಷೆಯಲ್ಲಿಯೂ ಅನುವಾದಿಸಿ ಹೇಳಬಹುದು.

ನಂಗೆ ಈ ಚೆಂಡು ಕೊಡ್ತೀಯಾ?
ನಂಗೆ ಈ ಚೆಂಡು ಕೊಡ್ತೀಯಾ?
ಇಲ್ಲಿದೆ ತಗೋ, ಇಲ್ಲಿದೆ ತಗೋ...
ಕೊಟ್ಟಿದ್ದಕ್ಕೆ ಥ್ಯಾಂಕ್ಸ್... ಕೊಟ್ಟಿದ್ದಕ್ಕೆ ಥ್ಯಾಂಕ್ಸ್...

ಮಕ್ಕಳಿಗೆ ಇದನ್ನು ಅಭಿನಯಿಸಲು ಹೇಳುವುದು.

ವಿದ್ಯಾರ್ಥಿ 1: ನಂಗೆ ಚೆಂಡು ಕೊಡ್ತೀಯಾ?
ವಿದ್ಯಾರ್ಥಿ 2: ಇಲ್ಲಿದೆ ತಗೋ, ಇಲ್ಲಿದೆ ತಗೋ...
ವಿದ್ಯಾರ್ಥಿ 1: ಕೊಟ್ಟಿದ್ದಕ್ಕೆ ಥ್ಯಾಂಕ್ಸ್!

ಇದನ್ನು ಬೇರೆ ಬೇರೆ ವಸ್ತುಗಳೊಂದಿಗೆ ಮತ್ತು ಬೇರೆ ಮಕ್ಕಳ ಜೋಡಿಯೊಂದಿಗೆ ಪುನರಾವರ್ತಿಸುವುದು.



Scanned with CamScanner

## ಸಂಭಾಷಣೆ 2

# ಹಬ್ಬಗಳು ಮತ್ತು ಅವುಗಳಿಗೆ ಬಳಸುವ ಶುಭಾಶಯಗಳು

### ಕಲಿಕಾ ಫಲಿತಗಳು

- ವಿದ್ಯಾರ್ಥಿಗಳು ಹಬ್ಬಗಳು, ಉತ್ಸವಗಳು, ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಬಳಸುವ ಶುಭಾಶಯಗಳ ಕುರಿತು – ಶುಭಾಶಯಗಳು, ಅಭಿವ್ಯಕ್ತಿಗಳ ಸಾಮಾನ್ಯ ರೂಪಗಳು ಮತ್ತು ಮೆಚ್ಚುಗೆಯನ್ನು ತೋರಿಸುವ ವಿಧಾನಗಳು ಯಾವುವು ಎಂದು – ತಿಳಿದುಕೊಂಡು ಬಳಸಲು ಸಮರ್ಥರಾಗುತ್ತಾರೆ.

### ಶಿಕ್ಷಕರ ಪೂರ್ವಸಿದ್ಧತೆ

ಹಬ್ಬಗಳು, ಜಾತ್ರೆಗಳು ಮತ್ತು ಉತ್ಸವಗಳ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1**

ನಾವು ಹಲವಾರು ಹಬ್ಬಗಳನ್ನು ಆಚರಿಸುತ್ತೇವೆ – ನೀವು ಅವುಗಳಲ್ಲಿ ಯಾವುದಾದರೂ ಹೆಸರು ಹೇಳ್ತೀರಾ? ಮಕ್ಕಳು ಹಬ್ಬಗಳ ಕುರಿತು ತಿಳಿದಿರುವುದರಿಂದ, ಅವರು ಕೆಲವು ಹಬ್ಬಗಳ ಹೆಸರನ್ನು ಹೇಳುತ್ತಾರೆ. ಅವರಿಗೆ ಎಷ್ಟು ಸಾಧ್ಯವಿದೆಯೋ ಅಷ್ಟು ಹಬ್ಬಗಳ ಹೆಸರುಗಳನ್ನು ಮಕ್ಕಳು ಹೇಳಲಿ. ಸ್ಥಳೀಯ/ಪ್ರಾದೇಶಿಕ ಹಬ್ಬಗಳ ಹೆಸರುಗಳನ್ನು ಹೇಳಿದರೆ ಅವುಗಳನ್ನೂ ಪರಿಗಣಿಸುವುದು.

ಹೆಚ್ಚಿನ ಜನರು ಆಚರಿಸುವ ಕೆಲವು ಪ್ರಮುಖ ಅಥವಾ ಜನಪ್ರಿಯ ಹಬ್ಬಗಳ ಕುರಿತು ಮಕ್ಕಳಿಗೆ ವಿವರಿಸುವುದು. ಆದರೆ ಪ್ರತಿ ಹಬ್ಬಕ್ಕೂ ಜನರಿಗೆ ಶುಭಾಶಯ ಹೇಳುವ, ಹಾರೈಸುವ ಬೇರೆ ಬೇರೆ ವಿಧಾನಗಳಿರುತ್ತವೆ.

ನೀವು ಕೆಲವು ಬಗೆಯ ಶುಭಾಶಯಗಳನ್ನು ಹೇಳುತ್ತೀರೆಂದೂ, ಅವನ್ನು ಯಾವ ಹಬ್ಬಕ್ಕೆ ಬಳಸುತ್ತಾರೆಂದು ಮಕ್ಕಳು ಹೇಳಬೇಕು ಎಂದು ತಿಳಿಸುವುದು.

- ಎಳ್ಳು ಬೆಲ್ಲ ತಿಂದು ಒಳ್ಳೆ ಒಳ್ಳೆ ಮಾತಾಡಿ: ಮಕರ ಸಂಕ್ರಾಂತಿ
- ಬೇವು ಬೆಲ್ಲ ತಿಂದು ಒಳ್ಳೆ ಒಳ್ಳೆ ಮಾತಾಡಿ: ಯುಗಾದಿ
- ದಸರಾ ಹಬ್ಬದ ಶುಭಾಶಯಗಳು: ದಸರಾ
- ಈದ್ ಮುಬಾರಕ್: ಈದ್ ಮಿಲಾದ್
- ಮೆರ್ರಿ ಕ್ರಿಸ್ ಮಸ್/ ಹ್ಯಾಪಿ ಕ್ರಿಸ್ ಮಸ್: ಕ್ರಿಸ್‌ಮಸ್



ಹೀಗೆ ಹಬ್ಬಗಳಲ್ಲದೆ, ಕೆಲವು ಮುಖ್ಯವಾದ ಸಂದರ್ಭಗಳಲ್ಲಿಯೂ ನಾವು ಶುಭಾಶಯ ಹೇಳುತ್ತೇವೆ. ನಾವು ಮತ್ತೆ ಯಾವ ವಿಶೇಷ ಸಂದರ್ಭಗಳಲ್ಲಿ ಶುಭಾಶಯ ಹೇಳಿಕೊಳ್ಳುತ್ತೇವೆ? ಮಕ್ಕಳಿಗೆ ಈ ಕೆಳಗಿನ ಶುಭಾಶಯಗಳನ್ನು ಹೇಳುವಂತೆ ತಿಳಿಸಿ.

- ಯಾರದಾದರೂ ಹುಟ್ಟಿದ ಹಬ್ಬದ ದಿನಕ್ಕೆ (ಹ್ಯಾಪಿ ಬರ್ತ್‌ಡೇ/ ಹುಟ್ಟುಹಬ್ಬದ ಶುಭಾಶಯಗಳು!)
- ಯಾರಾದರೂ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ (ಅಭಿನಂದನೆಗಳು!)
- ನೀವು ಏನಾದರೂ ಪಂದ್ಯವನ್ನು ಗೆದ್ದಾಗ (ಹಿಪ್ ಹಿಪ್ ಹುರ್ರೇ!)



Scanned with CamScanner

ಸಂಭಾಷಣೆ 3

# ಉತ್ತಮ ಶಿಷ್ಟಾಚಾರಗಳು



## ಕಲಿಕಾ ಫಲಿತಗಳು

ಬೇರೆಯವರೊಂದಿಗೆ – ಹಿರಿಯರು ಮತ್ತು ಸಹಪಾಠಿಗಳೊಂದಿಗೆ – ಸಂಭಾಷಣೆಯ ನಿಯಮಗಳನ್ನು ಪಾಲಿಸುತ್ತಾರೆ.

## ಸೂಚನೆಗಳು

### ಹಂತ 1

ಈ ಚಟುವಟಿಕೆಯಲ್ಲಿ ಭಾಗವಹಿಸುವಂತೆ ನಿಮ್ಮ ಸಹಾಯಕ ಶಿಕ್ಷಕಿ/ಬೇರೆ ಹಿರಿಯ ವ್ಯಕ್ತಿಗೆ ಕೇಳಿಕೊಳ್ಳುವುದು. ಒಬ್ಬ ವಿದ್ಯಾರ್ಥಿಯನ್ನು ಇನ್ನೋರ್ವ ಹಿರಿಯ ವ್ಯಕ್ತಿಯೊಂದಿಗೆ ಜೊತೆ ಮಾಡಿರಿ. ಅವರಿಗೆ ಏನಾದರೂ ವಿಷಯದ ಬಗ್ಗೆ ಮಾತನಾಡಲು ಹೇಳಿ. ಅವರು ಮಾತಾಡಲು ಶುರು ಮಾಡುತ್ತಿರುವಂತೆ, ಅವರ ಮಾತಿಗೆ ಅಡ್ಡಿಪಡಿಸಿ, ಅವರಿಗೆ ಸಂಭಾಷಣೆ ಮುಂದುವರೆಸಲು ಬಿಡಬೇಡಿ. ಇನ್ನೋರ್ವ ಶಿಕ್ಷಕಿಯ ತೋಳು ಜಗ್ಗುತ್ತ, ನಿಮ್ಮ ದನಿ ಎತ್ತರಿಸಿ, 'ನನ್ನ ಮಾತು ಕೇಳಿರೀಗ' ಎನ್ನಿ. ಇನ್ನೋರ್ವ ಶಿಕ್ಷಕಿಗೆ ಮೊದಲೇ ಹೇಳಿರಿ, ನೀವು ಹಾಗೆ ಅಡ್ಡಿಪಡಿಸುವಾಗ, ಅವರು ನಿಮ್ಮತ್ತ ಗಮನಕೊಡದೇ, ಸಂಭಾಷಣೆ ಮುಂದುವರೆಸುತ್ತಿರಬೇಕು ಎಂದು.

### ಹಂತ 2

ಈ ಚಟುವಟಿಕೆಯಲ್ಲಿ ಭಾಗವಹಿಸಿದ ಶಿಕ್ಷಕಿ ಮತ್ತು ವಿದ್ಯಾರ್ಥಿಗೆ ಕೇಳಿ, 'ನಾನು ಹಾಗೆ ನಿಮ್ಮ ಸಂಭಾಷಣೆಗೆ ಅಡ್ಡಿಪಡಿಸುತ್ತಲೇ ಇರುವಾಗ, ನಿಮಗೆ ಹೇಗನ್ನಿಸಿತು? ನಾನು ಹಾಗೆ ಮಾಡಿದ್ದು ಸರಿಯೇ? ನಾನು ಏನು ಮಾಡಬೇಕಿತ್ತು?' ಮಕ್ಕಳು ಕೊಡುವ ಎಲ್ಲ ಬಗೆಯ ಉತ್ತರಗಳನ್ನು ತೆಗೆದುಕೊಳ್ಳುವುದು.

ಇಬ್ಬರು ಮಾತನಾಡುತ್ತಿರುವಾಗ 'ದಯವಿಟ್ಟು ಇಲ್ಲಿ ಕೇಳಿ' ಎಂದು ಕೇಳಿಕೊಳ್ಳಬೇಕು ಅಥವಾ ತಮ್ಮ ಸರದಿಗೆ ಕಾಯಬೇಕು, ತಾಳ್ಮೆಯಿಲ್ಲದೇ, ಹೀಗೆ ಮಧ್ಯೆ ಪ್ರವೇಶಿಸಿ ಮಾತಾಡಬಾರದು ಎಂಬುದನ್ನು ಮಕ್ಕಳಿಗೆ ವಿವರಿಸುವುದು. ಅವರು ಬಳಸಬಹುದಾದ ಪದ/ವಾಕ್ಯಗಳನ್ನು ಒತ್ತಿ ಹೇಳುವುದು. ನಮ್ಮ ಮಾತು ಕೇಳುವಂತೆ ಮಾಡಲು ನಾವು ಕೂಗುವುದು ಅಥವಾ ದನಿ ಏರಿಸಿ ಹೇಳುವುದು ಮಾಡಬಾರದು. ಈ ಶಿಷ್ಟಾಚಾರ ಮತ್ತು ನಡವಳಿಕೆಗಳನ್ನು ಎಲ್ಲರೊಂದಿಗೆ – ಅವರ ಸ್ನೇಹಿತರು ಮತ್ತು ದೊಡ್ಡವರು – ಅನುಸರಿಸಬೇಕು ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳುವುದು ಬಹುಮುಖ್ಯ.

ಇಬ್ಬರು ಸಂಭಾಷಣೆಯಲ್ಲಿ ತೊಡಗಿದ್ದಾಗ ಮಧ್ಯೆ ಪ್ರವೇಶಿಸುವ ಸರಿಯಾದ ವಿಧಾನವನ್ನು ತೋರಿಸಿ, ಮೇಲಿನ ಸನ್ನಿವೇಶವನ್ನು ಮತ್ತೊಮ್ಮೆ ಅಭಿನಯಿಸುವುದು.

### ಹಂತ 3

ನಾವು ಸಭ್ಯ ಮಾತುಗಳ ಕುರಿತು ಹೇಳುತ್ತಲೇ ಇದ್ದೇವೆ, ಸಾರಿ/ಕ್ಷಮಿಸಿ, ಗುಡ್ ಮಾರ್ನಿಂಗ್/ಶುಭೋದಯ, ಎಕ್ಸ್‌ಕ್ಯೂಸ್ ಮೀ ಇತ್ಯಾದಿ. ಈಗ ಇಲ್ಲಿ ನಾನು ಕೆಲವು ಸನ್ನಿವೇಶಗಳನ್ನು ಕೊಡುತ್ತೇನೆ. ನೀವು ಆ ಸಂದರ್ಭಗಳಲ್ಲಿ ಏನನ್ನು? ಹೇಳುತ್ತೀರಿ ಎಂಬುದನ್ನು ತಿಳಿಸಿ, ಎಂದು ಮಕ್ಕಳಿಗೆ ಹೇಳುವುದು.

- ಶಾಲೆ ಮುಗಿದ ನಂತರ ನೀವು ನಿಮ್ಮ ಗೆಳೆಯ/ಗೆಳತಿಯನ್ನು ಭೇಟಿಯಾಗುತ್ತೀರಿ. (ಹಲೋ/ನಮಸ್ಕಾರ. ಗುಡ್ ಈವ್‌ನಿಂಗ್).
- ಇಬ್ಬರು ವ್ಯಕ್ತಿಗಳು ಮಾತಾಡುತ್ತ ನಿಂತಿದ್ದಾರೆ, ನೀವು ಅವರಿಗೇನೋ ಹೇಳಬೇಕಾಗಿದೆ (ಎಕ್ಸ್‌ಕ್ಯೂಸ್ ಮೀ/ಒಂದು ನಿಮಿಷ ಇಲ್ಲಿ ಕೇಳಿ/ಒಂದು ನಿಮಿಷ, ನಾನು ಏನೋ ಹೇಳಬೇಕಿದೆ, ಇತ್ಯಾದಿ).
- ನೀವು ಕಪಾಟಿನ ಮೇಲೆ ಇರುವುದನ್ನು ತೆಗೆದುಕೊಳ್ಳಬೇಕಿದೆ ಮತ್ತು ನಿಮ್ಮ ಶಿಕ್ಷಕರಿಂದ ಸಹಾಯ ಕೇಳಬೇಕಾಗಿದೆ. (ಟೀಚರ್, ದಯವಿಟ್ಟು ನಂಗೊಂದು ಸಹಾಯ ಮಾಡಿ!).
- ದಸರಾ ಹಬ್ಬದ ದಿನ ನಿಮಗೆ ಯಾರೋ ಸಿಹಿತಿಂಡಿ ಕೊಡುತ್ತಾರೆ (ಥ್ಯಾಂಕ್ ಯೂ/ಸಿಹಿತಿಂಡಿ ಕೊಟ್ಟಿದ್ದಕ್ಕೆ ಥ್ಯಾಂಕ್ಸ್).
- ನೀವು ಸೀನುತ್ತೀರಿ (ಎಕ್ಸ್‌ಕ್ಯೂಸ್ ಮೀ/ಕ್ಷಮಿಸಿ).
- ನೀವು ಯಾರದೋ ಕಾಲನ್ನು ತುಳಿಯುತ್ತೀರಿ (ಸಾರಿ/ಕ್ಷಮಿಸಿ, ನೋಡಲಿಲ್ಲ).

ಹೀಗೆಯೇ ಇನ್ನೊಂದಿಷ್ಟು ಉದಾಹರಣೆಗಳನ್ನು ಆಲೋಚಿಸಿ, ಮುಂದುವರೆಯುವುದು.



Scanned with CamScanner

ಯೋಜನಾ ಕಾರ್ಯ 1

# ನಮ್ಮ ಹಬ್ಬಗಳು

## ಕಲಿಕಾ ಸಾಮಗ್ರಿಗಳು

- ನಿಯತಕಾಲಿಕಗಳು
- ಪುಸ್ತಕಗಳು ಮತ್ತು ದಿನಪತ್ರಿಕೆಗಳಿಂದ ವಿವಿಧ ಹಬ್ಬಗಳ ಆಚರಣೆಗಳ ಚಿತ್ರಗಳು
- ಅಂಟು, ಚಾರ್ಟ್ ಹಾಳೆ, ಕತ್ತರಿ

## ಶಿಕ್ಷಕರ ಪೂರ್ವಸಿದ್ಧತೆ

ತರಗತಿಯಲ್ಲಿ ನೀವು ಚರ್ಚಿಸಿದ ಎಲ್ಲಾ ಹಬ್ಬಗಳ ಚಿತ್ರಗಳನ್ನು ಸಂಗ್ರಹಿಸುವುದು.

## ಸೂಚನೆಗಳು

1. ಕತ್ತರಿಸಿದ ಎಲ್ಲಾ ಚಿತ್ರಗಳನ್ನು ಹೊರಗೆ ತೆಗೆದಿಡುವುದು.
2. ಮಕ್ಕಳಿಗೆ ಬಳಸಲು ಅಂಟಿನ ಬಟ್ಟಲನ್ನು ಹೊರಗೆ ತೆರೆದಿಡುವುದು.
3. ಸಂಗ್ರಹಿಸಿದ ಚಿತ್ರಗಳನ್ನು ಚಾರ್ಟ್ ಹಾಳೆಯ ಮೇಲೆ ಅಂಟಿಸಿ, ಪ್ರತಿಯೊಂದನ್ನೂ ಹೆಸರಿಸುವುದು. ಹೀಗೆ ಭಾರತದ ಬೇರೆ ಬೇರೆ ಹಬ್ಬಗಳ ಒಂದು ರಂಗುರಂಗಿನ, ಸ್ವಾರಸ್ಯಕರ ಕೊಲಾಜ್ ಅನ್ನು ರಚಿಸುವುದು.
4. ಒಮ್ಮೆ ಈ ಕೊಲಾಜ್ ಒಣಗಿದ ನಂತರ, ಮಕ್ಕಳಿಗೆ ಪ್ರತಿ ಹಬ್ಬದ ಸಂದರ್ಭದಲ್ಲಿ ಅವರು ಹೇಗೆ? ಸಂವಹನ ಮಾಡುತ್ತಾರೆ ಎಂದ ಕೇಳುವುದು.
5. ವಿವಿಧ ಹಬ್ಬಗಳ ಸಂದರ್ಭದಲ್ಲಿ ಹೇಳುವ ಬೇರೆ ಬೇರೆ ರೀತಿಯ ಶುಭಾಶಯಗಳು ಅಥವಾ ಹಾರೈಕೆಗಳನ್ನು ಹಿಂದಿನ ಸಂಭಾಷಣೆಯಿಂದ ನೆನಪಿಸಿಕೊಂಡು ಹೇಳಲು ಮಕ್ಕಳು ಸಮರ್ಥರನ್ನಾಗಿಸಬೇಕು.

---

ವಾರದ ಯೋಜನೆ

## ಕಲೆ ಮತ್ತು ಕರಕುಶಲ ವಸ್ತುಪ್ರದರ್ಶನವನ್ನು ಏರ್ಪಡಿಸುವುದು

ಇದು ಕೊನೆಯ ವಿಷಯ ಮತ್ತು ಈಗ ಹೆಚ್ಚು ಕಡಿಮೆ ಶೈಕ್ಷಣಿಕ ವರ್ಷದ ಮುಕ್ತಾಯದ ಹಂತ ಕೂಡ. ಮಕ್ಕಳ ಸೃಜನಶೀಲ ಚಟುವಟಿಕೆಗಳ ಒಂದು ಪ್ರದರ್ಶನವನ್ನು ನೀವು ಶಾಲೆಯಲ್ಲಿ ಏರ್ಪಡಿಸಿ ಪ್ರದರ್ಶನವನ್ನು ನೋಡಲು ಬರುವಂತೆ ಪೋಷಕರನ್ನು ಆಹ್ವಾನಿಸಬೇಕು.

1. ಅವರು ಬಿಡಿಸಿದ ಚಿತ್ರಗಳಲ್ಲಿ ಅವರಿಗೆ ಇಷ್ಟವೆನ್ನಿಸಿದ ಮೂರನ್ನು ಆಯ್ದುಕೊಳ್ಳಲು ಮಕ್ಕಳಿಗೆ ಹೇಳುವುದು.
2. ಅರ್ಧ ಚಾರ್ಟ್ ಹಾಳೆಯ ಮೇಲೆ ಅಥವಾ ಕಾಗದದ ಮೇಲೆ ಅವುಗಳನ್ನು ಅಂಟಿಸಲು ಹೇಳುವುದು.
3. ಚಾರ್ಟಿನ ಮೇಲೆ ಮಗುವಿನ ಹೆಸರನ್ನು ಬರೆಯುವುದು.
4. ತರಗತಿ ಕೋಣೆಯನ್ನು ಮಕ್ಕಳೊಂದಿಗೆ ಸೇರಿ ಸಜ್ಜುಗೊಳಿಸುವುದು.
5. ಆಹ್ವಾನಪತ್ರಿಕೆ ಮಾಡಲು ಮಕ್ಕಳಿಗೆ ಆಸ್ಪದ ಕಲ್ಪಿಸಿಕೊಡುವುದು.
6. ಪೋಷಕರು ಬಂದಾಗ, ಸ್ವಾಗತ, ಬನ್ನಿ ಎಂದು ಹೇಳಲು ನಾಲ್ಕಾರು ಮಕ್ಕಳ ಒಂದು ಸಮಿತಿಯನ್ನು ಮಾಡುವುದು.
7. ಪೋಷಕರು ಮರಳಿ ಹೋಗುತ್ತಿರುವಾಗ, 'ಬಂದಿದ್ದಕ್ಕೆ ಥ್ಯಾಂಕ್ಸ್' ಎಂದು ಅಥವಾ "ನೀವು ಬಂದಿದ್ದು ನಮಗೆ ಖುಷಿಯಾಯಿತು' ಎಂದು ಹೇಳಲು ಅವರಿಗೆ ಕಲಿಸುವುದು.



Scanned with CamScanner

# ಶಿಶುಗೀತೆಯ ಸೂಚನೆಗಳು

## ಕಲಿಕಾ ಫಲಿತಗಳು

ಮಕ್ಕಳು "ಎಲ್ಲರನ್ನು ಪ್ರೀತಿಯಿಂದ ಮಾತಾಡಿಸು" ಮತ್ತು "One two buckle my shoe" ಎಂಬ ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರಣೆ ಮತ್ತು ಅಭಿನಯದೊಂದಿಗೆ ಹಾಡಲು ಸಮರ್ಥರಾಗುತ್ತಾರೆ.

## ಶಿಕ್ಷಕರ ಪೂರ್ವಸಿದ್ಧತೆ

"ಎಲ್ಲರನ್ನು ಪ್ರೀತಿಯಿಂದ ಮಾತಾಡಿಸು" ಮತ್ತು "One two buckle my shoe" ಎಂಬ ಶಿಶುಗೀತೆಗಳನ್ನು ಮತ್ತು ಅವರೊಂದಿಗೆ ಮಾಡಬೇಕಿರುವ ಹಾವಭಾವವನ್ನು ತಿಳಿದುಕೊಳ್ಳಿ..

## ಸೂಚನೆಗಳು

1. 'ಎಲ್ಲರನ್ನು ಪ್ರೀತಿಯಿಂದ ಮಾತಾಡಿಸು' ಮತ್ತು "One two buckle my shoe" ಎಂಬ ಶಿಶುಗೀತೆಗಳನ್ನು ಪರಿಚಯಿಸಿ, ಅದು ಯಾವುದರ ಕುರಿತಾಗಿದೆ ಎಂಬುದನ್ನು ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ, ಧ್ವನಿಯ ಏರಿಳಿತದೊಂದಿಗೆ ಪೂರ್ಣವಾಗಿ ಹೇಳುವುದು. ಮಕ್ಕಳು ಗಮನವಿಟ್ಟು ಆಲಿಸಲಿ.
3. ನಂತರ ಮಕ್ಕಳಿಗೆ ನೀವು ಒಂದು ಸಾಲನ್ನು ಹೇಳಿದ ನಂತರ ಪುನರಾವರ್ತಿಸಲು ಹೇಳಿ, ಚಿತ್ರವನ್ನು ತೋರಿಸುತ್ತ ಪ್ರತಿ ಸಾಲಿನ ಅರ್ಥವನ್ನು ವಿವರಿಸುವುದು.
4. ಆ ಸಾಲುಗಳೊಂದಿಗೆ ಮಾಡಬೇಕಿರುವ ಅಭಿನಯವನ್ನು ತೋರಿಸಿ, ಮಕ್ಕಳಿಗೆ ನಿಮ್ಮಂತೆಯೇ ಮಾಡಲು ಹೇಳುವುದು.
5. ಈಗ ಮಕ್ಕಳು ನಿಮ್ಮೊಂದಿಗೆ ಹಾಡುತ್ತ, ನಿಮ್ಮಂತೆಯೇ ಅಭಿನಯವನ್ನು ಮಾಡಲಿ.
6. ಮಕ್ಕಳಿಗೆ ಒಬ್ಬೊಬ್ಬರೇ ಅಥವಾ ಗುಂಪಿನಲ್ಲಿ ಅವರಾಗಿಯೇ ಹಾಡಲು ಪ್ರೋತ್ಸಾಹಿಸುವುದು.



Scanned with CamScanner

## ಶಿಶುಗೀತೆ 1

### ಎಲ್ಲರನ್ನೂ ಪ್ರೀತಿಯಿಂದ ಮಾತಾಡಿಸು


ಎಲ್ಲರನ್ನೂ ಪ್ರೀತಿಯಿಂದ ಮಾತಾಡಿಸು,
ನನ್ನವರು ತನ್ನವರು ಎಂದು ಎಲ್ಲರನ್ನೂ ಕೂಡಿಸು...
ಕೂಡಿಸಿ, ಆಟ ಆಡಿಸಿ, ಒಟ್ಟುಗೂಡಿ ನಗಿಸು...
ನಗೆಯಿಂದ ನಲಿಸು, ಎಲ್ಲರನ್ನೂ ಪ್ರೀತಿಯಿಂದ ಮಾತಾಡಿಸು.



## ಶಿಶುಗೀತೆ 2

### One two buckle my shoe

One two buckle my shoe
Three four shut the door
Five six, pick up sticks
Seven eight shut the gate
Nine ten a big fat hen





Scanned with CamScanner

## ಚಂದಮಾಮ 'ಗುಡ್‌ನೈಟ್' ಹೇಳಿದ!




### ಕಲಿಕಾ ಫಲಿತಗಳು

'ಚಂದಮಾಮ ಗುಡ್‌ನೈಟ್ ಹೇಳಿದ' ಕಥೆಯನ್ನು ಅರ್ಥಮಾಡಿಕೊಂಡು ಸರಳವಾದ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.

### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ




### ಕಥೆಯ ಸಂಕ್ಷಿಪ್ತ ರೂಪ

**ಚಂದಮಾಮ ಗುಡ್‌ನೈಟ್**

ಆಗ ರಾತ್ರಿಯಾಗಿತ್ತು. ಎಲ್ಲ ಪ್ರಾಣಿಗಳು ಇನ್ನೂ ಎಚ್ಚರವಾಗಿಯೇ ಇದ್ದವು.

ಚಿಂಕೂ ಏನೋ ತಮಾಷೆಯ ಸಂಗತಿಯನ್ನು ಹೇಳುತ್ತಿದ್ದ ಮತ್ತು ಎಲ್ಲ ಪ್ರಾಣಿಗಳು ಜೋರಾಗಿ ನಗುತ್ತಿದ್ದವು.

ಆಮೇಲೆ ಚಿಂಕೂ ಮಲಗಲೆಂದು ಮನೆಗೆ ವಾಪಸು ಬಂದ.

ಚಂದಮಾಮ ಅವನನ್ನು ನೋಡಿ ನಕ್ಕು, ಕೇಳಿದ,

'ಚಿಂಕೂ... ನಿನ್ನ ಗೆಳೆಯರಿಗೆ ನೀನು ಗುಡ್‌ನೈಟ್ ಎಂದು ಹೇಳಿದೆಯಾ?'

ಚಿಂಕೂ ತಟ್ಟನೆ ಹೇಳಿದ, "ಓ... ನಂಗೆ ಮರೆತೇ ಹೋಯಿತು ಚಂದಮಾಮ'. ಅವನು ತಕ್ಷಣವೇ ತನ್ನ ಗೆಳೆಯರಿದ್ದಲ್ಲಿಗೆ ಓಡಿದ.

"ಹೇ ಬಾವಲಿ... ನೀನು ತಲೆ ಕೆಳಗಾಗಿ ನೇತುಬಿದ್ದು ನಿದ್ರೆ ಮಾಡ್ತೀಯ" ಎಂದು ಕೇಳುತ್ತಲೇ ನಗತೊಡಗಿದ.

ಬಾವಲಿಯೂ ನಗುತ್ತ ಹೇಳಿತು, 'ಹೌದು ಚಿಂಕೂ. ನಾನು ಯಾವಾಗ್ಲೂ ಹಿಂಗೆ ತಲೆ ಕೆಳಗಾಗೇ ನಿದ್ರೆ ಮಾಡೋದು. ಮತ್ತೆ ನಾನೀಗ ನನ್ನ ಆಹಾರ ಹುಡುಕೋದಕ್ಕೆ ಹೋಗಬೇಕು'

'ಶುಭರಾತ್ರಿ ಬಾವಲಿ'

'ಶುಭರಾತ್ರಿ ಚಿಂಕೂ. ನಿಂಗೆ ಒಳ್ಳೆಯ ಕನಸು ಬೀಳಲಿ"

'ಹೇ... ಮಿಡತೆಯೇ... ನೀನಿನ್ನೂ ನಿದ್ರೆ ಮಾಡಿಲ್ಲವಾ?'

'ಹೇ ಚಿಂಕೂ... ನಾನು ಊಟ ಆದಮೇಲೆ ವಾಕ್ ಹೋಗ್ತಿದೀನಿ'

'ಶುಭರಾತ್ರಿ ಮಿಡತೆ... ನಾಳೆ ಸಿಗ್ತೀನಿ'

'ಹಾಯ್ ಜೇನುಮರಿಯೇ... ನಿಮ್ಮಮ್ಮ ಎಲ್ಲಿ?"

'ನಾನು ನಮ್ಮಮ್ಮಂಗೆ ಕಾಯ್ತಿದೀನಿ ಚಿಂಕೂ. ಇನ್ನೇನು ಸ್ವಲ್ಪ ಹೊತ್ತಿಗೆ ಅವಳು ವಾಪಸು ಬರಬಹುದು'

'ಹೌದಾ... ಸರಿ... ಆದರೆ ನೀನೊಬ್ಬಳೇ ಈ ರಾತ್ರಿ ಹೊತ್ತು ತುಂಬಾ ದೂರ ಎಲ್ಲೂ ಹೋಗಬೇಡ. ಶುಭರಾತ್ರಿ ಜೇನುಮರಿಯೇ'

'ಹಾಯ್ ನರಿಯಣ್ಣ...'

'ಹಲೋ ಮಗೂ'

'ನೀನು ಮಲಗೋದಕ್ಕೆ ಹೋಗೋದಕ್ಕಿಂತ ಮುಂಚೆ, ನಾನು ನಿಂಗೆ ಶುಭರಾತ್ರಿ ಹೇಳೋಣ ಅಂದುಕೊಂಡೆ'

'ಒಳ್ಳೆಯದು ಚಿಂಕೂ... ನಿಂಗೂ ಶುಭರಾತ್ರಿ'

'ಗೂಬೆಯಕ್ಕ... ಆ ಬಾವಲಿ ಥರಾನೆ ನೀನೂ ಹಗಲು ಹೊತ್ತು ನಿದ್ರೆ ಮಾಡೋದನ್ನೇ ನೋಡ್ತೀನಿ'

'ಹೌದು ಚಿಂಕೂ... ನಾನು ಹಗಲು ಹೊತ್ತು ಮಾತ್ರ ನಿದ್ರೆ ಮಾಡ್ತೀನಿ. ಆದ್ರೂ ನೀನು ಈಗ ನಂಗೆ ಶುಭರಾತ್ರಿ ಹೇಳಬಹುದು!'

'ಶುಭರಾತ್ರಿ ಗೂಬೆಯಕ್ಕ'

ಕೊನೇದಾಗಿ, ಚಿಂಕೂ ತನ್ನ ಪ್ರೀತಿಯ ಸ್ನೇಹಿತ ನಾಯಿಮರಿಯತ್ತ ಬಂದ. ನಾಯಿಮರಿ ಅವನನ್ನು ತಬ್ಬಿಕೊಂಡಿತು. ಇಬ್ಬರೂ ಒಬ್ಬರಿಗೊಬ್ಬರು 'ಶುಭರಾತ್ರಿ' ಹೇಳಿದರು.

ಚಿಂಕೂ ಎಲ್ಲರಿಗೂ ಪ್ರೀತಿಯಿಂದ 'ಶುಭರಾತ್ರಿ' ಎಂದು ಹೇಳಿದ್ದನ್ನು ನೋಡುತ್ತ ಚಂದಮಾಮನಿಗೆ ಖುಷಿಯಾಯಿತು. ಚಿಂಕೂ ಚಂದಮಾಮನಿಗೆ 'ಶುಭರಾತ್ರಿ' ಎಂದು ಹೇಳಿ, ನಿದ್ರೆ ಮಾಡಲು ಹೋದ.

ಚಂದಮಾಮನು ಚಿಂಕೂವಿಗೆ 'ಶುಭರಾತ್ರಿ ನನ್ನ ಮುದ್ದು ಚಿಂಕೂ' ಎಂದನು.

## ಚಂದಮಾಮ 'ಗುಡ್‌ನೈಟ್' ಹೇಳಿದ!



### ಸೂಚನೆಗಳು

**ಹಂತ 1:** ಕಥೆಯನ್ನು ಪರಿಚಯಿಸುವುದು. (ಮಕ್ಕಳೊಂದಿಗೆ ವಿಷಯದ ಕುರಿತು ಚರ್ಚಿಸಿ, ಅವರ ಬದುಕಿನ ಅನುಭವಗಳಿಗೆ ಸಂಬಂಧೀಕರಿಸುವುದು. ಮುಖಪುಟವನ್ನು ತೋರಿಸಿ, ಕಥೆಯು ಯಾವುದರ ಬಗ್ಗೆ ಇರಬಹುದು ಎಂದು ಸ್ವಲ್ಪ ಚರ್ಚೆ ಮಾಡುವುದು.)

**ಹಂತ 2:** ಕಥೆಯನ್ನು ನಿಮ್ಮ ಮಾತುಗಳಲ್ಲಿ ಹೇಳುವುದು.

**ಹಂತ 3:** ಕಥೆಯನ್ನು ಓದುತ್ತ, ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳಿ, ಜೊತೆಗೆ ಮುಖ್ಯ ಪಾತ್ರಗಳನ್ನು ಹಾಗೂ ಘಟನೆಗಳನ್ನು, ಮುಖ್ಯವಾದ ಪದಗಳನ್ನು ಗುರುತಿಸಿ ವಿವರಿಸುವುದು.

**ಹಂತ 4:** ಕಥೆಯನ್ನು ಆಧರಿಸಿ, ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು.

- ಎಲ್ಲ ಪ್ರಾಣಿಗಳು ಇನ್ನೂ ಎಚ್ಚರವಾಗಿಯೇ ಇದ್ದವು. ಯಾರು ಇನ್ನೂ ಎಚ್ಚರವಾಗಿಯೇ ಇದ್ದರು?
- ಚಿಂಕೂ ಮಲಗಲೆಂದು ಮನೆಗೆ ವಾಪಸು ಬಂದ. ಮಲಗಲೆಂದು ಮನೆಗೆ ಯಾರು ವಾಪಸು ಬಂದರು?
- ನಾಯಿಮರಿ ಅವನನ್ನು ತಬ್ಬಿಕೊಂಡಿತು. ಇಬ್ಬರೂ ಒಬ್ಬರಿಗೊಬ್ಬರು 'ಶುಭರಾತ್ರಿ' ಹೇಳಿದರು. ಯಾರು ಯಾರು ಒಬ್ಬರಿಗೊಬ್ಬರು 'ಶುಭರಾತ್ರಿ' ಹೇಳಿದರು?

**ಹಂತ 5:** ಕಥೆಯ ಕೊನೆಯಲ್ಲಿ, ಗ್ರಹಿಕೆ ಮತ್ತು ನೆನಪಿಸಿಕೊಳ್ಳುವ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವುದು.

- ಚಿಂಕೂ ಎಲ್ಲರಿಗೂ ಶುಭರಾತ್ರಿ ಹೇಳಲು ಏಕೆ ಬಯಸಿದ?
- ಚಿಂಕೂ ಯಾರಿಗೆ ಮೊದಲು ಶುಭರಾತ್ರಿ ಹೇಳಿದ?
- 'ನಾನು ಹಗಲು ಹೊತ್ತು ಮಾತ್ರ ನಿದ್ರೆ ಮಾಡ್ತೀನಿ' ಅಂತ ಯಾರು ಚಿಂಕೂಗೆ ಹೇಳಿದರು?

**ಹಂತ 6:** ಕಥೆಯ ಪಾತ್ರಗಳೊಂದಿಗೆ ಮಕ್ಕಳಿಗೆ ಸಂವೇದನೆಯನ್ನು ಹೊಂದಲು ಸಾಧ್ಯವಾಗುವ ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದು.

- ತಲೆ ಕೆಳಗಾಗಿ ಮಲಗ್ತೀಯ ಎಂದು ಚಿಂಕೂ ಬಾವಲಿಯನ್ನು ನೋಡಿ ನಕ್ಕಾಗ, ಬಾವಲಿಗೆ ಏನು ಅನ್ನಿಸಿರಬಹುದು ಎಂದು ನೀವು ಯೋಚಿಸುತ್ತೀರಿ?
- ತನ್ನಮ್ಮ ಮರಳಿ ಬರುವುದನ್ನು ಕಾಯುತ್ತಿದ್ದ ಜೇನುಮರಿಗೆ ಹೆದರಿಕೆಯಾಯಿತು ಎಂದು ನಿಮಗೆ ಅನ್ನಿಸುತ್ತದೆಯೇ? ಏಕೆ ಹಾಗೆ ಅನ್ನಿಸುತ್ತದೆ?

**ಹಂತ 7:** ಮಕ್ಕಳು ಕಥೆ ಕೇಳಿದ ನಂತರ ಊಹಿಸಬಹುದಾದ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಚಿಂಕೂವಿನ ಗೆಳೆಯರು ಒಬ್ಬರಿಗೊಬ್ಬರು ಹತ್ತಿರದಲ್ಲಿಯೇ ವಾಸಿಸುತ್ತ ಇದ್ದರು ಎಂದು ನಿಮಗೆ ಅನ್ನಿಸುತ್ತದೆಯೇ?
- ಗೂಬೆಯು ರಾತ್ರಿ ನಿದ್ರೆ ಮಾಡುವುದೇ?
- ಕಥೆಯಲ್ಲಿ ಹಗಲು ಹೊತ್ತು ಮಾತ್ರ ನಿದ್ರೆ ಮಾಡುವ ಎರಡು ಪ್ರಾಣಿಗಳು ಯಾವುವು?

**ಹಂತ 8:** ಮಕ್ಕಳು ತಮ್ಮದೇ ನಾಲ್ಕೈದು ವಾಕ್ಯಗಳಲ್ಲಿ ಈ ಕಥೆಯನ್ನು ಹೇಳಲು ಬೆಂಬಲಿಸುವುದು.





Scanned with CamScanner

ಚಟುವಟಿಕೆ 1

## ಪ್ರದರ್ಶನಕ್ಕೆ ಆಹ್ವಾನ ಪತ್ರಿಕೆಯನ್ನು ತಯಾರಿಸುವುದು

### ಕಲಿಕಾ ಸಾಮಗ್ರಿಗಳು

- ಎ–4 ಗಾತ್ರದ ಮಡಚಿದ ಬಿಳಿಯ ಹಾಳೆಗಳು ಅಥವಾ ದಿನಪತ್ರಿಕೆಯ ಹಾಳೆಗಳು
- ಬಣ್ಣಗಳು (ಕ್ರೆಯಾನ್‌ಗಳು/ಪೇಂಟ್‌ಗಳು)
- ಹಾಳೆಯಲ್ಲಿ ಕತ್ತರಿಸಿದ ಚಿಕ್ಕ ಆಕಾರಗಳು – ಆಯತಾಕಾರ, ವೃತ್ತ ಮತ್ತು ಚೌಕಾಕಾರದ ಆಕೃತಿಗಳು
- ಕೆಲವು ಬಣ್ಣದ ಕಾಗದದ ಹಾಳೆಗಳು, ಅಂಟು.

### ಸೂಚನೆಗಳು

1. 4–5 ಮಕ್ಕಳನ್ನೊಳಗೊಂಡ ಚಿಕ್ಕ ಚಿಕ್ಕ ಗುಂಪುಗಳನ್ನು ಮಾಡುವುದು.
2. ಮಡಚಿದ ಬಿಳಿಯ ಹಾಳೆ ಅಥವಾ ದಿನಪತ್ರಿಕೆಯ ಹಾಳೆಗಳ ಮೇಲೆ ವಿವಿಧ ಆಕೃತಿಗಳನ್ನು ಅಂಟಿಸಲು ಮಕ್ಕಳಿಗೆ ಹೇಳುವುದು.
3. ಬಣ್ಣದ ಹಾಳೆಯನ್ನು ಕೂಡ ಮಡಚಿದ ಹಾಳೆಯ ಮೇಲೆ ಅಂಟಿಸಲು ಅವರಿಗೆ ಮಾರ್ಗದರ್ಶನ ನೀಡುವುದು.
4. ಮಡಚಿದ ಕಾಗದದ ಹಾಳೆಯಲ್ಲಿ ಉಳಿದಿರುವ ಜಾಗದಲ್ಲಿ ಕ್ರೆಯಾನ್ ಅಥವಾ ಪೇಂಟ್ ಬಣ್ಣವನ್ನು ತುಂಬಿಸಲು ಹೇಳುವುದು.
5. ಹಾಳೆಯನ್ನು ಒಣಗಲು ಬಿಡುವುದು.
6. ಕಾರ್ಡಿನ ಒಳಭಾಗದಲ್ಲಿ ಈ ಕೆಳಗಿನದನ್ನು ಬರೆಯುವುದು.

"ಅಮ್ಮ ಮತ್ತು ಅಪ್ಪನಿಗೆ ನಮಸ್ಕಾರ!
ನನ್ನ ತರಗತಿಯಲ್ಲಿ ನಡೆಯುವ
ಪ್ರದರ್ಶನವನ್ನು ನೋಡಲು ಬನ್ನಿ
ಎಂದು ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ"

ನಿಮ್ಮ ಪ್ರೀತಿಯ ಮಗು



Scanned with CamScanner

ಚಟುವಟಿಕೆ 2

## ಪ್ರದರ್ಶನವನ್ನು ಸಜ್ಜುಗೊಳಿಸುವುದು



### ಕಲಿಕಾ ಸಾಮಗ್ರಿಗಳು

- ರಿಬ್ಬನ್ನುಗಳು
- ಬಲೂನುಗಳು
- ಬಣ್ಣಬಣ್ಣದ ಉದ್ದನೆಯ ಕಾಗದದ ಪಟ್ಟಿಗಳು (ಸ್ಟ್ರೀಮರ್‌ಗಳು)
- ಅಂಟಿಸುವ ಟೇಪ್

### ಶಿಕ್ಷಕರ ಪೂರ್ವಸಿದ್ಧತೆ

ಪ್ರದರ್ಶನ ನೋಡಲು ಬನ್ನಿ ಎಂದು ತಿಳಿಸುವ ಆಹ್ವಾನ ಪತ್ರಿಕೆಗಳನ್ನು ಪೋಷಕರ ಮನೆಗೆ ಕಳುಹಿಸುವುದು.

### ಸೂಚನೆಗಳು

1. ಇಡೀ ತರಗತಿಯನ್ನು ರಿಬ್ಬನ್ನುಗಳು, ಬಲೂನುಗಳು ಮತ್ತು ಬಣ್ಣಬಣ್ಣದ ಉದ್ದನೆಯ ಕಾಗದದ ಪಟ್ಟಿಗಳಿಂದ (ಸ್ಟ್ರೀಮರ್‌ಗಳು) ಅಲಂಕರಿಸುವುದು. ಇದನ್ನೆಲ್ಲ ಮಾಡುವಾಗ ಮಕ್ಕಳನ್ನೂ ನಿಮ್ಮೊಂದಿಗೆ ತೊಡಗಿಸಿಕೊಳ್ಳುವುದು.
2. ಗೋಡೆಯ ಒಂದು ಬದಿಯಲ್ಲಿ ಮಕ್ಕಳ ಯೋಜನೆಗಳ ಹಾಳೆಗಳನ್ನು ಪ್ರದರ್ಶಿಸುವುದು.
3. ಗೋಡೆಯ ಇನ್ನೊಂದು ಬದಿಯಲ್ಲಿ ಮಕ್ಕಳು ಕೆಲಸ ಮಾಡಿರುವ ಹಾಳೆಗಳನ್ನು ಪ್ರದರ್ಶಿಸುವುದು.
4. ಮಕ್ಕಳು ತರಗತಿಯಲ್ಲಿ ಬಳಸುವ ಕಲಿಕೋಪರಣಗಳನ್ನು ಇನ್ನೊಂದೆಡೆ ಪ್ರದರ್ಶಿಸುವುದು.
5. ಹಾಗೆ ಸಜ್ಜುಗೊಳಿಸಿ ಇಟ್ಟಿರುವ ಎಲ್ಲದಕ್ಕೂ ಶೀರ್ಷಿಕೆ ಕೊಡುವುದು.
6. ಅಲ್ಲಿ ಪ್ರದರ್ಶಿಸಿದ ಚಿತ್ರಗಳು, ಕೆಲಸದ ಹಾಳೆಗಳ ಕುರಿತು ಪೋಷಕರಿಗೆ ವಿವರಿಸುವಂತೆ ಮಕ್ಕಳಿಗೆ ಹೇಳಿ ಅಥವಾ ನೀವೇ ವಿವರಿಸುವುದು.
7. ಮುಗಿದಾದ ನಂತರ ಪೋಷಕರಿಂದ ಹಿಮ್ಮಾಹಿತಿ ಪಡೆದುಕೊಳ್ಳುವುದು.



Scanned with CamScanner

ಚಟುವಟಿಕೆ 1

## ತರಗತಿ ಕೋಣೆಯನ್ನು ಓರಣವಾಗಿಸುವುದು

### ಕಲಿಕಾ ಸಾಮಗ್ರಿಗಳು

ತರಗತಿ ಕೋಣೆಯ ಸಾಮಗ್ರಿಗಳು

### ಶಿಕ್ಷಕರ ಪೂರ್ವಸಿದ್ಧತೆ

ತರಗತಿ ಕೋಣೆಯ ಎಲ್ಲ ಸಾಮಗ್ರಿಗಳನ್ನೂ ಹೊರತೆಗೆದು, ತರಗತಿಯ ಮಧ್ಯದಲ್ಲಿ ಮಕ್ಕಳು ಬರುವ ಮೊದಲೇ ಇಟ್ಟುಕೊಳ್ಳುವುದು.

### ಸೂಚನೆಗಳು

1. ಮಕ್ಕಳು ಅಂದು ತರಗತಿಗೆ ಬಂದಾಗ, ತರಗತಿ ಕೋಣೆಯನ್ನು ಸಮಯಕ್ಕೆ ಸರಿಯಾಗಿ ಸಜ್ಜುಗೊಳಿಸಲು ಆಗಲಿಲ್ಲ ಎಂದು ಹೇಳಿ.
2. ಎಲ್ಲವನ್ನೂ ಮರಳಿ ಜೋಡಿಸಿಡಲು ಸಹಾಯ ಮಾಡಿ ಎಂದು ಅವರನ್ನು ಕೇಳುವುದು. ಹಾಗೆ ಜೋಡಿಸಿ ಇಡುವಾಗ, ಅವರು ಪ್ಲೀಸ್, ಕ್ಷಮಿಸಿ, ಥ್ಯಾಂಕ್ಯೂ ಇತ್ಯಾದಿ ಕಲಿತ ಪದಗುಚ್ಛಗಳನ್ನು ಅಭ್ಯಾಸ ಮಾಡಲು ಹೇಳುವುದು.

---

ಚಟುವಟಿಕೆ 2

## ಅತಿಥಿಗಳನ್ನು ಉಪಚರಿಸುವುದು

### ಕಲಿಕಾ ಸಾಮಗ್ರಿಗಳು

- 3–4 ಲೋಟಗಳಲ್ಲಿ ನೀರಿನ ಲೋಟ
- ಟ್ರೇ – 1
- ಚಿಕ್ಕ ತಟ್ಟೆಗಳು – 2
- ತರಗತಿಯಲ್ಲಿರುವ ಎಲ್ಲ ಮಕ್ಕಳಿಗೂ ಸಾಕಾಗುವಷ್ಟು ಬಿಸ್ಕೆಟ್‌ಗಳು

### ಸೂಚನೆಗಳು

1. ಮನೆಗೆ ಅತಿಥಿಗಳು ಬಂದಾಗ ಹೇಗೆ ಅವರನ್ನು ಉಪಚರಿಸಬೇಕು ಎಂಬುದನ್ನು ನಿರೂಪಿಸಿ ತೋರಿಸುವುದು.
2. 2–3 ನೀರಿನ ಲೋಟಗಳಿಗೆ ಸ್ವಲ್ಪ ನೀರು ತುಂಬಿಸಿಟ್ಟುಕೊಳ್ಳುವುದು.
3. ಲೋಟಗಳನ್ನು ಟ್ರೇಯಲ್ಲಿ ಇಡುವುದು.
4. ಟ್ರೇ ಹಿಡಿದುಕೊಂಡು, ಎರಡು–ಮೂರು ಮಕ್ಕಳಿಗೆ ಅತಿಥಿಗಳಾಗಿ ಪಾತ್ರಾಭಿನಯ ಮಾಡುವಂತೆ ಹೇಳುವುದು.
5. ಅವರಿಗೆ 'ನಮಸ್ಕಾರ' ಎಂದು ಹೇಳಿ, ನೀರಿನ ಲೋಟಗಳಿರುವ ಟ್ರೇಯನ್ನು ಒಂದು ಸಣ್ಣ ಸ್ಟೂಲ್ ಅಥವಾ ಮೇಜಿನ ಮೇಲೆ ಇಡುವುದು. 'ಸ್ವಲ್ಪ ನೀರು ಕುಡಿಯಿರಿ' ಎಂದು ಅವರಿಗೆ ಹೇಳುವುದು. ನೀವು ತುಂಬ ಸಭ್ಯತೆಯಿಂದ ಮಾತನಾಡುವಾಗ, ಬಂದವರಿಗೆ ಬನ್ನಿ ಎಂದು ಸ್ವಾಗತಿಸಿ, ಕೂರಿಸಿ, ನೀರು ಇತ್ಯಾದಿ ನೀವು ಹೇಗೆ ಕೇಳುತ್ತೀರಿ, ಏನಾದರೂ ತಿನ್ನಲು ಹೇಗೆ ಕೊಡುವಿರಿ ಎಂಬುದನ್ನು ಗಮನಿಸಲು ಮಕ್ಕಳಿಗೆ ಹೇಳುವುದು.
6. ಇದೇ ಪಾತ್ರಾಭಿನಯವನ್ನು ಪುನರಾವರ್ತಿಸಲು ಮಕ್ಕಳಿಗೆ ಮಾರ್ಗದರ್ಶನ ಮಾಡುವುದು. ಎಲ್ಲ ವಿದ್ಯಾರ್ಥಿಗಳಿಗೂ ಅವಕಾಶ ಸಿಗುವವರೆಗೆ ಇದನ್ನು ಮಾಡಿಸುವುದು.



Scanned with CamScanner

**ಚಟುವಟಿಕೆ 1**

## ಟ್ಯಾಗ್ (TAG)



### ಸೂಚನೆಗಳು

1. ಈ ಆಟವು ಸಾಮಾನ್ಯವಾಗಿ ಆಡುವ ಟ್ಯಾಗ್ ಆಟದಂತೆ ಇರುತ್ತದೆ. ಬೇರೆ ಮಕ್ಕಳನ್ನು ಹಿಡಿಯಲು ಒಬ್ಬ ವಿದ್ಯಾರ್ಥಿಯನ್ನು ಆಯ್ಕೆ ಮಾಡಬೇಕು. ಈ ವಿದ್ಯಾರ್ಥಿ ಇನ್ನೊಂದು ವಿದ್ಯಾರ್ಥಿಯನ್ನು ಮುಟ್ಟುತ್ತಿದ್ದಂತೆ ಅಂದರೆ ಟ್ಯಾಗ್ ಆಗುತ್ತಿದ್ದಂತೆ. ಅವರು ಸರಪಳಿಯ ಹಾಗೆ ಕೈ ಜೋಡಿಸಬೇಕು.
2. ಈ ಇಬ್ಬರು ಈಗ ಇನ್ನೊಂದು ವಿದ್ಯಾರ್ಥಿಯನ್ನು ಹಿಡಿದು, ಕೈ ಜೋಡಿಸಬೇಕು. ಹೀಗೆ ಮಕ್ಕಳ ಉದ್ದನೆಯ ಸರಪಳಿ ರೂಪುಗೊಳ್ಳುತ್ತದೆ. ಆದರೆ ಓಡಿ, ಇನ್ನೊಬ್ಬರನ್ನು ಹಿಡಿದುಕೊಳ್ಳುವಾಗ, ಸರಪಳಿ ಎಲ್ಲೂ ಕತ್ತರಿಸಬಾರದು. ಇಡೀ ಸರಪಳಿಯಾಗಿಯೇ ಇರಬೇಕು.
3. ಮಕ್ಕಳು ಓಡಿ, ಒಬ್ಬರನ್ನೊಬ್ಬರು ಹಿಡಿಯುವಾಗ ಕೆಳಕ್ಕೆ ಬೀಳದಂತೆ ನೋಡಿಕೊಳ್ಳುವುದು.

---

**ಚಟುವಟಿಕೆ 2**

## ಲಗೋರಿ

### ಕಲಿಕಾ ಸಾಮಗ್ರಿಗಳು

- ಏಳೆಂಟು ದೊಡ್ಡ, ಚಪ್ಪಟೆಯಾದ ಕಲ್ಲುಗಳು
- ಚೆಂಡು

### ಶಿಕ್ಷಕರ ಪೂರ್ವಸಿದ್ಧತೆ

ಸೂಚನೆಗಳನ್ನು ಒಮ್ಮೆ ಓದಿ, ಅಭ್ಯಾಸ ಮಾಡಿಕೊಂಡು ಸಿದ್ಧರಾಗಿರುವುದು.

### ಸೂಚನೆಗಳು

1. ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸುವುದು.
2. ಮಕ್ಕಳು ದೂರದಿಂದ ನಿಂತು ಚೆಂಡನ್ನು ಎಸೆಯಬೇಕು.
3. ನಿಲ್ಲಿಸಿರುವ ಎಲ್ಲಾ ಕಲ್ಲುಗಳು ಒಂದೇ ಎಸೆತದಲ್ಲಿ ಬೀಳುವಂತೆ ಚೆಂಡಿನಿಂದ ಕಲ್ಲುಗಳಿಗೆ ಹೊಡೆಯಬೇಕು.



Scanned with CamScanner


## ಸಂವಹನದ ನಿಯಮಗಳು

### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

### ಕಲಿಕಾ ಬೋಧನಾ ಸಾಮಗ್ರಿಗಳು

ಶಿಕ್ಷಕರ ಕಾರ್ಡುಗಳು



ಸಂಖ್ಯೆಗಳು

# ಪರಿಕಲ್ಪನೆ ಹಾಗೂ ನಿರ್ವಹಣೆ

Scanned with CamScanner

# ಕಲಿಕಾ ಫಲಿತಗಳು

## ಸಂಖ್ಯೆಗಳು: ಪರಿಕಲ್ಪನೆ ಹಾಗೂ ನಿರ್ವಹಣೆ

### 3–4 ವರ್ಷಗಳು

**ಕಲಿಕಾ ಫಲಿತಗಳು**

1. ಸಂಖ್ಯೆಗಳನ್ನು ಹೆಸರಿಸಲು ಕಲಿಯುವುದು (1 ರಿಂದ 10).
2. 1 ರಿಂದ 3ರವರೆಗೆ ಚಿಕ್ಕ ಗುಂಪಿನ ಎಣಿಕೆ ಮಾಡುವುದು.

**ಉಪಗುರಿಗಳು/ಚಟುವಟಿಕೆಗಳ ಸೂಚಕ ಪಟ್ಟಿ**

- ಸಂಖ್ಯೆಗಳು ಇರುವ ಸರಳ ಪದ್ಯಗಳನ್ನು ಅಭಿನಯದೊಂದಿಗೆ ಹಾಡುವುದು.
- ಎಣಿಕೆಯ ಸೂಚನೆಗೆ ತಕ್ಕಂತೆ ಆಟಗಳನ್ನು ಆಡುವುದು – (ಈ ಸಂಖ್ಯೆ ಕೇಳಿದ ತಕ್ಷಣ ಒಂದು ಅಭಿನಯ ಮಾಡಿ, ನಾನು ಮೂರು ಅಂತ ಹೇಳಿದ ಕೂಡಲೆ ಓಡಿರಿ ಇತ್ಯಾದಿ).
- ಮೌಖಿಕವಾಗಿ 10ರವರೆಗೆ ಸಂಖ್ಯೆಗಳನ್ನು ಹೇಳುವುದು.
- ಎಣಿಸುವುದು –ಬೇರೆ ಬೇರೆ ಗಾತ್ರದ ವಿವಿಧ ವಸ್ತುಗಳನ್ನು ಎಣಿಸುವುದು – ಉದಾಹರಣೆಗೆ 1ರಿಂದ 3 (ನನಗೆ ಒಂದು ಚೆಂಡು ಕೊಡು, ಎರಡು ಚೆಂಡುಗಳು, ಮೂರು ಚೆಂಡುಗಳು ಇತ್ಯಾದಿ) – ಎಷ್ಟು, ನನಗೆ ಇಷ್ಟು XXX ಕೊಡು.

### 4–5 ವರ್ಷಗಳು

**ಕಲಿಕಾ ಫಲಿತಗಳು**

1. ಸಂಖ್ಯೆಗಳನ್ನು ಹೆಸರಿಸಲು ಕಲಿಯುವುದು (1 ರಿಂದ 10).
2. ದೈನಂದಿನ ಬದುಕಿನಲ್ಲಿ 1–5ನ್ನು ಪ್ರತಿನಿಧಿಸುವ ವಸ್ತುಗಳ ಕುರಿತು ಮಾತನಾಡುವುದು.
3. 1–5ರವರೆಗೆ ಇರುವ ವಸ್ತುಗಳ ಗುಂಪಿನಲ್ಲಿ ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುವುದು (1–1 ಹೋಲಿಸಿ).
4. ಸಂಖ್ಯೆಗಳ ರೂಪದಲ್ಲಿ ಪರಿಮಾಣಗಳನ್ನು ವಿವರಿಸುವುದು.
5. 1–5ರವರೆಗೆ ಸಂಖ್ಯೆಯ ಚಿಹ್ನೆಗಳನ್ನು ಪರಿಮಾಣಕ್ಕೆ ಹೊಂದಿಸುವುದು.
6. ವಸ್ತುಗಳನ್ನು 1–5ರವರೆಗೆ ಅನುಕ್ರಮವಾಗಿ ಜೋಡಿಸುವುದು.
7. 1–5ರವರೆಗೆ ಪರಿಮಾಣಗಳನ್ನು ಹೋಲಿಸಿ, ಸಮಗೊಳಿಸುವುದು.

### 5–6 ವರ್ಷಗಳು

**ಕಲಿಕಾ ಫಲಿತಗಳು**

1. ಸಂಖ್ಯೆಗಳನ್ನು ಹೆಸರಿಸಲು ಕಲಿಯುವುದು (1ರಿಂದ 20).
2. 1ರಿಂದ 20ರವರೆಗೆ ಚಿಕ್ಕ ಗುಂಪಿನ ಎಣಿಕೆ ಮಾಡುವುದು.

**ಉಪಗುರಿಗಳು/ಚಟುವಟಿಕೆಗಳ ಸೂಚಕ ಪಟ್ಟಿ**

- ಮೌಖಿಕವಾಗಿ 1–10ರವರೆಗೆ ಸಂಖ್ಯೆಗಳನ್ನು ಎಣಿಸುವುದು.
- ಸಂಖ್ಯೆಗಳನ್ನು ಪರಿಮಾಣಗಳ ರೂಪದಲ್ಲಿ ವಿವರಿಸುವುದು ಮತ್ತು 1–20ರವರೆಗಿನ ಗುಂಪಿನಲ್ಲಿ ಯಾವುದು ದೊಡ್ಡದು ಎಂದು ಹೋಲಿಸುವುದು.
- ವಸ್ತುಗಳ ಗುಂಪಿನಲ್ಲಿ 1–20ರವರೆಗೆ ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುವುದು (1-1 ಹೋಲಿಸಿ).
- ಸಂಖ್ಯೆಗಳ ಚಿಹ್ನೆಗಳನ್ನು ಪರಿಮಾಣಕ್ಕೆ ಹೊಂದಿಸುವುದು.
- ಜೋಡಣೆ ಹೇಗೇ ಇದ್ದರೂ ಸಂಖ್ಯೆಗಳು ಅದೇ [illegible] ಅರ್ಥಮಾಡಿಕೊಳ್ಳುವುದು [illegible]
- ವಸ್ತುಗಳನ್ನು 1–10 ಕ್ರಮದಲ್ಲಿ ಜೋಡಿಸುವುದು.
- ಎಣಿಸುವುದು – ಬೇರೆ ಬೇರೆ ಗಾತ್ರದ ವಿವಿಧ ವಸ್ತುಗಳನ್ನು ಎಣಿಸುವುದು ಅಂದರೆ 1–10 (ನನಗೆ ಒಂದು ಚೆಂಡು ಕೊಡು, ಎರಡು ಚೆಂಡುಗಳು, ಮೂರು ಚೆಂಡುಗಳು ಇತ್ಯಾದಿ) – ಎಷ್ಟು, ನನಗೆ ಇಷ್ಟು XXX ಕೊಡು.
- ಬೇರೆ ಬೇರೆ ಪರಿಮಾಣಗಳನ್ನು ಬಳಸಿಕೊಂಡು ಹೋಲಿಸುವುದು.
- ಸಮಗೊಳಿಸುವುದು – 10 ಚೆಂಡುಗಳವರೆಗೆ, [illegible]
- ನನ್ನ ಬಳಿ 10 ಇವೆ. ಈಗ ನಿನ್ನ ಹತ್ತಿರ 8 ಇವೆ – ಇದನ್ನು 10 [illegible] ಮಾಡುತ್ತಿ?

## ಪರಿಕಲ್ಪನೆ ಹಾಗೂ ನಿರ್ವಹಣೆ




### ಕಲಿಕಾ ಉದ್ದೇಶಗಳು

ಈ ಅವಧಿಯ ಕೊನೆಯಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರಬೇಕು.

- ಸಂಖ್ಯೆಗಳನ್ನು ಹೆಸರಿಸಲು ಕಲಿಯುವುದು (1 ರಿಂದ 10).
- ದೈನಂದಿನ ಬದುಕಿನಲ್ಲಿ 1–5ನ್ನು ಪ್ರತಿನಿಧಿಸುವ ವಸ್ತುಗಳ ಕುರಿತು ಮಾತನಾಡುವುದು.
- 1–5ರವರೆಗೆ ಇರುವ ವಸ್ತುಗಳ ಗುಂಪಿನಲ್ಲಿ ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುವುದು (1–1 ಹೋಲಿಸಿ).
- ಸಂಖ್ಯೆಗಳ ರೂಪದಲ್ಲಿ ಪರಿಮಾಣಗಳನ್ನು ವಿವರಿಸುವುದು.
- 1–5ರವರೆಗೆ ಸಂಖ್ಯೆಯ ಚಿಹ್ನೆಗಳನ್ನು ಪರಿಮಾಣಕ್ಕೆ ಹೊಂದಿಸುವುದು.
- ವಸ್ತುಗಳನ್ನು 1–5ರವರೆಗೆ ಅನುಕ್ರಮವಾಗಿ ಜೋಡಿಸುವುದು.
- 1–5ರವರೆಗೆ ಪರಿಮಾಣಗಳನ್ನು ಹೋಲಿಸಿ, ಸಮಗೊಳಿಸುವುದು.

**ಗಮನಿಸಿ:** ಸಂಖ್ಯೆಯನ್ನು ಗುರುತಿಸಲು ಸಹಾಯವಾಗುವಂತೆ ಕ್ಯಾಲೆಂಡರಿನಲ್ಲಿ ದಿನಾಂಕವನ್ನು ನೋಡುವುದು ಅಥವಾ ಕ್ಯಾಲೆಂಡರ್ ಚಾರ್ಟ್ ಬದಲಿಸುವಾಗ ದಿನಾಂಕವನ್ನು ಜೋರಾಗಿ ಹೇಳುವುದನ್ನು ಮುಂದುವರೆಸಿ. ಈ ಚಟುವಟಿಕೆಯು ಸಮಯ ಮತ್ತು ಋತು ವಿಷಯದ ಉದ್ದೇಶಗಳೊಂದಿಗೂ ಸಂಬಂಧ ಹೊಂದಿದ್ದು ಇದನ್ನು ವರ್ಷವಿಡೀ ಮುಂದುವರೆಸುತ್ತಿರಬೇಕು.

### 1–5 ರವರೆಗಿನ ಸಂಖ್ಯೆಗಳು

**ಸೂಚನೆಗಳು:** ಅನೇಕ ಮಕ್ಕಳು ಸ್ವಲ್ಪಮಟ್ಟಿನ ಎಣಿಕೆಯ ಜ್ಞಾನದೊಂದಿಗೆ ತರಗತಿಗೆ ಬಂದಿರುತ್ತಾರೆ. ಆದರೆ 1, 2, 3, 4, 5 ಸಂಖ್ಯೆಗಳು ಏನನ್ನು ಸೂಚಿಸುತ್ತವೆ ಎಂಬ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದೆಯೇ ಅವುಗಳನ್ನು ಹೇಳಬಹುದು. 1, 2, 3, 4, 5 ಎಂದು ಹೇಳಲು ಬರುತ್ತದೆ ಎಂದಾಕ್ಷಣ ಈ ಸಂಖ್ಯೆಗಳು ಏನು ಎಂಬ ಬಗ್ಗೆ ಅವರಿಗೆ ಅರಿವಿದೆ ಎಂದರ್ಥವಲ್ಲ ಎಂದು ಗುರುತಿಸುವುದು ಬಹಳ ಮುಖ್ಯ. 1, 2, 3 (ಮತ್ತು 4, 5) ನಿರ್ದಿಷ್ಟ ಪರಿಮಾಣವನ್ನು ಸೂಚಿಸುತ್ತವೆ ಎಂಬುದನ್ನು ಮಕ್ಕಳು ಅರ್ಥಮಾಡಿಕೊಳ್ಳುವುದಕ್ಕಾಗಿ ಅವರಿಗೆ ಸಂಖ್ಯೆಗಳ ಪರಿಕಲ್ಪನೆಯನ್ನು ಪರಿಚಯಿಸುವುದು. ಒಂದು ಪರಿಮಾಣದೊಂದಿಗೆ ಅದರ ಸಂಬಂಧವನ್ನು ತಿಳಿಸುವುದು. ಅರ್ಥಪೂರ್ಣವಾಗಿ ಎಣಿಸುವುದು. ಪ್ರತಿ ಸಂಖ್ಯೆಗೂ (1, 2, 3, 4, 5) ಒಂದು ಚಿಹ್ನೆ ಇರುತ್ತದೆ ಮತ್ತು ಈ ಚಿಹ್ನೆಗಳನ್ನು ಪರಿಮಾಣ/ಗಾತ್ರದೊಂದಿಗೆ ಹೊಂದಿಸುವುದು. ಹೀಗೆ ಹಲವಾರು ಹಂತಗಳ ಮೂಲಕ ಕಲಿಸುತ್ತ ಹೋಗಬೇಕಾಗುತ್ತದೆ.



Scanned with CamScanner

# 1–5ನ್ನು ಪರಿಚಯಿಸುವುದು

## ಕಲಿಕಾ ಫಲಿತಗಳು

1–5 ರವರೆಗಿನ ಸಂಖ್ಯೆಗಳ ಹೆಸರುಗಳನ್ನು ಪರಿಚಯಿಸುವುದು ಮತ್ತು ಮಕ್ಕಳು ಸಂಖ್ಯೆಗಳೊಂದಿಗೆ ಹೊಂದಿರುವ ಸಂಬಂಧಗಳ ಕುರಿತು ಮಾತನಾಡುವುದು.

---

**ಚಟುವಟಿಕೆ 1**

## ಸಂಖ್ಯೆಗಳ ಪರಿಚಯ

**ಹಂತ 1: 1–5ವರೆಗಿನ ಸಂಖ್ಯೆಗಳ ಕುರಿತು ಮಕ್ಕಳ ಅರ್ಥೈಸಿಕೊಳ್ಳುವಿಕೆಯನ್ನು ಅಂದಾಜು ಮಾಡುವುದು**

ಇದು ಮಕ್ಕಳು ಸಂಖ್ಯೆಗಳ ಹೆಸರುಗಳನ್ನು ಕೇಳಿದ್ದಾರೆಯೇ ಮತ್ತು ಸಂಖ್ಯೆಗಳು ಪರಿಮಾಣವನ್ನು ಸೂಚಿಸುತ್ತದೆ ಎಂಬ ಕುರಿತು ಪ್ರಾಥಮಿಕ ಕಲ್ಪನೆ ಹೊಂದಿದ್ದಾರೆಯೇ ಎಂಬುದನ್ನು ತಿಳಿಯುವುದನ್ನು ಒಳಗೊಂಡಿದೆ.

1. ಮಕ್ಕಳಿಗೆ ಸಂಖ್ಯೆಗಳ ಹೆಸರುಗಳನ್ನು ಒಂದು, ಎರಡು, ಮೂರು, ನಾಲ್ಕು ಮತ್ತು ಐದು ಎಂದು ಹೇಳಿ ಅವರು ಈ ಮೊದಲೇ ಈ ಸಂಖ್ಯೆಗಳ ಹೆಸರುಗಳನ್ನು ಕೇಳಿದ್ದಾರೆಯೇ? ಎಂದು ಕೇಳಿ, ಕೇಳಿದ್ದರೆ ಕೈಯೆತ್ತಲು ಹೇಳುವುದು. ಮಕ್ಕಳು ಮೊದಲೇ ಕೇಳಿರಲಿಲ್ಲ ಎಂದರೆ ಪರವಾಗಿಲ್ಲ. ಕೈ ಮೇಲೆ ಎತ್ತಿದ ಮಕ್ಕಳನ್ನು ಅವರು ಈ ಹೆಸರುಗಳನ್ನು ಎಲ್ಲಿ ಕೇಳಿದ್ದಾರೆ? ಮತ್ತು ಯಾವ ಸಂದರ್ಭದಲ್ಲಿ ಅವುಗಳನ್ನು ಬಳಸಲಾಗಿದೆ? ಎಂದು ಕೇಳಿರಿ.
2. ಮಕ್ಕಳು ಸಂಖ್ಯೆಗಳ ಹೆಸರುಗಳನ್ನು ಪರಿಮಾಣದೊಂದಿಗೆ ಸಂಬಂಧಿಸುತ್ತಾರಾ? ಎಂದು ಪರೀಕ್ಷಿಸುವುದು. ಯಾವಾಗಲೂ 'ಒಂದು' ಆಗಿರುವ ಒಂದು ವಸ್ತುವಿನ ಕುರಿತು ಅವರು ಯೋಚಿಸಬಹುದೇ? ಎಂದು ಕೇಳುವುದು. ಅವರ ದೇಹದಲ್ಲಿ ಒಂದೇ ಒಂದು ಇರುವ ಅಂಗ ಯಾವುದು ಎಂದು ಯೋಚಿಸಬಹುದೇ? 2 ಇರುವ ಅಂಗ ಯಾವುದು? ನಮಗೆ ಎಷ್ಟು ಕೈಗಳಿವೆ? ನಮಗೆ ಎಷ್ಟು ಕಾಲುಗಳಿವೆ? ಈ ರೀತಿಯ ಚರ್ಚೆಯು ಸಂಖ್ಯೆಗಳು ಪರಿಮಾಣವನ್ನು ಸೂಚಿಸುತ್ತವೆ ಎಂಬ ಒಂದು ಅಸ್ಪಷ್ಟ ಅರ್ಥೈಸಿಕೊಳ್ಳುವಿಕೆಯತ್ತ ಮುನ್ನಡೆಯುತ್ತದೆ.

**ಹಂತ 2: ಸಂಖ್ಯೆಗಳ ಶಿಶುಗೀತೆಯನ್ನು ಹಾಡುವುದು**

1. ಮಕ್ಕಳಿಗೆ 1–10ರವರೆಗಿನ ಸಂಖ್ಯೆಗಳನ್ನು ಅನುಕ್ರಮವಾಗಿ ಪರಿಚಯಿಸುವ ಒಂದು ಶಿಶುಗೀತೆಯನ್ನು ಹೇಳಿಕೊಡುವುದು. ಶಿಶುಗೀತೆಯು ನಮ್ಮ ದೈನಂದಿನ ಜೀವನದಲ್ಲಿ ಕಾಣುವ ಸಂಗತಿಗಳ ಉದಾಹರಣೆಗಳನ್ನು ಹೊಂದಿರಬೇಕು.

ಶಿಶುಗೀತೆಯನ್ನು ಮುಗಿಸುತ್ತ ಮತ್ತೆ 1–2–3–4–5–6–7–8–9–10 ಎಂದು ಅನುಕ್ರಮವಾಗಿ ಹೇಳುವುದು.

ಒಂದು ಎರಡು
ಬಾಳೆಲೆ ಹರಡು

ಮೂರು ನಾಲ್ಕು
ಅನ್ನವ ಹಾಕು

ಐದು ಆರು
ಬೇಳೆ ಸಾರು

ಏಳು ಎಂಟು
ಪಲ್ಯಕ್ಕೆ ದಂಟು

ಒಂಬತ್ತು ಹತ್ತು
ಎಲೆ ಮುದಿರೆತ್ತು

ಒಂದರಿಂದ ಹತ್ತು ಹೀಗಿತ್ತು
ಊಟದ ಆಟವು ಮುಗಿದಿತ್ತು.



Scanned with CamScanner

# ದೈನಂದಿನ ಬದುಕಿನಲ್ಲಿ ಕಾಣುವ ಚಿಕ್ಕ ಸಂಖ್ಯೆಗಳನ್ನು ಅರ್ಥೈಸಿಕೊಳ್ಳುವುದು

## ಕಲಿಕಾ ಫಲಿತಗಳು

ಮಕ್ಕಳು ದೈನಂದಿನ ಜೀವನದಲ್ಲಿ ಕಾಣುವ 1–5 ರವರೆಗಿನ ಸಂಖ್ಯೆಗಳನ್ನು ಪ್ರತಿನಿಧಿಸುವ ವಸ್ತುಗಳ ಕುರಿತು ಮಾತನಾಡುವುದು.

**ಗಮನಿಸಿ:** ಮಕ್ಕಳು ಸಂಖ್ಯೆಗಳ ಒಂದು ಆಳವಾದ ಅರ್ಥೈಸಿಕೊಳ್ಳುವಿಕೆಯನ್ನು ಹೊಂದುವ ಅಗತ್ಯವಿದೆ. ಆದರೆ ಸಂಖ್ಯೆಗಳ ಪರಿಕಲ್ಪನೆಯನ್ನು ದೈನಂದಿನ ಅನುಭವಗಳಿಗೆ ಸಂಬಂಧಿಸುತ್ತಾ ಅವನ್ನು ಪರಿಮಾಣಕ್ಕೆ ಸಂಬಂಧ ಕಲ್ಪಿಸುವುದು ಬಹಳ ಮುಖ್ಯ.

---

**ಚಟುವಟಿಕೆ 1**

## ಸಂಖ್ಯೆಗಳು ಪರಿಮಾಣವನ್ನು ಪ್ರತಿನಿಧಿಸುತ್ತವೆ.

## ಕಲಿಕಾ ಸಾಮಗ್ರಿಗಳು

ದೇಹದ ಭಾಗಗಳು, ತರಗತಿ / ಶಾಲೆಯಲ್ಲಿರುವ ಸರಳವಾದ ವಸ್ತುಗಳು – ಬಾಗಿಲುಗಳು, ಕಿಟಕಿಗಳು, ಫ್ಯಾನ್, ಬಲ್ಬ್‌ಗಳು, ಬೋರ್ಡ್, ಆಟದ ಮೈದಾನದಲ್ಲಿರುವ ಜಾರುಬಂಡಿ ಇತ್ಯಾದಿ.

## ಸೂಚನೆಗಳು

1. ಅವರದೇ ದೇಹದ ಭಾಗಗಳ ಉದಾಹರಣೆಯನ್ನು ಅಥವಾ ಅವರ ಸುತ್ತಲಿನ ಪರಿಸರದಲ್ಲಿರುವ ವಸ್ತುಗಳ ಉದಾಹರಣೆಯನ್ನು ತೆಗೆದುಕೊಳ್ಳುವುದು. ನಮ್ಮ ದೇಹದ/ಮುಖದ ಯಾವ ಭಾಗ ಯಾವಾಗಲೂ ಒಂದು? ಯಾವುದು ಯಾವಾಗಲೂ ಎರಡು? ಯಾವುದು ಯಾವಾಗಲೂ ಐದು?
2. ಸುಲಭವಾಗಿ ಹೇಳಬಹುದಾದ ದೊಡ್ಡ ವಸ್ತುಗಳನ್ನು ಮಾತ್ರ ಉದಾಹರಣೆಯಾಗಿ ತೆಗೆದುಕೊಳ್ಳುವುದು (ಮೇಲೆ ಶಿಶುಗೀತೆಯಲ್ಲಿ ಹೇಳಿದ ವಸ್ತುಗಳನ್ನೂ, ಅಥವಾ ಶಾಲೆಯಲ್ಲಿರುವ ಕೊಠಡಿಗಳು, ಬಾಗಿಲುಗಳು ಇತ್ಯಾದಿ, ಒಳಗೊಳ್ಳಬಹುದು). ಉದಾಹರಣೆಗಳು 3ಕ್ಕಿಂತ ಮುಂದೆ ಹೋಗಬಾರದು. ಒಂದು ಅಥವಾ ಎರಡು ಆಗಿದ್ದರೆ ಉತ್ತಮ. ವಸ್ತುಗಳು ಮಕ್ಕಳಿಗೆ ಸುಲಭವಾಗಿ ಕಾಣುವಂಥದ್ದು ಮತ್ತು ಸರಳವಾಗಿರುವಂಥದ್ದಾಗಿದ್ದು, ಅವರ ಸುತ್ತಮುತ್ತಲಿರುವ ವಸ್ತುಗಳ ಪರಿಮಾಣವನ್ನು ಸಂಖ್ಯೆಯ ಮೂಲಕ ಗುರುತಿಸಬಹುದು ಎಂಬ ಕಲ್ಪನೆಯನ್ನು ನೀಡುವಂಥದ್ದಾಗಿರಬೇಕು.



Scanned with CamScanner

## ಪರಿಮಾಣದೊಂದಿಗೆ ಸಂಖ್ಯೆಗಳ ಹೆಸರುಗಳನ್ನು ಸಂಬಂಧೀಕರಿಸುವುದು

### ಕಲಿಕಾ ಫಲಿತಗಳು

ವಸ್ತುಗಳ ಸೂಚಕವಾಗಿ 'ಒಂದು, ಎರಡು ಮತ್ತು ಮೂರು' ಸಂಖ್ಯೆಗಳನ್ನು ಹೇಳಲು ಕಲಿಯುವುದು.

---

**ಚಟುವಟಿಕೆ 1**

### 1, 2 ಮತ್ತು 3ನ್ನು ವಸ್ತುಗಳ ಸೂಚಕವಾಗಿ ಪರಿಚಯಿಸುವುದು

### ಕಲಿಕಾ ಸಾಮಗ್ರಿಗಳು

- ತರಗತಿಯಲ್ಲಿರುವ ಎಲ್ಲ ಸಣ್ಣ ವಸ್ತುಗಳು.
- ಹುಣಸೇಬೀಜ ಅಥವಾ ಮಣಿಗಳು ಅಥವಾ ಚಿಕ್ಕ ಕಲ್ಲುಚೂರುಗಳಿರುವ ಡಬ್ಬಿ.

### ಶಿಕ್ಷಕರ ಪೂರ್ವಸಿದ್ಧತೆ

ಎಲ್ಲ ಮಕ್ಕಳಿಗೂ ಸಾಲುವಷ್ಟು ವಸ್ತುಗಳನ್ನು ಸಿದ್ಧವಾಗಿಟ್ಟುಕೊಳ್ಳುವುದು ಮತ್ತು ಅವುಗಳನ್ನು ಮಕ್ಕಳೆದುರು ಚಾಪೆಯ ಮೇಲೆ ಹರಡುವುದು.

### ಸೂಚನೆಗಳು

1. ಎಲ್ಲ ಮಕ್ಕಳೂ ವೃತ್ತಾಕಾರದಲ್ಲಿ ಕುಳಿತುಕೊಳ್ಳುವುದು.
2. ಒಂದು ಪೆನ್ಸಿಲ್ ತೆಗೆದುಕೊಂಡು, 'ಒಂದು ಪೆನ್ಸಿಲ್' ಎಂದು ಹೇಳಿ, ಅದನ್ನು ನಿಮ್ಮ ಎದುರು ಚಾಪೆಯ ಮೇಲೆ ಇಡುವುದು. ಮಕ್ಕಳಿಗೆ ಏನಾದರೊಂದು ವಸ್ತುವನ್ನು ಹಿಡಿದುಕೊಂಡು, ನಿಮ್ಮಂತೆಯೇ 'ಒಂದು' ಎಂದು ಹೇಳಿ, ಆ ವಸ್ತುವಿನ ಹೆಸರು ಹೇಳಿ, ಅದನ್ನು ಚಾಪೆಯ ಮೇಲೆ ನೀವು ಮಾಡಿದಂತೆಯೇ ಅವರ ಮುಂದೆ ಇಟ್ಟುಕೊಳ್ಳಲು ಹೇಳುವುದು.
3. ಪ್ರತಿಯೊಂದು ಮಗುವೂ ಒಂದು ವಸ್ತುವನ್ನು ತೆಗೆದುಕೊಂಡು, 'ಒಂದು' ಎಂದು ಹೇಳಿ, ಜೊತೆಗೆ ಆ ವಸ್ತುವಿನ ಹೆಸರು ಹೇಳುವುದು (ತರಗತಿ ಕೋಣೆಯಲ್ಲಿರುವ ಯಾವುದೇ ವಸ್ತು – ಪೆನ್ಸಿಲ್/ರಬ್ಬರ್/ಸೀಮೆಸುಣ್ಣ) ಮತ್ತು ಅದನ್ನು ಅವರ ಮುಂದೆ ಇಟ್ಟುಕೊಳ್ಳುವುದು. ಇದು ಮಗುವಿಗೆ 'ಒಂದು' ಎಂಬ ಧ್ವನಿಯು ಒಂದು ವಸ್ತುವಿನ ಪರಿಮಾಣ ಸೂಚಕ ಮತ್ತು ಅದು ಕೇವಲ ಶಬ್ದ ಅಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.
4. ಇದೇ ಪ್ರಕ್ರಿಯೆಯನ್ನು 2 ಸಂಖ್ಯೆಯೊಂದಿಗೆ ಪುನರಾವರ್ತಿಸಿ.
5. ಇದೇ ಪ್ರಕ್ರಿಯೆಯನ್ನು 3 ಸಂಖ್ಯೆಯೊಂದಿಗೆ ಪುನರಾವರ್ತಿಸಿ.



Scanned with CamScanner

## ವಿಸ್ತರಣಾ ಚಟುವಟಿಕೆಗಳು

### ಚಟುವಟಿಕೆ ೭

### ಸಂಖ್ಯೆಗಳ ಶಿಶುಗೀತೆ

**ಸೂಚನೆಗಳು:** ಎಲ್ಲ ಮಕ್ಕಳೂ ಒಂದು ವೃತ್ತದಲ್ಲಿ ನಿಂತುಕೊಂಡು, ಕೆಳಗಿನ ಶಿಶುಗೀತೆಯನ್ನು ಅಭಿನಯದೊಂದಿಗೆ ಹಾಡುವುದು.

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ತಲೆ ಇದೆ?
**ಮಕ್ಕಳು ಹೇಳುವರು:** ನನಗೆ ಒಂದು ತಲೆ ಇದೆ ಅಥವಾ ಒಂದು ತಲೆ
**ಶಿಕ್ಷಕರು ಹೇಳುವುದು:** ನಿಮ್ಮ ತಲೆಯನ್ನು ಮೇಲೆ, ಕೆಳಗೆ ಮಾಡಿ. (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಮೂಗು ಇದೆ?
**ಮಕ್ಕಳು ಹೇಳುವರು:** ನನಗೆ ಒಂದು ಮೂಗು ಇದೆ.
**ಶಿಕ್ಷಕರು ಹೇಳುವುದು:** ಉಸಿರು ಒಳಗೆ ತಗೊಂಡು, ಹೊರಗೆ ಬಿಡಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಬಾಯಿ ಇದೆ?
**ಮಕ್ಕಳು ಹೇಳುವರು:** ನನಗೆ ಒಂದು ಬಾಯಿ ಇದೆ.
**ಶಿಕ್ಷಕರು ಹೇಳುವುದು:** ಬಾಯಿ ತೆಗೆದು, ಆSSSS ಅನ್ನಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಹೊಟ್ಟೆ ಇದೆ?
**ಮಕ್ಕಳು ಹೇಳುವರು:** ನನಗೆ ಒಂದು ಹೊಟ್ಟೆ ಇದೆ. ಅಥವಾ ಒಂದು ಹೊಟ್ಟೆ
**ಶಿಕ್ಷಕರು ಹೇಳುವುದು:** ನಿಮ್ಮ ಹೊಟ್ಟೆ ಸವರಿಕೊಂಡು, ಉಮ್‌ಮ್‌ಮ್ ಅನ್ನಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಕಿವಿ ಇವೆ?
**ಮಕ್ಕಳು ಹೇಳುವರು:** ನನಗೆ ಎರಡು ಕಿವಿ ಇವೆ.
**ಶಿಕ್ಷಕರು ಹೇಳುವುದು:** ನಿಮ್ಮ ಕಿವಿಯನ್ನು ಮೇಲೆ, ಕೆಳಗೆ ಜಗ್ಗಿರಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಕಣ್ಣು ಇವೆ?
**ಮಕ್ಕಳು ಹೇಳುವರು:** ನನಗೆ ಎರಡು ಕಣ್ಣು ಇವೆ.
**ಶಿಕ್ಷಕರು ಹೇಳುವುದು:** ನನ್ನನ್ನೇ ನೋಡಿ / ನಿಮ್ಮ ಕಣ್ಣು ಮುಚ್ಚಿ, ತೆರೆದು ಮಾಡಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಕೈ ಇವೆ?
**ಮಕ್ಕಳು ಹೇಳುವರು:** ನನಗೆ ಎರಡು ಕೈ ಇವೆ.
**ಶಿಕ್ಷಕರು ಹೇಳುವುದು:** ನಿಮ್ಮ ಕೈ ಮೇಲೆತ್ತಿ, ಅಲ್ಲಾಡಿಸಿ / ನಿಮ್ಮ ಕೈಯಿಂದ ಚಪ್ಪಾಳೆ ಹೊಡೆಯಿರಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ನಿಮಗೆ ಎಷ್ಟು ಕಾಲುಗಳು ಇವೆ?
**ಮಕ್ಕಳು ಹೇಳುವರು:** ನನಗೆ ಎರಡು ಕಾಲುಗಳು ಇವೆ.
**ಶಿಕ್ಷಕರು ಹೇಳುವುದು:** ಒಂದು ಸಲ ಮೇಲೆ ಜಿಗಿದು, ಆಮೇಲೆ ಕೂತುಕೊಳ್ಳಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ಆಟೋರಿಕ್ಷಕ್ಕೆ ಎಷ್ಟು ಚಕ್ರ ಇವೆ?
**ಮಕ್ಕಳು ಹೇಳುವರು:** ಆಟೋರಿಕ್ಷಕ್ಕೆ ಮೂರು ಚಕ್ರ ಇವೆ.
**ಶಿಕ್ಷಕರು ಹೇಳುವುದು:** ಈಗ ನೀವು ಆಟೋರಿಕ್ಷಾ ಓಡಿಸಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

**ಶಿಕ್ಷಕರು ಕೇಳುವುದು:** ತೆಂಗಿನಕಾಯಿಗೆ ಎಷ್ಟು ಕಣ್ಣು ಇವೆ?
**ಮಕ್ಕಳು ಹೇಳುವರು:** ತೆಂಗಿನಕಾಯಿಗೆ ಮೂರು ಕಣ್ಣು ಇವೆ.
**ಶಿಕ್ಷಕರು ಹೇಳುವುದು:** ತೆಂಗಿನಕಾಯಿ ಅಲ್ಲಾಡಿಸಿ, ಕಾಯಿ ಒಳಗೆ ನೀರು ಅಲ್ಲಾಡುವ ಸದ್ದು ಮಾಡಿ (ಎಲ್ಲ ಮಕ್ಕಳೂ ಹೀಗೆ ಮಾಡುವರು)

ಈ ಶಿಶುಗೀತೆಯ ಜೊತೆ ಬೇರೆ ಕಲ್ಪನೆಗಳನ್ನೂ ಸೇರಿಸಿಕೊಳ್ಳಬಹುದು, ಆನೆಗೆ ಒಂದು ಸೊಂಡಿಲು, ಮಂಗಕ್ಕೆ ಒಂದು ಬಾಲ, ಹಕ್ಕಿಗೆ ಎರಡು ರೆಕ್ಕೆ, ಎಮ್ಮೆಗೆ ಎರಡು ಕೊಂಬು ಇತ್ಯಾದಿ.



Scanned with CamScanner

ಚಟುವಟಿಕೆ 3

## 1, 2 ಮತ್ತು 3 ಅನ್ನು ಪುನರ್‌ಬಲನ ಮಾಡುವುದು

### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ

### ಸೂಚನೆಗಳು

ಕಥೆ – ಸುಂಯ್‌ಯ್! ಎಂದು ಪುಟಿದೇಳು

- ಮಕ್ಕಳ ಕಣ್ಣಿನ ಮಟ್ಟಕ್ಕೆ ಕಥೆ ಪುಸ್ತಕವನ್ನು ಹಿಡಿಯುವುದು.
- ಕಥೆಯನ್ನು ಧ್ವನಿಯ ಏರಿಳಿತ ಮತ್ತು ಹಾವಭಾವದೊಡನೆ ಪೂರ್ಣವಾಗಿ ಒಮ್ಮೆ ಓದಿರಿ.



### ಕಥೆಯ ಸಂಕ್ಷಿಪ್ತ ರೂಪ

**ಸುಂಯ್‌ಯ್! ಎಂದು ಪುಟಿದೇಳು**

ಕಯಲ್ ಚೆಂಡನ್ನು ಮೇಲಕ್ಕೆ ಎಸೆದಳು. ಪಾರ್ಕಿನಲ್ಲಿ ಯಾರಿಗೂ ಅದನ್ನು ಹಿಡಿಯಲಾಗಲಿಲ್ಲ.
ಒಬ್ಬ ಚರಂಡಿಯನ್ನು ಸ್ವಚ್ಛಗೊಳಿಸುತ್ತಿದ್ದ. ಪಕ್ಕದಲ್ಲೇ ಚೆಂಡು ನೆಗೆಯಿತು. ಕೆಲಸದಲ್ಲಿ ಮುಳುಗಿದ್ದ ಅವನಿಗೆ ಚೆಂಡು ಹಿಡಿಯಲು ಆಗಲೇ ಇಲ್ಲ.
ಓಲಾಡುತ್ತಾ ಚಹಾ ಮಾರುತ್ತಿದ್ದ ಇಬ್ಬರ ಪಕ್ಕ ಚೆಂಡು ನೆಗೆಯಿತು. ಭಲೇ ಓಲಾಡುತ್ತಿದ್ದ ಅವರ ಕೈಗೆ ಚೆಂಡು ಸಿಗಲೇ ಇಲ್ಲ.
ಗಲಿಬಿಲಿಗೊಂಡಿದ್ದ ಮೂರು ಜನ ಸುರಕ್ಷತಾ ಸಿಬ್ಬಂದಿಯ ಪಕ್ಕ ಚೆಂಡು ಹಾರಿತು. ಗಲಿಬಿಲಿಯಲ್ಲಿ ಚೆಂಡು ಅವರ ಕಣ್ಣು ತಪ್ಪಿಯೇ ಹೋಯಿತು.
ಕೆಲಸದ ಭರದಲ್ಲಿದ್ದ ನಾಲ್ಕು ಜನ ಸ್ವಚ್ಛತಾ ಸಿಬ್ಬಂದಿಯ ಪಕ್ಕ ಚಿಮ್ಮಿತು ಚೆಂಡು. ಕಸಗುಡಿಸುತ್ತಿದ್ದ ಅವರಿಗೆ ಚೆಂಡು ಪುಟಿದಿದ್ದೇ ಗೊತ್ತಾಗಲಿಲ್ಲ.
ಬೆವರಿದ್ದ ಐದು ಜನ ಮಾಲಿಗಳ ಪಕ್ಕದಿಂದ ಪುಟಿಯಿತು ಚೆಂಡು, ಬೆವರಿದ್ದ ಅವರ ಕೈಗಳಿಂದ ಚೆಂಡು ಜಾರಿತು.
ಜೋರಾಗಿ ಓಡುತ್ತಿದ್ದ ಆರು ಜನರ ಪಕ್ಕ ನೆಗೆಯಿತು ಚೆಂಡು. ಅವರು ಎಷ್ಟು ಸುಸ್ತಾಗಿದ್ದರೆಂದರೆ ಚೆಂಡನ್ನು ತಿರುಗಿಯೂ ನೋಡಲಿಲ್ಲ.
ಹರಟುತ್ತಿದ್ದ ಏಳು ಜನ ಹೂ ಮಾಡುವವರ ಪಕ್ಕ ಪುಟಿಯಿತು ಚೆಂಡು. ಅವರು ಎಷ್ಟು ದೊಡ್ಡ ದನಿಯಲ್ಲಿ ಹರಟುತ್ತಿದ್ದರು ಎಂದರೆ ಚೆಂಡಿನ ಸದ್ದೇ ಕೇಳಲಿಲ್ಲ.
ವಿದ್ಯುತ್ ಕೆಲಸ ಮಾಡುತ್ತಿದ್ದ ಎಂಟು ಜನರ ಪಕ್ಕ ಚಿಮ್ಮಿತು ಚೆಂಡು, ಅವರು ಎಷ್ಟು ಹೆದರಿದ್ದರೆಂದರೆ ಚೆಂಡನ್ನು ಹಿಡಿಯುವ ಪ್ರಯತ್ನವನ್ನೇ ಮಾಡಲಿಲ್ಲ.
ಆರಾಮವಾಗಿ ಕೂತು ಹಪ್ಪಳ ಮಾಡುತ್ತಿದ್ದ ಒಂಭತ್ತು ಜನರ ಪಕ್ಕದಲ್ಲೇ ನೆಗೆಯಿತು ಚೆಂಡು. ತಲೆ ತಗ್ಗಿಸಿ ಕೂತಿದ್ದ ಅವರಿಗೆ ಚೆಂಡು ನೆಗೆದಿದ್ದೇ ಗೊತ್ತಾಗಲಿಲ್ಲ.
ಬಣ್ಣ ಬಳಿಯುತ್ತಿದ್ದ ಹತ್ತು ಜನರ ಪಕ್ಕ ಚಿಮ್ಮಿತು ಚೆಂಡು. ಕೆಲಸದಿಂದ ಸಾಕಾಗಿದ್ದ ಅವರ ಕಣ್ಣು ತಪ್ಪಿಸಿ ದೊಪ್ಪನೆ ಬಿತ್ತು ಚೆಂಡು! ಸುಂಯ್‌ಯ್‌ಯ್....

- ಕಥೆಯನ್ನು ಮತ್ತೊಮ್ಮೆ ಓದುವುದು.
- ಪ್ರತಿ ಪುಟದಲ್ಲಿರುವ ಚಿತ್ರಗಳನ್ನು ತೋರಿಸಿ, ಚೆಂಡು ಪ್ರತಿ ಸಲವೂ ಮೇಲೆ ಚಿಮ್ಮಿದಾಗ, ಅಲ್ಲಿ ಎಷ್ಟು ಜನರಿದ್ದರು ಎಂದು ಎಣಿಸಿ, ಉತ್ತರಿಸಲು ಹೇಳುವುದು. ಮಕ್ಕಳು ಮೂರರವರೆಗೆ ಎಣಿಸಲಿ. ಕಥೆಯನ್ನು ಮುಂದುವರೆಸಿ ಓದುವುದು.

ಮೂಲ: https://storyweaver.org.in/stories/25726-chimmu-chende (ಟಿಎಲ್‌ಎಂ ತಂಡಕ್ಕೆ, ಮುದ್ರಿಸುವ ಅಗತ್ಯವಿಲ್ಲ)





Scanned with CamScanner

# ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುವುದು

## ಕಲಿಕಾ ಫಲಿತಗಳು

ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುತ್ತ, (ಪ್ರತಿ ವಸ್ತುವಿನೊಂದಿಗೂ ಸಂಬಂಧೀಕರಿಸಿ) ಅರ್ಥಪೂರ್ಣವಾಗಿ ಎಣಿಸುವುದನ್ನು ಕಲಿಯುವುದು.

**ಗಮನಿಸಿ:** ಮಕ್ಕಳಿಗೆ ಪರಿಮಾಣವನ್ನು ಕಲಿಸುವಾಗ ಅರ್ಥಪೂರ್ಣವಾಗಿ ಎಣಿಸುವುದು ಮತ್ತು ಒಂದರ ನಂತರ ಇನ್ನೊಂದು ವಸ್ತುವನ್ನು ಎಣಿಸುವ ಪರಿಕಲ್ಪನೆಯನ್ನು ಈಗಾಗಲೇ ಪರಿಚಯಿಸಿರುತ್ತೀರಿ. ಮಕ್ಕಳಿಗೆ ವಸ್ತುಗಳನ್ನು ಎಣಿಸಲು ಅಥವ ಪ್ರತಿ ವಸ್ತುವಿನತ್ತ ಬೆರಳು ಮಾಡಿ ತೋರಿಸಲು ಅವಕಾಶ ಕಲ್ಪಿಸಿ. ಇದನ್ನು ಇನ್ನೊಮ್ಮೆ ಪುನರ್‌ಬಲನ ಮಾಡುವ ಅಗತ್ಯವಿದೆ. (ಸಾಮಾನ್ಯವಾಗಿ ಮಕ್ಕಳು ವಸ್ತುಗಳ ಸಂಖ್ಯೆಯತ್ತ ಸರಸರನೆ ಕೈ ತೋರಿಸುತ್ತ 1, 2, 3, 4, 5 ಎನ್ನುತ್ತಾರೆ. ಅರ್ಥಪೂರ್ಣವಾಗಿ ಎಣಿಕೆ ಮಾಡಲು, ಮಕ್ಕಳು ಪ್ರತಿ ವಸ್ತುವಿನತ್ತ ಪ್ರತ್ಯೇಕವಾಗಿ ಬೆರಳು ತೋರಿಸಿ, ಅದನ್ನು ಎಣಿಸಬೇಕು.)

---

**ಚಟುವಟಿಕೆ 1**

## ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಅಭಿನಯದೊಂದಿಗೆ ಹೇಳುವುದು

### ಸೂಚನೆಗಳು

1. ಎಲ್ಲ ಮಕ್ಕಳನ್ನೂ ವೃತ್ತಾಕಾರವಾಗಿ ನಿಲ್ಲಿಸುವುದು.
2. ಒಂದು ಚಪ್ಪಾಳೆ ಎಂದು ಹೇಳಿ, ಚಪ್ಪಾಳೆ ಹೊಡೆದ ನಂತರ 1 ಎಂದು ಎಣಿಸಿ. ಹಾಗೆಯೇ 2 ಚಪ್ಪಾಳೆ ಎಂದು ಹೇಳಿ, ಚಪ್ಪಾಳೆ ಹೊಡೆದ ನಂತರ 1, 2 ಎಂದು ಎಣಿಸಿ. 3 ಚಪ್ಪಾಳೆ ಎಂದು ಹೇಳಿ, ಚಪ್ಪಾಳೆ ಹೊಡೆದ ನಂತರ 1, 2, 3 ಎಂದು ಎಣಿಸುವುದು.
3. ಪ್ರತಿಯೊಂದು ಮಗುವೂ ಎದ್ದು ನಿಂತು, ನೀವು ಮಾಡುವುದನ್ನು ಪುನರಾವರ್ತನೆ ಮಾಡುವುದು.
4. ಈಗ 1 ಹೆಜ್ಜೆ ಅಥವಾ ಒಂದು ತಟ್ಟು ಎಂದು ಹೇಳಿ, ನಿಮ್ಮ ಕಾಲಿನಿಂದ ಒಮ್ಮೆ ನೆಲವನ್ನು ತಟ್ಟಿ, 1 ಎಂದು ಹೇಳಿ. ಇದೇ ರೀತಿಯಾಗಿ 2 ಮತ್ತು 3 ಹೇಳುತ್ತ ಮಾಡುವುದು.
5. ಪ್ರತಿಯೊಂದೂ ಮಗುವೂ ಎದ್ದು ನಿಂತು, ನೀವು ಮಾಡುವ ಚಟುವಟಿಕೆಯನ್ನು ಪುನರಾವರ್ತನೆ ಮಾಡುವುದು.
6. ಇದೇ ಚಟುವಟಿಕೆಯನ್ನು ಜಿಗಿಯುವುದರ ಜೊತೆಗೆ ಅಭ್ಯಾಸ ಮಾಡಬಹುದು. 1, 2, 3 ಜಿಗಿತ ಎಂದು ನೀವು ಪ್ರತಿ ಸಲ ಜಿಗಿಯುವಾಗ ಹೇಳಿ, ಎಣಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
7. ಪ್ರತಿ ಸಲವೂ ಮಕ್ಕಳು ಅಭಿನಯ ಮಾಡುವುದರ ಜೊತೆಗೆ ಎಣಿಕೆಯನ್ನು ಹೊಂದಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು. ಮಕ್ಕಳು ತುಂಬ ವೇಗವಾಗಿ ಎಣಿಸಿದರೆ ಅಥವಾ ಎಣಿಸದಿದ್ದರೆ, ಚಟುವಟಿಕೆಯನ್ನು ಪುನರಾವರ್ತಿಸುವಂತೆ ಹೇಳುವುದು. ಒಮ್ಮೆ ಇದನ್ನು ಮಾಡಿದ ನಂತರ, ಆಟವನ್ನು ಒಂದು ಚಟುವಟಿಕೆಯಾಗಿ ರೂಪಾಂತರಿಸಿ. ಮಕ್ಕಳಿಗೆ ಎದ್ದು ನಿಲ್ಲಲು ಹೇಳಿ, 2 ಚಪ್ಪಾಳೆ, 1 ಜಿಗಿತ, 3 ತಟ್ಟು ಇತ್ಯಾದಿ ಹೇಳುತ್ತ, ಅವರು ಹಾಗೆ ಎಣಿಸುತ್ತ ಮಾಡಲು ಸಮರ್ಥರೇ ಎಂದು ಪರೀಕ್ಷಿಸುವುದು.

Scanned with CamScanner

## ಚಟುವಟಿಕೆ 2

## ವಸ್ತುಗಳನ್ನು ಎಣಿಸುವುದು

**ಕಲಿಕಾ ಸಾಮಗ್ರಿಗಳು:** ತರಗತಿ ಕೋಣೆಯಲ್ಲಿರುವ ವಸ್ತುಗಳು – ಸೀಮೆಸುಣ್ಣ, ಮಣಿಗಳು, ಬೀಜಗಳು ಇತ್ಯಾದಿ.

### ಸೂಚನೆಗಳು

1. ಒಮ್ಮೆ ಮಕ್ಕಳು ತಾವು ಮಾಡುವುದನ್ನು ಎಣಿಸಲು ಕಲಿತ ನಂತರ, ಆ ಕೌಶಲವನ್ನು ವಸ್ತುಗಳನ್ನು ಎಣಿಸಲು ಬಳಸಬೇಕು. ನೆಲದ ಮೇಲೆ ವಸ್ತುಗಳನ್ನು 1ರಿಂದ 3ರ ವರೆಗೆ ಯಾವ ಸಂಖ್ಯೆಯಲ್ಲಾದರೂ ಇಡಿ. ಉದಾ: 2 ಸೀಮೆಸುಣ್ಣ, 1 ಮಣಿ, 3 ಬೀಜಗಳು ಹೀಗೆ.
2. ಒಂದರ ನಂತರ ಇನ್ನೊಂದು ವಸ್ತುವನ್ನು ಮುಟ್ಟಿ ಎಣಿಸುವ ವಿಧಾನವನ್ನು ಬಳಸಿಕೊಂಡು ವಸ್ತುಗಳನ್ನು ಎಣಿಸುವುದನ್ನು ನಿರೂಪಿಸಿ ತೋರಿಸುವುದು. ಒಮ್ಮೆ ನೀವು ಎಣಿಸುವುದನ್ನು ಮುಗಿಸಿದಾಗ, ಇಲ್ಲಿ 2 ಸೀಮೆಸುಣ್ಣವಿದೆ, 3 ಮಣಿಗಳಿವೆ ಎಂದು ಜೋರಾಗಿ ಹೇಳುವುದು. ಆಗ ಮಕ್ಕಳು ನೀವು ಎಣಿಸಿದ ಕೊನೆಯ ಸಂಖ್ಯೆಯು ಅಲ್ಲಿರುವ ವಸ್ತುಗಳ ಪರಿಮಾಣವನ್ನು ಸೂಚಿಸುತ್ತದೆ ಎಂದು ಅರ್ಥ ಮಾಡಿಕೊಳ್ಳುತ್ತಾರೆ.
3. ಮಕ್ಕಳಿಗೆ ಮುಂದೆ ಬಂದು, ಎಣಿಕೆ ಮಾಡುವುದಕ್ಕೆ ಆಸ್ಪದ ನೀಡುವುದು. ಅವರು ಎಣಿಸುವಾಗ, ತಾವು ಎಣಿಸುತ್ತಿರುವ ವಸ್ತುವಿನ ಮೇಲೆ ಬೆರಳು ಇಡುವುದನ್ನು ಖಾತ್ರಿಪಡಿಸಿಕೊಳ್ಳುವುದು. ಅವರು ತಪ್ಪು ಮಾಡುತ್ತಿದ್ದರೆ, ಅವರ ಕೈಯನ್ನು ಹಿಡಿದುಕೊಂಡು, ನೀವು ಮಾಡಿದ್ದನ್ನು ಅವರು ಪುನರಾವರ್ತಿಸುವಂತೆ ಮಾಡುವುದು.
4. ಈಗ ವಸ್ತುಗಳನ್ನು ಯಾವ ಕ್ರಮದಲ್ಲಾದರೂ ಜೋಡಿಸಿರಿ. ಮಕ್ಕಳಿಗೆ ಮುಂದೆ ಬಂದು, ಅವರ ಬೆರಳುಗಳನ್ನು ಬಳಸಿಕೊಂಡು ಈ ವಸ್ತುಗಳನ್ನು ಎಣಿಸುವ ಆಟವನ್ನು ಆಡಿಸುವುದು.

## ಚಟುವಟಿಕೆ 3

## ಬೆರಳು ಎತ್ತಿ 1, 2, 3 ಎಂದು ಎಣಿಸುವುದು

**ಕಲಿಕಾ ಸಾಮಗ್ರಿಗಳು:** ಪೆನ್ಸಿಲ್‌ಗಳು, ರಬ್ಬರ್‌ಗಳು, ಸೀಮೆಸುಣ್ಣ – ಪ್ರತಿಯೊಂದೂ 3.

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
2. ನಾವು ಈಗ ಬೆರಳುಗಳೊಂದಿಗೆ ಎಣಿಸುವುದನ್ನು ಕಲಿಯುತ್ತೇವೆ ಎಂದು ಮಕ್ಕಳಿಗೆ ಹೇಳುವುದು. 'ಒಂದು ಬೆರಳು' ಎಂದು ಹೇಳಿ, ಬೆರಳನ್ನು ಎತ್ತಿ ಎಲ್ಲ ಮಕ್ಕಳಿಗೆ ತೋರಿಸಲು ಹೇಳುವುದು. ಅವರು ಹಾಗೆಯೇ 2, 3 ಬೆರಳುಗಳನ್ನು ಎತ್ತಿ ತೋರಿಸಿ ಹೀಗೆಯೇ ಮಾಡುವುದು. ಮಕ್ಕಳು ಮೊದಲು ಮುಷ್ಟಿಯಲ್ಲಿ ಬೆರಳುಗಳನ್ನು ಮಡಚಿಟ್ಟುಕೊಳ್ಳಲಿ. ಆಮೇಲೆ ಅವರು ಒಂದು, ಎರಡು, ಮೂರು ಎಂದು ಎಣಿಸುತ್ತಿರುವಂತೆ ಬೆರಳುಗಳನ್ನು ಮುಷ್ಟಿಯಿಂದ ಹೊರಗೆ ಎತ್ತಿ ಹಿಡಿದು ಹೇಳಲಿ.
3. ಸ್ವಲ್ಪ ಅಭ್ಯಾಸ ಮಾಡಿದ ನಂತರ ಮಕ್ಕಳು ಒಂದೇ ಸಲಕ್ಕೆ ನಿರ್ದಿಷ್ಟ ಸಂಖ್ಯೆಯ ಬೆರಳುಗಳನ್ನು ಬಿಗಿಹಿಡಿದ ಮುಷ್ಟಿಯಿಂದ ಹೊರತೆಗೆಯಲು ಸಮರ್ಥರಾಗುತ್ತಾರೆ. ಎಲ್ಲ ಮಕ್ಕಳೂ ಎರಡು ಅಥವಾ ಮೂರು ಎಂದು ಹೇಳುತ್ತಿದ್ದಂತೆ ಅದೇ ಸಂಖ್ಯೆಯ ಬೆರಳುಗಳನ್ನು ಮೇಲೆ ಎತ್ತುವುದನ್ನು ಖಾತ್ರಿಪಡಿಸುವುದು ಅವಶ್ಯಕವಾಗುತ್ತದೆ. ಆರಂಭದಲ್ಲಿಯೇ ಸಂಖ್ಯೆಗಳ ಹೆಸರುಗಳನ್ನು ಮತ್ತು ಬೆರಳುಗಳ ಎಣಿಕೆಯ ನಡುವಣ ಸಂಬಂಧವನ್ನು ಮಕ್ಕಳಿಗೆ ಮನಗಾಣಿಸಲು ಈ ಚಟುವಟಿಕೆ ಸಹಾಯಕವಾಗುತ್ತದೆ.
4. ಮೇಲಿನ ಚಟುವಟಿಕೆಯ ನಂತರ ಮಕ್ಕಳಿಗೆ 1 ಬೆರಳು, ಎರಡು ಬೆರಳು ಹೀಗೆ ಪೂರ್ಣವಾಗಿ ಹೇಳುವ ಬದಲಿಗೆ ಒಂದು, ಎರಡು ಅಥವಾ ಮೂರು ಎಂದು ಬರಿದೇ ಹೇಳುತ್ತ, ಜೊತೆಗೆ 1, 2 ಅಥವಾ 3 ಎಂದು ಬೆರಳುಗಳನ್ನು ತೋರಿಸುತ್ತ ಮಾಡಬೇಕು. ಹೀಗೆಯೇ 10ರವರೆಗೂ ಹೇಳುತ್ತ, ಬೆರಳು ತೋರಿಸುತ್ತ ಮುಂದುವರೆಸಬೇಕು. ಇದು ಮಕ್ಕಳಿಗೆ 1–10ರವರೆಗೆ ಪ್ರತಿನಿಧಿಸಲು ಬೆರಳುಗಳನ್ನು ಬಳಸುವುದನ್ನು ಕಲಿಯಲು ಸಹಾಯಕವಾಗುತ್ತದೆ.





Scanned with CamScanner

## ವಿಸ್ತರಣಾ ಚಟುವಟಿಕೆಗಳು

# ಸಂಖ್ಯೆಗಳ ಚಿಹ್ನೆಗಳನ್ನು ಕಲಿಸುವುದು

**ಕಲಿಕಾ ಫಲಿತಗಳು**: ಮಕ್ಕಳು 1, 2, 3ರ ಚಿಹ್ನೆಗಳನ್ನು ಗುರುತಿಸುವುದು.

---

### ಚಟುವಟಿಕೆ 1

## ಸಂಖ್ಯೆಗಳ ಚಿಹ್ನೆಗಳನ್ನು ಪರಿಚಯಿಸುವುದು




**ಕಲಿಕಾ ಸಾಮಗ್ರಿಗಳು**: ಮಿಂಚುಪಟ್ಟಿ ಸರಣಿ **CF9.1–1, 2, 3** ಸಂಖ್ಯೆಗಳು.


### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
2. '1', '2', '3' ಸಂಖ್ಯೆಯ ಚಿಹ್ನೆಗಳ ಮಿಂಚುಪಟ್ಟಿಗಳನ್ನು ತೋರಿಸುವುದು. ಸಾಮಾನ್ಯವಾಗಿ ತೋರಿಸುವ ಬೇರೆ ಚಿತ್ರಗಳಿಗಿಂತ ಸಂಖ್ಯೆಗಳುಳ್ಳ ಮಿಂಚುಪಟ್ಟಿಗಳು ದೊಡ್ಡದಾಗಿದ್ದು, ಪ್ರತಿ ಮಗುವಿನ ಗಮನ ಸೆಳೆಯಲು ಮತ್ತು ಪ್ರತಿ ಮಗುವೂ ಅದನ್ನು ನೋಡಲು ಸಾಧ್ಯವಾಗುವಂತೆ ಇರಬೇಕು. ಮಕ್ಕಳಿಗೆ ಈ ಚಿಹ್ನೆಗಳನ್ನು ನೋಡಿದ್ದೀರಾ? ಎಂದು ಕೇಳುವುದು.
3. ಒಂದು ಮಗು ಅಥವಾ ಕೆಲವು ಮಕ್ಕಳು ನೋಡಿದ್ದರೆ, ಅವರು ಎಲ್ಲಿ ನೋಡಿದ್ದಾರೆ? ಎಂಬ ಸಂಭಾಷಣೆಯಲ್ಲಿ ತೊಡಗಿಸಿ, ಅವರು ಇದರ ಬಗ್ಗೆ ಏನು ಅರ್ಥಮಾಡಿಕೊಂಡಿದ್ದಾರೆ? ಅವರಿಗೆ ಈಗಾಗಲೇ ಚಿಹ್ನೆಗಳ ಹೆಸರುಗಳು ಗೊತ್ತಿವೆಯೇ? ಎಂದು ಕೇಳುವುದು.
4. ನಂತರ ಚಿಹ್ನೆಗಳ ಹೆಸರುಗಳನ್ನು ಒಂದು, ಎರಡು, ಮೂರು ಎಂದು ಪರಿಚಯಿಸಿ. ಪ್ರತಿ ಮಗುವೂ ಮುಂದೆ ಬಂದು, ಮಿಂಚುಪಟ್ಟಿಯ ಮೇಲೆ ಬೆರಳಿನಿಂದ ತಿದ್ದುತ್ತಾ, ಒಂದು, ಎರಡು, ಮೂರು ಎಂದು ಹೇಳುವಂತೆ ಮಾಡುವುದು.

---

### ಚಟುವಟಿಕೆ 2

## ತಿದ್ದುವುದು ಮತ್ತು ಬಣ್ಣ ಹಚ್ಚುವುದು




**ಕಲಿಕಾ ಸಾಮಗ್ರಿಗಳು**: ತಿದ್ದುವ ಮತ್ತು ಬಣ್ಣ ಹಚ್ಚುವ ಹಾಳೆಗಳು (**CWS9.1-1, CWS9.1-2, CWS9.1-3** ಸಂಖ್ಯೆಗಳು

### ಸೂಚನೆಗಳು

ಮಕ್ಕಳಿಗೆ ತಿದ್ದುವ ಟ್ರೇಸಿಂಗ್ ಕಾರ್ಡ್‌ಗಳನ್ನು ಕೊಡುವುದು. ಮಕ್ಕಳು ಅದರಲ್ಲಿ ಸಂಖ್ಯೆಗಳನ್ನು ತಿದ್ದಿ, ನಂತರ ಅದಕ್ಕೆ ಬಣ್ಣ ಹಚ್ಚುವುದು. ಅದು ಅವರಿಗೆ 1, 2, 3 ಎಂದು ಚಿಹ್ನೆಗಳನ್ನು ಗುರುತಿಸಲು ಸಹಾಯಕವಾಗುವುದು.

---

### ಚಟುವಟಿಕೆ 3

## ಸಂಖ್ಯೆಯ ಆಟ

**ಕಲಿಕಾ ಸಾಮಗ್ರಿಗಳು**: ಮಿಂಚುಪಟ್ಟಿ ಸರಣಿ **CF9.1–1, 2, 3** ಸಂಖ್ಯೆಗಳು

### ಸೂಚನೆಗಳು

ಈ ಚಟುವಟಿಕೆಯಲ್ಲಿ ನೀವು ಒಂದು ಸಂಖ್ಯೆಯನ್ನು ಜೋರಾಗಿ ಹೇಳುವುದು. ಮಕ್ಕಳು ಎದ್ದು ಬಂದು, ಆ ಸಂಖ್ಯೆಯ ಸರಿಯಾದ ಚಿಹ್ನೆಯಿರುವ ಮಿಂಚುಪಟ್ಟಿಯನ್ನು ತೆಗೆದುಕೊಳ್ಳುವುದು.



Scanned with CamScanner

# ಸಂಖ್ಯೆಯ ಮೌಲ್ಯಕ್ಕೆ ಸರಿಯಾಗಿ ಸಂಖ್ಯೆಯ ಚಿಹ್ನೆಯನ್ನು ಹೊಂದಿಸುವುದು

## ಕಲಿಕಾ ಫಲಿತಗಳು

ಸಂಖ್ಯೆಗಳ ಚಿಹ್ನೆಗಳು ಅದಕ್ಕನುಗುಣವಾದ ಪರಿಮಾಣವನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಮಕ್ಕಳು ಕಲಿಯುವುದು.

---

**ಚಟುವಟಿಕೆ 1**

## ಗುಂಪು ಚಟುವಟಿಕೆ

**ಕಲಿಕಾ ಸಾಮಗ್ರಿಗಳು**: ಮಿಂಚುಪಟ್ಟಿ ಸರಣಿ CF9.1–1, 2, 3 ಸಂಖ್ಯೆಗಳು

### ಸೂಚನೆಗಳು

1. ಮಕ್ಕಳನ್ನು 5 ಗುಂಪುಗಳಾಗಿ ಮಾಡುವುದು. ಪ್ರತಿ ಗುಂಪಿಗೂ ಒಂದೊಂದು ಕ್ರಿಯೆ ಮಾಡುವಂತೆ ಹೇಳುವುದು (ಜಿಗಿಯುವುದು, ಚಪ್ಪಾಳೆ ಹಾಕುವುದು, ತಟ್ಟುವುದು, ಕಾಲಿನಿಂದ ತುಳಿಯುವುದು ಮತ್ತು ತಲೆಯಲ್ಲಾಡಿಸುವುದು).
2. ನೀವು 1, 2 ಅಥವಾ 3 ಸಂಖ್ಯೆಯ ಚಿಹ್ನೆಯಿರುವ ಒಂದು ಕಾರ್ಡ್ ಅನ್ನು ಹಿಡಿಯುವಿರಿ ಮತ್ತು ಮಕ್ಕಳು ಆ ಸಂಖ್ಯೆಯ ಚಿಹ್ನೆಗೆ ಅನುಗುಣವಾಗಿ ಅವರಿಗೆ ಮಾಡಲು ಹೇಳಿರುವ ಕ್ರಿಯೆಯನ್ನು ಮಾಡಬೇಕು ಎಂದು ಮಕ್ಕಳಿಗೆ ಹೇಳುವುದು.
3. ಯಾವುದೇ ಕ್ರಮದಲ್ಲಾದರೂ ಕಾರ್ಡ್‌ಗಳನ್ನು ಎತ್ತಿ ಹಿಡಿದು ಮಕ್ಕಳು ಆ ಸಂಖ್ಯೆಗೆ ಅನುಗುಣವಾದ ಕ್ರಿಯೆಯನ್ನು ಮಾಡುವಂತೆ ಹೇಳುವುದು. ಅವರು ಇದನ್ನು ಹಲವಾರು ಸಲ ಮಾಡಿ, ಆತ್ಮವಿಶ್ವಾಸ ಗಳಿಸಿದ ನಂತರ, ಪ್ರತಿ ಗುಂಪಿನಿಂದ ಒಂದು ಮಗುವನ್ನು ಕರೆದು, ನೀವು ಎತ್ತಿ ತೋರಿಸಿದ ಕಾರ್ಡ್‌ನಲ್ಲಿರುವ ಸಂಖ್ಯೆಗೆ ಅನುಗುಣವಾದ ಕ್ರಿಯೆಗಳನ್ನು ಮಾಡಿ ತೋರಿಸಲು ಹೇಳುವುದು.
4. ಪರಿಕಲ್ಪನೆಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಇರುವ ಮಕ್ಕಳು ಯಾರು ಎಂದು ಪರಿಶೀಲಿಸಿ, ಆ ಮಕ್ಕಳಿಗೆ ವಿವರಣೆ ಹಾಗೂ ತಿದ್ದುವ ಚಟುವಟಿಕೆಗಳನ್ನು ಮತ್ತೊಮ್ಮೆ ಮಾಡಿಸುವುದು.

---

**ಚಟುವಟಿಕೆ 2**

## ಇಬ್ಬರು ಮಕ್ಕಳು ಜೊತೆಗೂಡಿ ಕೆಲಸ ಮಾಡುವುದು

**ಕಲಿಕಾ ಸಾಮಗ್ರಿಗಳು**: ಮಣಿಗಳು, ಬೀಜಗಳು, ಸೀಮೆಸುಣ್ಣದ ಚೂರುಗಳು, ಮಿಂಚುಪಟ್ಟಿ ಸರಣಿ CF9.1 (1 ರಿಂದ 3)–1, 2, 3 ಸಂಖ್ಯೆಗಳು–ಇಡೀ ತರಗತಿಗೆ ಆಗುವಷ್ಟು ಕಾರ್ಡ್‌ಗಳು ಇರಲಿಲ್ಲ ಎಂದರೆ ಇನ್ನಷ್ಟು ಕಾರ್ಡ್‌ಗಳನ್ನು ನೀವೇ ಮಾಡಿಕೊಳ್ಳುವುದು.

### ಸೂಚನೆಗಳು

1. ಮಣಿಗಳು, ಬೀಜಗಳು, ಸೀಮೆಸುಣ್ಣದ ಚೂರುಗಳನ್ನು ತರಗತಿ ಕೋಣೆಯ ಬೇರೆ ಬೇರೆ ಕಡೆ, ವಿವಿಧ ಸಂಖ್ಯೆಯಲ್ಲಿ ಇರುವಂತೆ ಜೋಡಿಸುವುದು.
2. ಮಕ್ಕಳನ್ನು ಇಬ್ಬಿಬ್ಬರಂತೆ ಜೋಡಿಯಾಗಿ ಮಾಡುವುದು. ಸಂಖ್ಯೆಯ ಚಿಹ್ನೆಯಿರುವ 3 ಮಿಂಚುಪಟ್ಟಿಗಳನ್ನು ತೆಗೆದುಕೊಂಡು, ಒಂದು ಗುಂಪಿನ ವಸ್ತುಗಳನ್ನು ಹೇಗೆ ಎಣಿಸುವುದು ಎಂಬುದನ್ನು ತೋರಿಸುವುದು. ನಂತರ ಪ್ರತಿ ಜೋಡಿಯ ಪಕ್ಕದಲ್ಲಿ ಅದಕ್ಕೆ ಸರಿಹೊಂದುವ ಸಂಖ್ಯೆಯ ಚಿಹ್ನೆಯ ಕಾರ್ಡ್ ಅನ್ನು ಇಡುವುದು.
3. ಜೊತೆಯಾಗಿರುವ ಇಬ್ಬರು ಮಕ್ಕಳಿಗೆ ಕಾರ್ಡ್‌ಗಳನ್ನು ಕೊಟ್ಟು, ಅವರಿಗೆ ಅದರಲ್ಲಿ ತೋರಿಸಿದಷ್ಟು ಸಂಖ್ಯೆಯ ವಸ್ತುಗಳನ್ನು ಎಣಿಸಿ, ಕಾರ್ಡ್ ಅನ್ನು ಆ ಸಂಖ್ಯೆಯ ವಸ್ತುಗಳ ಪಕ್ಕದಲ್ಲಿ ಇಡಲು ಹೇಳುವುದು. ವಸ್ತುಗಳ ಸಂಖ್ಯೆ ಮತ್ತು ಕಾರ್ಡ್‌ನಲ್ಲಿ ತೋರಿಸಿದ ಸಂಖ್ಯೆಯ ಚಿಹ್ನೆ ಒಂದೇ ಆಗಿರಬೇಕು.



Scanned with CamScanner

ಚಟುವಟಿಕೆ 3

## ವೈಯಕ್ತಿಕವಾಗಿ ಮಾಡುವುದು

### ಕಲಿಕಾ ಸಾಮಗ್ರಿಗಳು

ಮಣಿಗಳು, ಬೀಜಗಳು, ಸೀಮೆಸುಣ್ಣದ ಚೂರುಗಳು, ಮಿಂಚುಪಟ್ಟಿ ಸರಣಿ CF9.1 (1 ರಿಂದ 3) – 1, 2, 3 ಸಂಖ್ಯೆಗಳು

### ಸೂಚನೆಗಳು

1. ಮಕ್ಕಳು ಮಣಿಗಳು/ಹುಣಿಸೇಬೀಜಗಳು/ಸೀಮೆಸುಣ್ಣದ ಚೂರುಗಳನ್ನು ತಮ್ಮ ಎದುರಿಗೆ ಇಟ್ಟುಕೊಂಡು ವೃತ್ತಾಕಾರದಲ್ಲಿ ಕೂರುವಂತೆ ಮಾಡುವುದು.
2. ಅವರಿಗೆ '1, 2, 3' ಸಂಖ್ಯೆಯ ಮಿಂಚುಪಟ್ಟಿಗಳನ್ನು ತೋರಿಸಿ, "ನನಗೆ ______ (ಕಾರ್ಡ್‌ನಲ್ಲಿರುವ ಸಂಖ್ಯೆಯ ಚಿಹ್ನೆಯನ್ನು ತೋರಿಸಿ) ಮಣಿಗಳು/ಹುಣಿಸೇಬೀಜಗಳು/ಸೀಮೆಸುಣ್ಣದ ಚೂರುಗಳನ್ನು ಕೊಡು" ಎನ್ನುವುದು. ಮಗುವು ಅಷ್ಟು ಸಂಖ್ಯೆಯ ವಸ್ತುಗಳನ್ನು ಎತ್ತಿಕೊಂಡು, ಚಾಪೆಯ ಮೇಲೆ ತನ್ನ ಮುಂದೆ ಇಡುವುದು.
3. ಇದನ್ನು ಬೇರೆ ಕೆಲವು ವಸ್ತುಗಳಿಗೂ ಪುನರಾವರ್ತನೆ ಮಾಡಿ, ಮಕ್ಕಳು ಸಂಖ್ಯೆಗಳ ಹೆಸರಿನ ಚಿಹ್ನೆ ಮತ್ತು ಪರಿಮಾಣದ ನಡುವಿನ ಸಂಬಂಧವನ್ನು ಪೂರ್ಣ ಅರ್ಥಮಾಡಿಕೊಳ್ಳುವವರೆಗೂ ಮುಂದುವರೆಸುವುದು.

---

ಚಟುವಟಿಕೆ 4

## ಸಂಖ್ಯೆಯ ಹೆಸರು, ಚಿಹ್ನೆ ಮತ್ತು ಬೆರಳನ್ನು ಎತ್ತುವುದು ಇವೆಲ್ಲವುಗಳ ಮೂಲಕ ವಸ್ತುಗಳ ಜೊತೆಗೆ ಪರಸ್ಪರ ಸಂಬಂಧೀಕರಿಸುವುದು

### ಕಲಿಕಾ ಸಾಮಗ್ರಿಗಳು

ಒಂದೇ ಗಾತ್ರದ ಮಣಿಗಳು, ಮಿಂಚುಪಟ್ಟಿ ಸರಣಿ CF9.1 (1 ರಿಂದ 3) – 1, 2, 3 ಸಂಖ್ಯೆಗಳು

### ಸೂಚನೆಗಳು

1. ಮಕ್ಕಳು ಒಂದೇ ಗಾತ್ರದ ಮಣಿಗಳನ್ನು ಅವರ ಮುಂದೆ ಚಾಪೆಯ ಮೇಲೆ ಹರಡಿಟ್ಟುಕೊಂಡು ಕೂರುವಂತೆ ಮಾಡುವುದು.
2. ಈಗ ಸಂಖ್ಯೆಯ ಹೆಸರನ್ನು ಜೋರಾಗಿ ಹೇಳಿ, ಅಷ್ಟೇ ಸಂಖ್ಯೆಯ ಮಣಿಗಳನ್ನು ನಿಮಗೆ ಕೊಡಲು ಹೇಳುವುದು ಅಥವಾ ಕೈ ಬೆರಳುಗಳನ್ನು ಎತ್ತಲು ಹೇಳುವುದು ಅಥವಾ ಅವರ ಬಳಿ ಇರುವ ಸಂಖ್ಯೆಯ ಚಿಹ್ನೆಯ ಮಿಂಚುಪಟ್ಟಿಯನ್ನು ತೋರಿಸಲು ಹೇಳುವುದು.
3. ನೀವು 'ಒಂದು ಸಂಖ್ಯೆ, ಅಥವಾ ಇಷ್ಟು ಬೆರಳು ಎತ್ತಿ ಅಥವಾ ಈ ಸಂಖ್ಯೆಯ ಮಿಂಚುಪಟ್ಟಿ ತೋರಿಸಿ' ಎಂದು ಹೇಳಿದಾಗ ಆ ಎಲ್ಲ ಪರಿಮಾಣಗಳು ಒಂದೇ ಎಂದು ಮಕ್ಕಳು ಅರ್ಥ ಮಾಡಿಕೊಳ್ಳುವುದನ್ನು ಇದು ಖಾತ್ರಿಪಡಿಸುತ್ತದೆ.



Scanned with CamScanner

## ಅನುಕ್ರಮಣಿಕೆ/ಯಾವುದು ಹೆಚ್ಚು ಅಥವಾ ಕಡಿಮೆ ತೋರಿಸುವುದು

### ಕಲಿಕಾ ಫಲಿತಗಳು

ಮಕ್ಕಳು ಸಂಖ್ಯೆಗಳನ್ನು ಅವುಗಳ ಪರಿಮಾಣಗಳ ಅರ್ಥದಲ್ಲಿ ಹೋಲಿಸಲು ಕಲಿಯುವುದು.

**ಚಟುವಟಿಕೆ 1**


### ಕಡಿಮೆಯಿಂದ ಹೆಚ್ಚು ಸಂಖ್ಯೆ – ಪರಿಮಾಣ

### ಕಲಿಕಾ ಸಾಮಗ್ರಿಗಳು

- ಮಿಂಚುಪಟ್ಟಿ ಸರಣಿ **CF9.1** (1 ರಿಂದ 3) – 1, 2, 3 ಸಂಖ್ಯೆಗಳು
- ಒಂದೇ ಗಾತ್ರದ ಮಣಿಗಳು
- ಬ್ಲಾಕ್‌ಗಳು, ಕಡ್ಡಿಗಳು, ಪುಸ್ತಕಗಳು ಇತ್ಯಾದಿ

### ಸೂಚನೆಗಳು

1. ಚಾಪೆಯ ಮೇಲೆ 1 ಮಣಿ, 2 ಮಣಿ, 3 ಮಣಿಗಳನ್ನು ಬೇರೆ ಬೇರೆ ಕ್ರಮದಲ್ಲಿ ನಡುವೆ ಸ್ವಲ್ಪ ಜಾಗ ಬಿಟ್ಟು ಹೊಂದಿಸುವುದು.
2. ಮಕ್ಕಳನ್ನು ಹತ್ತಿರ ಕರೆದು, ಜೋಡಣೆಯನ್ನು ಗಮನಿಸಲು ಹೇಳುವುದು. ಮಕ್ಕಳಿಗೆ ಅವರು ಪರಿಮಾಣದ ಜೊತೆ ಮಾಡಿದ ಚಟುವಟಿಕೆಯನ್ನು ನೆನಪಿಸುವುದು. ಯಾವುದು ಹೆಚ್ಚು ಇರುವಂತೆ ಮತ್ತು ಯಾವುದು ಕಡಿಮೆ ಇರುವಂತೆ ಕಾಣುತ್ತದೆ? ಮಕ್ಕಳು ಪರಿಮಾಣದ ಆಧಾರದ ಮೇಲೆ ವಸ್ತುಗಳನ್ನು ಜೋಡಿಸಬಹುದು.
3. ಈಗ ಮಕ್ಕಳನ್ನು ಎಣಿಸಲು ಹೇಳುವುದು ಮತ್ತು ಆ ಪರಿಮಾಣದ ವಸ್ತುಗಳ ಪಕ್ಕದಲ್ಲಿ ಆ ಸಂಖ್ಯೆಯ ಮಿಂಚುಪಟ್ಟಿಯನ್ನು ಇಡಲು ಹೇಳುವುದು.
4. ಇದೇ ಜೋಡಣೆಯನ್ನು ಬೇರೆ ವಸ್ತುಗಳ ಜೊತೆಗೂ ಮಾಡಬಹುದು ಎಂದು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ಬ್ಲಾಕ್‌ಗಳು, ಕಡ್ಡಿಗಳು, ಪುಸ್ತಕಗಳು ಇತ್ಯಾದಿಗಳನ್ನು ಕೊಟ್ಟು, 1, 2 ಅಥವಾ 3 ವಸ್ತುಗಳನ್ನು ಕಡಿಮೆಯಿಂದ ಹೆಚ್ಚು ಸಂಖ್ಯೆಯ ಕ್ರಮದಲ್ಲಿ ಜೋಡಿಸಲು ಹೇಳುವುದು. ಮತ್ತು ನಂತರ ಎಣಿಸಿ, ವಸ್ತುಗಳ ಪಕ್ಕದಲ್ಲಿ ಆ ಸಂಖ್ಯೆಯ ಮಿಂಚುಪಟ್ಟಿಯನ್ನು ಇಡಲು ಹೇಳುವುದು.
5. ನಂತರ ಮಕ್ಕಳನ್ನು ಇಬ್ಬಿಬ್ಬರಂತೆ ಜೋಡಿಯಾಗಿಸಿ, ಕಡಿಮೆಯಿಂದ ಹೆಚ್ಚು ಮತ್ತು ಹೆಚ್ಚು ಸಂಖ್ಯೆಯಿಂದ ಕಡಿಮೆ ಕ್ರಮದಲ್ಲಿ ಸಂಖ್ಯೆಯ ಕಾರ್ಡ್‌ಗಳನ್ನು ಇಡಲು ಹೇಳುವುದು.





Scanned with CamScanner

## ಅನ್ವಯಿಸುವಿಕೆ

ಗಮನಿಸಿ: ಅನ್ವಯಿಸುವಿಕೆಯ ಅಭ್ಯಾಸಗಳು ಒಂದು ವಸ್ತುವಿನೊಂದಿಗೆ ಇನ್ನೊಂದು ವಸ್ತುವನ್ನು ಸಂಬಂಧೀಕರಿಸಿ ಎಣಿಸುವ ಆಲೋಚನೆಯನ್ನು ಬೆಂಬಲಿಸುತ್ತದೆ. ಜೊತೆಗೆ ಕಡಿಮೆ ಹಾಗೂ ಹೆಚ್ಚು ಇರುವ ಸಂಖ್ಯೆಗಳನ್ನು ಮತ್ತು ಸಮಗೊಳಿಸುವುದನ್ನು ತಿಳಿಯಲು ಸಹಾಯಕವಾಗುತ್ತದೆ. ಇದನ್ನು ತರಗತಿಯಲ್ಲಿ, ಆಟ ಮತ್ತು ಊಟದ ಸಮಯದಲ್ಲಿ ಅನೌಪಚಾರಿಕ ಚಟುವಟಿಕೆಗಳ ಮೂಲಕ ಮಾಡಿಸಬಹುದು. ಇಲ್ಲಿ ಕೆಲವು ಚಟುವಟಿಕೆಗಳನ್ನು ಕೊಡಲಾಗಿದೆ.

---

### ಚಟುವಟಿಕೆ 1

### ಊಟದ ಸಮಯ

#### ಸೂಚನೆಗಳು

1. ಊಟದ ಸಮಯದಲ್ಲಿ ಮಕ್ಕಳನ್ನು ಮೂವರಂತೆ ಚಿಕ್ಕ ಚಿಕ್ಕ ವೃತ್ತಗಳಲ್ಲಿ ಕೂರಿಸುವುದು. ಪ್ರತಿ ಗುಂಪಿಗೂ ಒಬ್ಬರು ನಾಯಕರನ್ನು ನೇಮಿಸುವುದು. ಎಲ್ಲ ಮಕ್ಕಳಿಗೂ ಅವಕಾಶ ಸಿಗುವಂತೆ ಪ್ರತಿದಿನವೂ ನಾಯಕರನ್ನು ಬದಲಿಸುವುದು.
2. ಆ ದಿನದ ನಾಯಕರು ತಮ್ಮ ಗುಂಪಿಗೆ ಬೇಕಾಗುವಷ್ಟು ತಟ್ಟೆಗಳನ್ನು ಎಣಿಸಿಕೊಂಡು ತರಬೇಕು. ಅವರು ತಟ್ಟೆಗಳನ್ನು ಸಂಗ್ರಹಿಸಿದ ನಂತರ ಮಕ್ಕಳಿಗೆ 'ನಿಮಗೆ ಇನ್ನೂ ಹೆಚ್ಚು ಬೇಕೆ?' ಎಂಬಂತಹ ಪ್ರಶ್ನೆಗಳನ್ನು ಕೇಳುವುದು.

---

### ಚಟುವಟಿಕೆ 2

### ಕಲೆ ಚಟುವಟಿಕೆ ಸಮಯ – ಸಂಖ್ಯೆಯ ಪುನರ್‌ಬಲನ

#### ಸೂಚನೆಗಳು

1. ಕಲೆ ಚಟುವಟಿಕೆಯ ಸಮಯದಲ್ಲಿ, ಮಕ್ಕಳು ಮೂವರಂತೆ ಗುಂಪುಗಳಲ್ಲಿ ಕೆಲಸ ಮಾಡುವಾಗ, ಒಂದು ಮಗುವನ್ನು ನಾಯಕನಾಗಿ ಮಾಡುವುದು. ಪ್ರತಿ ಮಗುವಿಗೂ ಸಾಲುವಷ್ಟು ಸಂಖ್ಯೆಯ ಹಾಳೆಗಳನ್ನು ಎಣಿಸಿಕೊಂಡು ತರುವಂತೆ ಆ ಮಗುವಿಗೆ ಹೇಳುವುದು.
2. ಇನ್ನೊಂದು ಮಗುವಿಗೆ ಕ್ರೇಯಾನ್‌ಗಳನ್ನು ಎಣಿಸಿ, ಪ್ರತಿ ಮಗುವಿಗೆ 2 ಕ್ರೇಯಾನ್ ನೀಡುವ ಜವಾಬ್ದಾರಿ ಕೊಡುವುದು.
3. ಮಕ್ಕಳಿಗೆ 1, 2, ಅಥವಾ 3 ಎಲೆಗಳನ್ನು ಎಣಿಸಿಕೊಂಡು ತರಲು ಹೇಳುವುದು. ಅವುಗಳನ್ನು ಎಣಿಸಿ, ಮಧ್ಯದಲ್ಲಿ ಗುಂಪಾಗಿ ಇಡಲು ಹೇಳುವುದು. ಕೇವಲ 3 ಅಥವಾ ಕಡಿಮೆ ಎಲೆಗಳನ್ನು ಮಾತ್ರ ತರಲು ಒತ್ತಿ ಹೇಳುವುದು.



Scanned with CamScanner

## ಅನ್ವಯಿಸುವಿಕೆ

ಚಟುವಟಿಕೆ 3

### ಹೋಲಿಕೆ ಮಾಡುವುದು ಮತ್ತು ಸಮಗೊಳಿಸುವುದು

**ಕಲಿಕಾ ಸಾಮಗ್ರಿಗಳು:** ಮಣಿಗಳು


**ಸೂಚನೆಗಳು**

1. ಈ ಚಟುವಟಿಕೆಯನ್ನು ಒಂದು ಮಗು ಅಥವಾ ಇಬ್ಬರು ಮಕ್ಕಳೊಂದಿಗೆ ಮಾಡಿ ತೋರಿಸುವುದು.
2. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
3. ಪ್ರತಿ ಮಗುವಿಗೆ 1, 2 ಅಥವಾ 3 ಮಣಿಗಳನ್ನು ಕೊಡುವುದು.
4. ಇಬ್ಬರು ಮಕ್ಕಳಿಗೆ ಮಣಿಗಳ ಬಟ್ಟಲನ್ನು ಕೊಡುವುದು.
5. ಅವರು ಪ್ರತಿ ಮಗುವಿನ ಬಳಿ ಎಷ್ಟು ಮಣಿಗಳಿವೆ ಎಂದು ಎಣಿಸಿ ನೋಡಿ, ಪ್ರತಿ ಮಗುವೂ 3 ಮಣಿಗಳನ್ನು ಹೊಂದಿರುವಂತೆ ಮಣಿಗಳನ್ನು ಕೊಡುವುದು.

---

ಚಟುವಟಿಕೆ 4

### ಮುಕ್ತ ಆಟದ ಸಮಯ



**ಕಲಿಕಾ ಸಾಮಗ್ರಿಗಳು:** ಬ್ಲಾಕ್‌ಗಳು

**ಸೂಚನೆಗಳು**

ಮುಕ್ತ ಆಟದ ಸಮಯದಲ್ಲಿ ಮಕ್ಕಳಿಗೆ 1, 2 ಮತ್ತು 3 ಬ್ಲಾಕ್‌ಗಳನ್ನು ಕೊಟ್ಟು, ಅವುಗಳನ್ನು ಬಳಸಿಕೊಂಡು ಗೋಪುರವನ್ನು ಮಾಡುವಂತೆ ಹೇಳುವುದು.

---

ಚಟುವಟಿಕೆ 5

### ಫೈರ್ ಆನ್ ದಿ ಮೌಂಟೇನ್

**ಸೂಚನೆಗಳು**

"ಫೈರ್ ಆನ್ ದಿ ಮೌಂಟೇನ್" ಆಟವನ್ನು ಆಡಿಸುವುದು. ನೀವು ಫೈರ್ ಆನ್ ದಿ ಮೌಂಟೇನ್, ರನ್, ರನ್, ರನ್ ಎಂದು ಹೇಳಿ, ಸಂಖ್ಯೆಯೊಂದನ್ನು ಹೇಳುವುದು. ನೀವು 1 ಎಂದು ಕರೆದರೆ, ಒಂದೊಂದೇ ಮಗು ನಿಲ್ಲಬೇಕು. ನೀವು 2 ಎಂದರೆ ಇಬ್ಬರು ಮಕ್ಕಳು ಜೊತೆಗೂಡಿ ನಿಲ್ಲಬೇಕು. ನೀವು 3 ಎಂದರೆ ಮೂರು ಮಕ್ಕಳು ಗುಂಪಾಗಿ ನಿಲ್ಲಬೇಕು. ಹೀಗೆಯೇ ಮುಂದುವರೆಸಬೇಕು.

ಗಮನಿಸಿ: ಈ ಚಟುವಟಿಕೆಯು ಒಂದು ಸಾಮಾನ್ಯ ಚಟುವಟಿಕೆಯಾಗಿದ್ದು, ಪಠ್ಯಕ್ರಮದ ಹಲವಾರು ಕಡೆ ಇದೆ.



Scanned with CamScanner

## ಭಾಗ 2: ಸಂಖ್ಯೆಗಳು 4 ಮತ್ತು 5

## ಸಂಖ್ಯೆ 4 ಮತ್ತು 5ರ ಪರಿಚಯ

### ಕಲಿಕಾ ಫಲಿತಗಳು

ಮಕ್ಕಳು ನಾಲ್ಕು ಮತ್ತು ಐದು ಸಂಖ್ಯೆಯ ಹೆಸರುಗಳನ್ನು ಗುರುತಿಸುವುದು ಮತ್ತು ನಾಲ್ಕು ಹಾಗೂ ಐದು ಸಂಖ್ಯೆಗಳ ಜೊತೆಗೆ ಅವರು ಹೊಂದಿರುವ ಸಂಬಂಧದ ಕುರಿತು ಮಾತನಾಡುವುದು.

---

**ಚಟುವಟಿಕೆ 1**

## ನಾಲ್ಕು ಮತ್ತು ಐದು ಸಂಖ್ಯೆಗಳ ಹೆಸರುಗಳು

### ಸೂಚನೆಗಳು

**ಹಂತ 1**

1. ಒಂದು, ಎರಡು, ಮೂರು ಎಂದು ಸಂಖ್ಯೆಗಳ ಹೆಸರುಗಳನ್ನು ಹೇಳುವುದು ಮತ್ತು ಮಕ್ಕಳಿಗೆ ಅವರು ಈ ಸಂಖ್ಯೆಗಳನ್ನು ಮೊದಲು ಕೇಳಿದ್ದರೆ ಕೈ ಮೇಲೆ ಎತ್ತಲು ಹೇಳುವುದು. ಇದನ್ನು ಅವರು ಈ ಹಿಂದೆ ಕಲಿತ ಸಂಖ್ಯೆಗಳ ಹೆಸರುಗಳ ಪುನರಾವರ್ತನೆಯಾಗಿ ನೋಡಬಹುದು. ಮಕ್ಕಳು ತಮ್ಮ ಕೈಗಳನ್ನು ಮೇಲೆ ಎತ್ತಬಹುದು ಮತ್ತು ಈ ಮೊದಲು ಅವರು ಈ ಹೆಸರುಗಳನ್ನು ಎಲ್ಲಿ ಕೇಳಿದ್ದರು ಅಥವಾ ಈ ಸಂಖ್ಯೆಗಳ ಹೆಸರುಗಳೊಂದಿಗೆ ಅವರಿಗೆ ಇರುವ ಸಂಬಂಧಗಳ ಕುರಿತು ಹೇಳಬಹುದು. ಒಂದು, ಎರಡು ಮತ್ತು ಮೂರು ಹೆಸರುಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅವರು ಈ ಮೊದಲು ಮಾಡಿದ ಚಟುವಟಿಕೆಗಳ ಕುರಿತು ಮಾತನಾಡಲು ಹೇಳುವುದು.

2. ನಾಲ್ಕು ಮತ್ತು ಐದು ಸಂಖ್ಯೆಗಳ ಹೆಸರುಗಳನ್ನು ಹೇಳುವುದು ಮತ್ತು ಈ ಸಂಖ್ಯೆಗಳನ್ನು ಈ ಮೊದಲೇ ಕೇಳಿದ್ದರೆ ಕೈ ಎತ್ತಲು ಹೇಳುವುದು. ಮಕ್ಕಳು ಈ ಮೊದಲೇ ಕೇಳಿರಲಿಲ್ಲ ಎಂದರೆ ಪರವಾಗಿಲ್ಲ. ಕೈ ಮೇಲೆ ಎತ್ತಿರುವವರಿಗೆ ಅವರು ಎಲ್ಲಿ ಈ ಸಂಖ್ಯೆಗಳನ್ನು ಕೇಳಿದ್ದಾರೆ? ಮತ್ತು ಯಾವ ಸಂದರ್ಭದಲ್ಲಿ ಬಳಸಲಾಗಿತ್ತು? ಎಂದು ಕೇಳುವುದು.

3. ಮಕ್ಕಳು ಹೆಸರುಗಳನ್ನು ಪರಿಮಾಣದೊಂದಿಗೆ ಸಂಬಂಧೀಕರಿಸುತ್ತಾರೆಯೇ? ಎಂದು ಪರೀಕ್ಷಿಸುವುದು. ಯಾವಾಗಲೂ ನಾಲ್ಕು ಆಗಿರುವ ಒಂದು ವಸ್ತುವಿನ ಕುರಿತು ಅವರು ಯೋಚಿಸಬಲ್ಲರೇ? ಎಂದು ಕೇಳುವುದು. ಅವರ ದೇಹದಲ್ಲಿ ಯಾವ ಅಂಗ ಐದು ಆಗಿದೆ, ಯೋಚಿಸಬಲ್ಲರೇ? ಎಂದು ಕೇಳುವುದು. ಒಂದು ಕೈಯಲ್ಲಿ ಎಷ್ಟು ಬೆರಳುಗಳಿವೆ? ಕುರ್ಚಿಗೆ ಎಷ್ಟು ಕಾಲುಗಳು ಇರುತ್ತವೆ? ಸಂಖ್ಯೆಗಳು ಪರಿಮಾಣವನ್ನು ಸೂಚಿಸುತ್ತವೆ ಎಂಬ ಒಂದು ಅಸ್ಪಷ್ಟ ಅರ್ಥೈಸಿಕೊಳ್ಳುವಿಕೆಯತ್ತ ಈ ಚರ್ಚೆಯು ಸಾಗುತ್ತದೆ.



Scanned with CamScanner

# ದೈನಂದಿನ ಬದುಕಿನಲ್ಲಿ ಅನುಭವಕ್ಕೆ ಬರುವ ಚಿಕ್ಕ ಸಂಖ್ಯೆಗಳನ್ನು ಅರ್ಥೈಸಿಕೊಳ್ಳುವುದು

## ಕಲಿಕಾ ಫಲಿತಗಳು

ಈ ಹಾಡುವ ಚಟುವಟಿಕೆಯು ಮಕ್ಕಳಿಗೆ ನಾಲ್ಕರ ಸಂಖ್ಯೆಯನ್ನು ಅವರ ಸುತ್ತ ಇರುವ ವಸ್ತುಗಳೊಂದಿಗೆ ಸಂಬಂಧೀಕರಿಸಲು ಸಹಾಯ ಮಾಡುತ್ತದೆ.

---

**ಚಟುವಟಿಕೆ 1**

## ಸಂಖ್ಯೆಯ ಹಾಡು

## ಸೂಚನೆಗಳು

ಎಲ್ಲ ಮಕ್ಕಳೂ ಒಂದು ವೃತ್ತದಲ್ಲಿ ನಿಂತುಕೊಂಡು, ಅಭಿನಯದೊಂದಿಗೆ ಶಿಶುಗೀತೆಯನ್ನು ಹಾಡುವುದು.

**ಶಿಕ್ಷಕರು ಕೇಳುವುದು:** ಕಾರಿಗೆ ಎಷ್ಟು ಚಕ್ರ?
ಮಕ್ಕಳು ಹೇಳುವರು: ಕಾರಿಗೆ ನಾಲ್ಕು ಚಕ್ರ
ಶಿಕ್ಷಕರು ಹೇಳುವುದು: ಒಂದು ಸುತ್ತು ಕಾರು ಓಡಿಸಿ
(ಎಲ್ಲ ಮಕ್ಕಳೂ ಕಾರಿನ ಸದ್ದು ಮಾಡುತ್ತ, ಕಾರು ಓಡಿಸುವಂತೆ ಅಭಿನಯಿಸುವರು)

**ಶಿಕ್ಷಕರು ಕೇಳುವುದು:** ಆನೆಗೆ ಎಷ್ಟು ಕಾಲು?
ಮಕ್ಕಳು ಹೇಳುವರು: ಆನೆಗೆ ನಾಲ್ಕು ಕಾಲು
ಶಿಕ್ಷಕರು ಹೇಳುವುದು: ಆನೆಯಂತೆ ಇಲ್ಲಿಂದ ಅಲ್ಲಿಗೆ ನಡೆಯಿರಿ (ಎಲ್ಲ ಮಕ್ಕಳೂ ಹಾಗೆಯೇ ಮಾಡುವರು)

**ಶಿಕ್ಷಕರು ಕೇಳುವುದು:** ನಿಮ್ಮ ಅಂಗೈಯಲ್ಲೆಷ್ಟು ಬೆರಳಿವೆ?
ಮಕ್ಕಳು ಹೇಳುವರು: ನನ್ನ ಅಂಗೈಯಲ್ಲಿ ಐದು ಬೆರಳಿವೆ
(ಆರು ಬೆರಳುಗಳು ಇರುವ ಮಗು ಇದ್ದರೆ, ಸೂಕ್ಷ್ಮವಾಗಿ ನಿಭಾಯಿಸಬೇಕು)
ಶಿಕ್ಷಕರು ಹೇಳುವುದು: ಬಿಗಿ ಮುಷ್ಟಿ ಮಾಡಿ (ಎಲ್ಲ ಮಕ್ಕಳೂ ಹಾಗೆಯೇ ಮಾಡುವರು)

**ಶಿಕ್ಷಕರು ಕೇಳುವುದು:** ನಿಮ್ಮ ನಿಮ್ಮ ಕಾಲಿನಲ್ಲಿ ಎಷ್ಟು ಬೆರಳಿವೆ?
ಮಕ್ಕಳು ಹೇಳುವರು: ನನ್ನ ನನ್ನ ಕಾಲಲ್ಲಿ ಐದು ಬೆರಳಿವೆ
ಶಿಕ್ಷಕರು ಹೇಳುವುದು: ನಿಮ್ಮ ಕಾಲಿನ ಬೆರಳು ಅಲ್ಲಾಡಿಸಿ (ಎಲ್ಲ ಮಕ್ಕಳೂ ಹಾಗೆಯೇ ಮಾಡುವರು)

ಈ ಪಟ್ಟಿಗೆ ಹೀಗೆಯೇ ನಾಲ್ಕು ಮತ್ತು ಐದು ಇರುವ ಇನ್ನೂ ಹೆಚ್ಚು ವಸ್ತುಗಳನ್ನು ಸೇರಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದ ಕೆಲವು ಅಭಿನಯ ಮಾಡಿಸಬಹುದು. ನೀವು ಇದನ್ನು ಈ ಹಿಂದಿನ 1, 2, 3 ಸಂಖ್ಯೆಯ ಹಾಡಿಗೆ ಸೇರಿಸಿ, ಒಂದು ಪುನರ್‌ಬಲನ ಚಟುವಟಿಕೆಯಂತೆ ಬಳಸಿಕೊಳ್ಳಬಹುದು.



Scanned with CamScanner

## ಸಂಖ್ಯೆಗಳ ಹೆಸರುಗಳನ್ನು ಪರಿಮಾಣದೊಂದಿಗೆ ಸಂಬಂಧೀಕರಿಸುವುದು

### ಕಲಿಕಾ ಫಲಿತಗಳು

ವಸ್ತುಗಳ ಸೂಚಕವಾಗಿ ಮಕ್ಕಳು 'ನಾಲ್ಕು ಮತ್ತು ಐದು' ಎಂದು ಹೇಳಲು ಕಲಿಯುವುದು.

---

**ಚಟುವಟಿಕೆ 1**

### '4 ಮತ್ತು 5' ಸಂಖ್ಯೆಗಳನ್ನು ವಸ್ತುಗಳ ಸೂಚಕವಾಗಿ ಪರಿಚಯಿಸುವುದು

### ಕಲಿಕಾ ಸಾಮಗ್ರಿಗಳು

- ತರಗತಿಕೋಣೆಯಲ್ಲಿರುವ ಎಲ್ಲ ರೀತಿಯ ಚಿಕ್ಕ ವಸ್ತುಗಳು.
- ಹುಣಿಸೇಬೀಜಗಳು ಅಥವಾ ಮಣಿಗಳು ಅಥವಾ ಸಣ್ಣ ಕಲ್ಲುಚೂರುಗಳು.

### ಸೂಚನೆಗಳು

1. ಎಲ್ಲ ಮಕ್ಕಳನ್ನೂ ವೃತ್ತಾಕಾರವಾಗಿ ಕೂರಿಸುವುದು.
2. ನಾಲ್ಕು ಪೆನ್ಸಿಲ್‌ಗಳನ್ನು ತೆಗೆದುಕೊಂಡು (ಪ್ರತಿಯೊಂದೂ ಪೆನ್ಸಿಲ್‌ನ್ನು ಮುಟ್ಟುತ್ತ), 'ನಾಲ್ಕು ಪೆನ್ಸಿಲ್‌ಗಳು' ಎಂದು ಹೇಳಿ, ಅದನ್ನು ನಿಮ್ಮ ಮುಂದೆ ಚಾಪೆಯ ಮೇಲೆ ಒಂದು ಸಾಲಿನಲ್ಲಿ ಇಡುವುದು. ಮಕ್ಕಳಿಗೆ ಯಾವುದಾದರೂ 4 ವಸ್ತುಗಳನ್ನು ತೆಗೆದುಕೊಂಡು, 'ನಾಲ್ಕು' ಎಂದು ಹೇಳಿ, ಅದರ ಮುಂದೆ ಆ 'ವಸ್ತುವಿನ ಹೆಸರು' ಹೇಳುವಂತೆ ತಿಳಿಸುವುದು ಮತ್ತು ನೀವು ಮಾಡಿದಂತೆಯೇ ಅವರು ಆ ನಾಲ್ಕು ವಸ್ತುಗಳನ್ನು ತಮ್ಮ ಮುಂದೆ ಚಾಪೆಯ ಮೇಲೆ ಒಂದು ಸಾಲಿನಲ್ಲಿ ಇಟ್ಟುಕೊಳ್ಳುವುದು.
3. ಪ್ರತಿ ಮಗುವೂ ವಸ್ತುಗಳನ್ನು 4ರಂತೆ ತೆಗೆದುಕೊಂಡು, 'ನಾಲ್ಕು + ಆ ವಸ್ತುವಿನ ಹೆಸರು' ಹೇಳುತ್ತಾ (ತರಗತಿಕೋಣೆಯಲ್ಲಿರುವ ಯಾವುದಾದರೂ ಚಿಕ್ಕ ವಸ್ತುಗಳು: ಪೆನ್ಸಿಲ್/ರಬ್ಬರ್/ಸೀಮೆಸುಣ್ಣ) ತಮ್ಮ ಮುಂದೆ ಚಾಪೆಯ ಮೇಲೆ ಒಂದು ಸಾಲಿನಲ್ಲಿ ಇಡುವುದು. ಇದು ಮಗುವಿಗೆ 'ನಾಲ್ಕು' ಎಂಬ ಧ್ವನಿಯು ಒಂದು ವಸ್ತುವಿನ ಸೂಚಕ ಮತ್ತು ಅದೊಂದು ಖಾಲಿ ಶಬ್ದ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.
4. ಇದೇ ಪ್ರಕ್ರಿಯೆಯನ್ನು ಸಂಖ್ಯೆ 5ಕ್ಕೂ ಮಾಡುವುದು.



Scanned with CamScanner

## ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುತ್ತ (ಪ್ರತಿ ವಸ್ತುವಿನೊಂದಿಗೂ ಸಂಬಂಧೀಕರಿಸಿ) ಅರ್ಥಪೂರ್ಣವಾಗಿ ಎಣಿಸುವುದನ್ನು ಕಲಿಯುವುದು

### ಕಲಿಕಾ ಫಲಿತಗಳು

ಒಂದರ ನಂತರ ಇನ್ನೊಂದು ವಸ್ತುವನ್ನು ಅರ್ಥಪೂರ್ಣವಾಗಿ ಎಣಿಸುವುದನ್ನು ಕಲಿಯುವುದು.

---

**ಚಟುವಟಿಕೆ 1**

### ಅಭಿನಯದೊಂದಿಗೆ ಒಂದರ ನಂತರ ಒಂದು ವಸ್ತುವನ್ನು ಮುಟ್ಟಿ ಎಣಿಸುತ್ತ ಸಂಬಂಧೀಕರಿಸುವುದು

### ಸೂಚನೆಗಳು

1. ಎಲ್ಲ ಮಕ್ಕಳನ್ನೂ ವೃತ್ತಾಕಾರವಾಗಿ ಕೂರಿಸುವುದು.
2. ನಾಲ್ಕು ಚಪ್ಪಾಳೆಗಳು ಎಂದು ಹೇಳುತ್ತಾ ನೀವು ಚಪ್ಪಾಳೆ ಹೊಡೆಯುತ್ತಿರುವಂತೆ 1, 2, 3 ಮತ್ತು 4 ಎಂದು ಎಣಿಸುವುದು.
3. ಪ್ರತಿ ಮಗುವೂ ಎದ್ದು ನಿಂತು, ನೀವು ಮಾಡಿದಂತೆಯೇ ಪುನರಾವರ್ತನೆ ಮಾಡುವುದು.
4. ಈಗ 5 ಬಾರಿ ತಟ್ಟೋಣ ಎಂದು ಹೇಳಿ, ನಿಮ್ಮ ಕಾಲನ್ನು ನೆಲಕ್ಕೆ ತಟ್ಟುತ್ತ, 1, 2, 3, 4 ಮತ್ತು 5 ಎಂದು ಹೇಳುವುದು.
5. ಪ್ರತಿ ಮಗುವೂ ಎದ್ದು ನಿಂತು, ನೀವು ಮಾಡಿ ತೋರಿಸಿದ ನಂತರ ಅದನ್ನು ಪುನರಾವರ್ತನೆ ಮಾಡಲು ಹೇಳುವುದು
6. ಇದೇ ಅಭ್ಯಾಸವನ್ನು ಜಿಗಿತದೊಂದಿಗೆ ಮಾಡುವುದು. ನೀವು ಜಿಗಿಯುವಾಗ, ಪ್ರತಿ ಸಲ ಜಿಗಿದಾಗ 1, 2, 3, ಮತ್ತು 4 ಎಂದು ಎಣಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

ಪ್ರತಿ ಸಂದರ್ಭದಲ್ಲಿಯೂ, ಮಕ್ಕಳು ತಾವು ಮಾಡುವ ಅಭಿನಯದೊಂದಿಗೆ ಎಣಿಕೆಯನ್ನು ಸರಿಹೊಂದಿಸಬೇಕು. ಮಕ್ಕಳು ತುಂಬಾ ವೇಗವಾಗಿ ಎಣಿಸುತ್ತಿದ್ದರೆ ಅಥವಾ ಅವರು ಸರಿಯಾಗಿ ಎಣಿಕೆ ಮಾಡಲಿಲ್ಲ ಎಂದಾದರೆ, ಇಡೀ ಅಭ್ಯಾಸವನ್ನು ಅವರಿಂದ ಪುನರಾವರ್ತನೆ ಮಾಡಿಸುವುದು

ಒಮ್ಮೆ ಇದನ್ನು ಮಾಡಿದ ನಂತರ, ಚಟುವಟಿಕೆಯನ್ನು ಒಂದು ಆಟವಾಗಿ ಪರಿವರ್ತಿಸುವುದು. ಮಕ್ಕಳಿಗೆ ಎದ್ದು ನಿಲ್ಲಲು ಹೇಳಿ, 2 ಚಪ್ಪಾಳೆ, 5 ಬಾರಿ ತಟ್ಟು, 4 ಸಲ ಜಿಗಿ, ಹೀಗೆ ಸಂಖ್ಯೆಗಳನ್ನು ಅನುಕ್ರಮವಾಗಲ್ಲದೆಯೇ ಜೋರಾಗಿ ಹೇಳಿ, ಅವರಿಗೆ ಮಾಡುವಂತೆ ಹೇಳುವುದು. ಇದು ಮಕ್ಕಳು ಅಭಿನಯ ಮಾಡುತ್ತಲೇ, ಎಣಿಕೆ ಮಾಡಲು ಸಮರ್ಥರಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ಸಹಾಯಕವಾಗುತ್ತದೆ ಮತ್ತು ಅವರು ಈವರೆಗೆ ಕಲಿತ ಸಂಖ್ಯೆಗಳನ್ನು ಅನುಕ್ರಮವಾಗಿ ಅಲ್ಲದಿದ್ದರೂ ಗುರುತಿಸಿ, ಪುನರ್‌ಬಲನ ಮಾಡಿಸುತ್ತದೆ.



Scanned with CamScanner

ಚಟುವಟಿಕೆ 2

## ವಸ್ತುಗಳೊಂದಿಗೆ ಎಣಿಸುವುದು

**ಕಲಿಕಾ ಸಾಮಗ್ರಿಗಳು:** ತರಗತಿ ಕೋಣೆಯಲ್ಲಿರುವ ವಸ್ತುಗಳು – ಬೀಜಗಳು, ಮಣಿಗಳು, ಸೀಮೆಸುಣ್ಣ ಇತ್ಯಾದಿ.

### ಸೂಚನೆಗಳು

1. ಮಕ್ಕಳು ತಾವು ಮಾಡುವ ಅಭಿನಯದೊಂದಿಗೆ ಎಣಿಸಲು ಕಲಿತ ನಂತರ, ಆ ಕೌಶಲವನ್ನು ವಸ್ತುಗಳನ್ನು ಎಣಿಸಲು ಬಳಸಬೇಕು. ಮೇಲೆ ಹೇಳಿದ ವಸ್ತುಗಳನ್ನು ನೆಲದ ಮೇಲೆ 1–5ರವರೆಗೆ ಬೇರೆ ಬೇರೆ ಸಂಖ್ಯೆಯಲ್ಲಿ ಇಡುವುದು. ಉದಾ: 2 ಸೀಮೆಸುಣ್ಣ, 4 ಮಣಿಗಳು, 5 ಬೀಜಗಳು, 3 ಚಿಕ್ಕ ಕಲ್ಲುಚೂರುಗಳು, ಇತ್ಯಾದಿ.
2. ಪ್ರತಿ ವಸ್ತುವನ್ನೂ ಒಂದೊಂದಾಗಿ ಮುಟ್ಟಿ, ಜೊತೆಗೆ ಬಾಯಲ್ಲಿ ಎಣಿಸುತ್ತ ವಸ್ತುಗಳನ್ನು ಎಣಿಸುವುದನ್ನು ತೋರಿಸುವುದು. ಒಂದು ಗುಂಪಿನ ವಸ್ತುಗಳನ್ನು ಎಣಿಸುವುದು ಮುಗಿಯುತ್ತಿದ್ದಂತೆ, ನಾಲ್ಕು ಮಣಿಗಳು, 5 ಬೀಜಗಳು ಇತ್ಯಾದಿ ಜೋರಾಗಿ ಹೇಳುವುದು, ಆಗ ಮಕ್ಕಳಿಗೆ ನೀವು ಎಣಿಸಿದ ವಸ್ತುಗಳ ಕೊನೆಯ ಸಂಖ್ಯೆಯು ಆ ವಸ್ತುಗಳ ಪರಿಮಾಣ ಎಂಬುದು ಅರ್ಥವಾಗುತ್ತದೆ.
3. ಮಕ್ಕಳಿಗೆ ಮುಂದೆ ಬಂದು, ಎಣಿಸುವುದಕ್ಕೆ ಹೇಳುವುದು. ಎಣಿಸುತ್ತಿರುವಾಗ ಅವರು ತಾವು ಎಣಿಸುತ್ತಿರುವ ವಸ್ತುವಿನ ಮೇಲೆ ಬೆರಳು ಇಡುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು. ಅವರು ತಪ್ಪು ಮಾಡುತ್ತಿದ್ದರೆ, ಅವರ ಕೈ ಹಿಡಿದು, ನೀವು ಹೇಳಿದ ನಂತರ ಪುನರಾವರ್ತನೆ ಮಾಡುವಂತೆ ಹೇಳುವುದು.
4. ಈಗ ನೀವು ಕ್ರಮಬದ್ಧವಾಗಲ್ಲದೆ ಇಟ್ಟಿರುವ ವಸ್ತುಗಳ ಆಟವನ್ನು ಆಡಿಸುವುದು ಮತ್ತು ಮಕ್ಕಳು ಮುಂದೆ ಬಂದು ತಮ್ಮ ಬೆರಳುಗಳಿಂದ ಮುಟ್ಟಿ, ಎಣಿಸುವುದಕ್ಕೆ ಆಸ್ಪದ ಕೊಡುವುದು.

---

ಚಟುವಟಿಕೆ 3

## ಬೆರಳುಗಳನ್ನು ಮೇಲೆತ್ತಿ 4 ಮತ್ತು 5 ಎಣಿಸುವುದು

**ಕಲಿಕಾ ಸಾಮಗ್ರಿಗಳು:** ಪೆನ್ಸಿಲ್‌ಗಳು, ರಬ್ಬರ್‌ಗಳು, ಸೀಮೆಸುಣ್ಣ – ಪ್ರತಿಯೊಂದೂ 5.

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
2. "ನಾಲ್ಕು + ವಸ್ತುವಿನ ಹೆಸರು" ಚಟುವಟಿಕೆಯನ್ನು ಪುನರಾವರ್ತನೆ ಮಾಡುವುದು. ಈ ಸಲ, ಅವರಿಗೆ ಚಾಪೆಯ ಮೇಲೆ ಒಂದು ವಸ್ತುವನ್ನು ಇಟ್ಟು, "ನಾಲ್ಕು ಪೆನ್ಸಿಲ್‌ಗಳು/ರಬ್ಬರುಗಳು ಇತ್ಯಾದಿ' ಹೇಳಿಸುವುದು. ಆದರೆ ಅವನ್ನು ಚಾಪೆಯ ಮೇಲೆ ಇಟ್ಟ ನಂತರ, "ನಾಲ್ಕು ಪೆನ್ಸಿಲ್‌ಗಳು + ನಾಲ್ಕು ಬೆರಳು" ಎಂದು ಕೂಡ ಹೇಳುವಂತೆ ಮತ್ತು ಬೆರಳುಗಳನ್ನು ಎತ್ತಿ ಎಲ್ಲರಿಗೂ ತೋರಿಸುವಂತೆ ತಿಳಿಸುವುದು.
3. ಮಕ್ಕಳು ನಾಲ್ಕು ಬೆರಳು ಎನ್ನುತ್ತಿರುವಾಗ ಎಲ್ಲರೂ ಕೈಗಳ ಒಂದೇ ಬಗೆಯ ನಾಲ್ಕು ಬೆರಳುಗಳನ್ನು ಎತ್ತುವಂತೆ ಮಾಡುವುದು ಹೆಚ್ಚು ಉಪಯುಕ್ತ. ಇದು ಆರಂಭದಿಂದಲೇ ಮಕ್ಕಳಿಗೆ ಸಂಖ್ಯೆಯ ಹೆಸರು ಮತ್ತು ಬೆರಳು ಎಣಿಕೆಯ ನಡುವೆ ಸಂಬಂಧ ಕಲ್ಪಿಸಲು ಸಹಾಯಕ.
4. ಮೇಲಿನ ಚಟುವಟಿಕೆಯ ನಂತರ ಮಕ್ಕಳಿಗೆ ನಾಲ್ಕು ಬೆರಳು ಎಂದು ಪೂರ್ಣ ಪದಗುಚ್ಛ ಹೇಳುವ ಬದಲಿಗೆ ಕೇವಲ 'ನಾಲ್ಕು' ಎಂದಷ್ಟೇ ಹೇಳಿ, ನಂತರ ಬೆರಳುಗಳನ್ನು ತೋರಿಸುವ ಚಟುವಟಿಕೆ ಮಾಡಿಸಬೇಕು. ಇದು 1–10ರವರೆಗಿನ ಸಂಖ್ಯೆಗಳನ್ನು ಪ್ರತಿನಿಧಿಸಲು ಬೆರಳುಗಳನ್ನು ಬಳಸಿಕೊಳ್ಳುವ ಪದ್ಧತಿಗೆ ಬರಲು ಸಹಾಯಕವಾಗುತ್ತದೆ.
5. ಇದೇ ಹಂತಗಳನ್ನು ಸಂಖ್ಯೆ ಐದಕ್ಕೂ ಪುನರಾವರ್ತನೆ ಮಾಡುವುದು. ಮಕ್ಕಳು "ಐದು ಪೆನ್ಸಿಲ್‌ಗಳು+ ಐದು ಬೆರಳು" ಎಂದು ಹೇಳಿ, ನಂತರ ಐದು ಪೆನ್ಸಿಲ್‌ಗಳನ್ನು ಚಾಪೆಯ ಮೇಲೆ ಇಡುವುದು.



Scanned with CamScanner

# ಸಂಖ್ಯೆಯ ಚಿಹ್ನೆಯನ್ನು ಕಲಿಸುವುದು

### ಕಲಿಕಾ ಫಲಿತಗಳು

ಮಕ್ಕಳು 4 ಮತ್ತು 5ರ ಚಿಹ್ನೆಗಳನ್ನು ಗುರುತಿಸುವುದು.

---

**ಚಟುವಟಿಕೆ 1**

## 4 ಮತ್ತು 5ರ ಚಿಹ್ನೆಗಳನ್ನು ಪರಿಚಯಿಸುವುದು




### ಕಲಿಕಾ ಸಾಮಗ್ರಿಗಳು

ಮಿಂಚುಪಟ್ಟಿ ಸರಣಿ **CF9.1** (4, 5)–4 ಮತ್ತು 5 ಸಂಖ್ಯೆಯದು

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
2. ‘4’, ಮತ್ತು ‘5’ ಸಂಖ್ಯೆಯ ಚಿಹ್ನೆಗಳ ಮಿಂಚುಪಟ್ಟಿಗಳನ್ನು ತೋರಿಸುವುದು. ಸಾಮಾನ್ಯವಾಗಿ ತೋರಿಸುವ ಬೇರೆ ಚಿತ್ರಗಳಿಗಿಂತ ಸಂಖ್ಯೆಗಳುಳ್ಳ ಮಿಂಚುಪಟ್ಟಿಗಳು ದೊಡ್ಡದಿರಬೇಕು, ಪ್ರತಿ ಮಗುವಿನ ಗಮನ ಸೆಳೆಯಲು ಮತ್ತು ಪ್ರತಿ ಮಗುವೂ ಅದನ್ನು ನೋಡಲು ಸಾಧ್ಯವಾಗುವಂತೆ ಇರಬೇಕು. ಮಕ್ಕಳಿಗೆ ಈ ಚಿಹ್ನೆಗಳನ್ನು ನೋಡಿದ್ದೀರಾ? ಎಂದು ಕೇಳುವುದು.
3. ಒಂದು ಮಗು ಅಥವಾ ಕೆಲವು ಮಕ್ಕಳು ನೋಡಿದ್ದರೆ, ಅವರು ಎಲ್ಲಿ ನೋಡಿದ್ದಾರೆ? ಎಂಬ ಸಂಭಾಷಣೆಯಲ್ಲಿ ತೊಡಗಿಸಿ, ಅವರು ಇದರ ಬಗ್ಗೆ ಏನು ಅರ್ಥಮಾಡಿಕೊಂಡಿದ್ದಾರೆ?, ಅವರಿಗೆ ಈಗಾಗಲೇ ಚಿಹ್ನೆಗಳ ಹೆಸರುಗಳು ಗೊತ್ತಿವೆಯೇ? ಎಂದು ಕೇಳುವುದು.
4. ನಂತರ ಚಿಹ್ನೆಗಳ ಹೆಸರುಗಳನ್ನು ನಾಲ್ಕು, ಐದು ಎಂದು ಪರಿಚಯಿಸಿ, ಪ್ರತಿ ಮಗುವೂ ಮುಂದೆ ಬಂದು, ಮಿಂಚುಪಟ್ಟಿಯ ಮೇಲೆ ಬೆರಳಿನಿಂದ ತಿದ್ದುತ್ತಾ, ನಾಲ್ಕು, ಐದು ಎಂದು ಹೇಳುವಂತೆ ಮಾಡುವುದು.

---

**ಚಟುವಟಿಕೆ 2**

## ತಿದ್ದುವುದು ಮತ್ತು ಬಣ್ಣ ಹಚ್ಚುವುದು




### ಕಲಿಕಾ ಸಾಮಗ್ರಿಗಳು

ತಿದ್ದುವ ಮತ್ತು ಬಣ್ಣ ಹಚ್ಚುವ ಹಾಳೆಗಳು. ಮಿಂಚುಪಟ್ಟಿ **CWS9.1** (4, 5) – ಸಂಖ್ಯೆಗಳು 4 ಮತ್ತು 5 (ಚಿತ್ರದ ಅಗತ್ಯವಿದೆ)

### ಸೂಚನೆಗಳು

ಮಕ್ಕಳಿಗೆ ತಿದ್ದುವ ಟ್ರೇಸಿಂಗ್ ಕಾರ್ಡ್‌ಗಳನ್ನು ಕೊಟ್ಟು, ಮಕ್ಕಳು ಅದರಲ್ಲಿ ಸಂಖ್ಯೆಗಳನ್ನು ತಿದ್ದಿ, ನಂತರ ಅದಕ್ಕೆ ಬಣ್ಣ ಹಚ್ಚುವುದು. ಅದು ಅವರಿಗೆ 4 ಮತ್ತು 5 ಎಂದು ಚಿಹ್ನೆಗಳನ್ನು ಗುರುತಿಸಲು ಸಹಾಯಕವಾಗುತ್ತದೆ.



Scanned with CamScanner

ಚಟುವಟಿಕೆ 3

## ಸಂಖ್ಯೆಗಳ ಆಟ

### ಕಲಿಕಾ ಸಾಮಗ್ರಿಗಳು

ಮಿಂಚುಪಟ್ಟಿ ಸರಣಿ **CF9.1** (4, 5) – ಸಂಖ್ಯೆಗಳು 1, 2, 3, 4 ಮತ್ತು 5

### ಸೂಚನೆಗಳು

1. ಈ ಚಟುವಟಿಕೆಯಲ್ಲಿ ನೀವು ಒಂದು ಸಂಖ್ಯೆಯನ್ನು ಜೋರಾಗಿ ಹೇಳುವುದು.
2. ಮಕ್ಕಳು ಮುಂದೆ ಬಂದು, ಆ ಸಂಖ್ಯೆಗೆ ಅನುಗುಣವಾದ ಸಂಖ್ಯೆಯ ಚಿಹ್ನೆಯಿರುವ ಮಿಂಚುಪಟ್ಟಿಯನ್ನು ಎತ್ತಿಕೊಳ್ಳುವುದು.
3. 1ರಿಂದ 3ರವರೆಗಿನ ಸಂಖ್ಯೆಗಳನ್ನೂ ಸೇರಿಸಿಕೊಳ್ಳುವುದು. ಇದು ಮಕ್ಕಳಿಗೆ ಪುನರ್‌ಬಲನ ಮಾಡಿಸಲು ಸಹಾಯಕವಾಗುತ್ತದೆ.



Scanned with CamScanner

ವಿಸ್ತರಣಾ ಚಟುವಟಿಕೆಗಳು

# ಸಂಖ್ಯೆಯ ಮೌಲ್ಯಕ್ಕೆ ಸರಿಯಾಗಿ ಸಂಖ್ಯೆಯ ಚಿಹ್ನೆಯನ್ನು ಜೋಡಿಸುವುದು

## ಕಲಿಕಾ ಫಲಿತಗಳು

ಸಂಖ್ಯೆಗಳ ಚಿಹ್ನೆಗಳು ಅದಕ್ಕನುಗುಣವಾದ ಪರಿಮಾಣವನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಮಕ್ಕಳು ಕಲಿಯುವುದು.

---

ಚಟುವಟಿಕೆ 1

## ಗುಂಪು ಚಟುವಟಿಕೆ

**ಕಲಿಕಾ ಸಾಮಗ್ರಿಗಳು:** ಮಿಂಚುಪಟ್ಟಿ ಸರಣಿ CF9.1 (4, 5) – ಸಂಖ್ಯೆಗಳು 4 ಮತ್ತು 5

### ಸೂಚನೆಗಳು

1. ಮಕ್ಕಳನ್ನು 5 ಗುಂಪುಗಳಾಗಿ ಮಾಡುವುದು. ಪ್ರತಿ ಗುಂಪಿಗೂ ಒಂದೊಂದು ಕ್ರಿಯೆ ಮಾಡುವಂತೆ ಹೇಳುವುದು (ಜಿಗಿಯುವುದು, ಚಪ್ಪಾಳೆ ಹಾಕುವುದು, ತಟ್ಟುವುದು, ಕಾಲಿನಿಂದ ತುಳಿಯುವುದು ಮತ್ತು ತಲೆಯಲ್ಲಾಡಿಸುವುದು).
2. ನೀವು 4 ಮತ್ತು 5 ಸಂಖ್ಯೆಯ ಚಿಹ್ನೆಯಿರುವ ಒಂದು ಕಾರ್ಡ್ ಅನ್ನು ಹಿಡಿಯುವಿರಿ ಮತ್ತು ಮಕ್ಕಳು ಆ ಸಂಖ್ಯೆಯ ಚಿಹ್ನೆಗೆ ಅನುಗುಣವಾಗಿ ಅವರಿಗೆ ಮಾಡಲು ಹೇಳಿರುವ ಕ್ರಿಯೆಯನ್ನು ಮಾಡಬೇಕು ಎಂದು ಮಕ್ಕಳಿಗೆ ಹೇಳುವುದು.
3. ಯಾವುದೇ ಕ್ರಮದಲ್ಲಾದರೂ ಕಾರ್ಡ್‌ಗಳನ್ನು ಎತ್ತಿ ಹಿಡಿದು ಮಕ್ಕಳು ಆ ಸಂಖ್ಯೆಗೆ ಅನುಗುಣವಾದ ಕ್ರಿಯೆಯನ್ನು ಮಾಡುವಂತೆ ಹೇಳುವುದು.
4. ಅವರು ಇದನ್ನು ಹಲವಾರು ಸಲ ಮಾಡಿ, ಆತ್ಮವಿಶ್ವಾಸ ಗಳಿಸಿದ ನಂತರ, ಪ್ರತಿ ಗುಂಪಿನಿಂದ ಒಂದು ಮಗುವನ್ನು ಕರೆದು, ನೀವು ಎತ್ತಿ ತೋರಿಸಿದ ಕಾರ್ಡ್‌ನಲ್ಲಿರುವ ಸಂಖ್ಯೆಗೆ ಅನುಗುಣವಾದ ಕ್ರಿಯೆಗಳನ್ನು ಮಾಡಿ ತೋರಿಸಲು ಹೇಳುವುದು.
5. ಪರಿಕಲ್ಪನೆಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಇರುವ ಮಕ್ಕಳು ಯಾರು ಎಂದು ಪರಿಶೀಲಿಸಿ, ಆ ಮಕ್ಕಳಿಗೆ ವಿವರಣೆ ಹಾಗೂ ತಿದ್ದುವ ಚಟುವಟಿಕೆಗಳನ್ನು ಮತ್ತೊಮ್ಮೆ ಮಾಡಿಸುವುದು.

---

ಚಟುವಟಿಕೆ 2

## ಜೊತೆಯಾಗಿ ಆಡುವುದು

**ಕಲಿಕಾ ಸಾಮಗ್ರಿಗಳು:** ಮಣಿಗಳು, ಬೀಜಗಳು, ಸೀಮೆಸುಣ್ಣದ ಚೂರುಗಳು, ಮಿಂಚುಪಟ್ಟಿ ಸರಣಿ CF9.1 (4 ಮತ್ತು 5)– ಸಂಖ್ಯೆಗಳು 4 ಮತ್ತು 5 – ಇಡೀ ತರಗತಿಗೆ ಆಗುವಷ್ಟು ಕಾರ್ಡ್‌ಗಳು ಇರಲಿಲ್ಲ ಎಂದರೆ ಇನ್ನಷ್ಟು ಕಾರ್ಡ್‌ಗಳನ್ನು ನೀವೇ ಮಾಡಿಕೊಳ್ಳುವುದು.

### ಸೂಚನೆಗಳು

1. ಮಣಿಗಳು, ಬೀಜಗಳು, ಸೀಮೆಸುಣ್ಣದ ಚೂರುಗಳು, ಬ್ಲಾಕ್‌ಗಳನ್ನು ತರಗತಿಕೋಣೆಯ ಬೇರೆ ಬೇರೆ ಕಡೆ, ವಿವಿಧ ಸಂಖ್ಯೆಯಲ್ಲಿ ಇರುವಂತೆ ಜೋಡಿಸುವುದು.
2. ಮಕ್ಕಳನ್ನು ಇಬ್ಬಿಬ್ಬರಂತೆ ಜೋಡಿಯಾಗಿ ಮಾಡುವುದು. ಸಂಖ್ಯೆಯ ಚಿಹ್ನೆಯಿರುವ 2 ಮಿಂಚುಪಟ್ಟಿಗಳನ್ನು ತೆಗೆದುಕೊಂಡು, ಒಂದು ಗುಂಪಿನ ವಸ್ತುಗಳನ್ನು ಹೇಗೆ ಎಣಿಸುವುದು ಎಂಬುದನ್ನು ತೋರಿಸುವುದು. ನಂತರ ಪ್ರತಿ ಜೋಡಿಯ ಪಕ್ಕದಲ್ಲಿ ಅದಕ್ಕೆ ಸರಿಹೊಂದುವ ಸಂಖ್ಯೆಯ ಚಿಹ್ನೆಯ ಕಾರ್ಡ್ ಅನ್ನು ಇಡುವುದು.
3. ಜೊತೆಯಾಗಿರುವ ಇಬ್ಬರು ಮಕ್ಕಳಿಗೆ ಕಾರ್ಡ್‌ಗಳನ್ನು ಕೊಟ್ಟು, ಅವರಿಗೆ ಅದರಲ್ಲಿ ತೋರಿಸಿದಷ್ಟು ಸಂಖ್ಯೆಯ ವಸ್ತುಗಳನ್ನು ಎಣಿಸಿ, ಕಾರ್ಡ ಅನ್ನು ಆ ಸಂಖ್ಯೆಯ ವಸ್ತುಗಳ ಪಕ್ಕದಲ್ಲಿ ಇಡಲು ಹೇಳುವುದು. ವಸ್ತುಗಳ ಸಂಖ್ಯೆ ಮತ್ತು ಕಾರ್ಡ್‌ನಲ್ಲಿ ತೋರಿಸಿದ ಸಂಖ್ಯೆಯ ಚಿಹ್ನೆ ಒಂದೇ ಆಗಿರಬೇಕು.
4. ವಸ್ತುಗಳು 1, 2, ಮತ್ತು 3 ಪರಿಮಾಣದಲ್ಲಿರುವಂತೆ ಕೂಡ ಆಯ್ಕೆ ಮಾಡಿಕೊಳ್ಳಬಹುದು. 4 ಹಾಗೂ 5 ಸಂಖ್ಯೆಯ ಮಿಂಚುಪಟ್ಟಿಗಳ ಜೊತೆಗೆ 1, 2, ಮತ್ತು 3 ಸಂಖ್ಯೆಯ ಮಿಂಚುಪಟ್ಟಿಗಳನ್ನೂ ಕೂಡ ಮಕ್ಕಳಿಗೆ ಕೊಡಬಹುದು.



Scanned with CamScanner

ಚಟುವಟಿಕೆ 3

## ವೈಯುಕ್ತಿಕವಾಗಿ ಮಾಡುವುದು

### ಕಲಿಕಾ ಸಾಮಗ್ರಿಗಳು

ಮಣಿಗಳು, ಬೀಜಗಳು, ಸೀಮೆಸುಣ್ಣದ ಚೂರುಗಳು, ಮಿಂಚುಪಟ್ಟಿ ಸರಣಿ CF9.1 (1 ರಿಂದ 5) – 1, 2, 3, 4 ಮತ್ತು 5 ಸಂಖ್ಯೆಗಳು.

### ಸೂಚನೆಗಳು

1. ಮಕ್ಕಳು ಮಣಿಗಳು/ಹುಣಿಸೇಬೀಜಗಳು/ಸೀಮೆಸುಣ್ಣದ ಚೂರುಗಳನ್ನು ತಮ್ಮ ಎದುರಿಗೆ ಇಟ್ಟುಕೊಂಡು ವೃತ್ತಾಕಾರದಲ್ಲಿ ಕೂರುವಂತೆ ಮಾಡುವುದು.
2. ಅವರಿಗೆ 1 –5 ಸಂಖ್ಯೆಯ ಮಿಂಚುಪಟ್ಟಿಗಳನ್ನು ತೋರಿಸಿ, "ನನಗೆ ______ (ಕಾರ್ಡ್‌ನಲ್ಲಿರುವ ಸಂಖ್ಯೆಯ ಚಿಹ್ನೆಯನ್ನು ತೋರಿಸಿ) ಮಣಿಗಳು/ಹುಣಿಸೇಬೀಜಗಳು/ಸೀಮೆಸುಣ್ಣದ ಚೂರುಗಳನ್ನು ಕೊಡು" ಎನ್ನುವುದು. ಮಗುವು ಅಷ್ಟು ಸಂಖ್ಯೆಯ ವಸ್ತುಗಳನ್ನು ಎತ್ತಿಕೊಂಡು, ಚಾಪೆಯ ಮೇಲೆ ತನ್ನ ಮುಂದೆ ಇಡುವುದು.
3. ಇದನ್ನು ಬೇರೆ ಕೆಲವು ವಸ್ತುಗಳಿಗೂ ಪುನರಾವರ್ತನೆ ಮಾಡಿ, ಮಕ್ಕಳು ಸಂಖ್ಯೆಗಳ ಹೆಸರಿನ ಚಿಹ್ನೆ ಮತ್ತು ಪರಿಮಾಣದ ನಡುವಿನ ಸಂಬಂಧವನ್ನು ಪೂರ್ಣ ಅರ್ಥಮಾಡಿಕೊಳ್ಳುವವರೆಗೂ ಮುಂದುವರೆಸುವುದು.

ಚಟುವಟಿಕೆ 4

## ಸಂಖ್ಯೆಯ ಹೆಸರು, ಚಿಹ್ನೆ ಮತ್ತು ಬೆರಳನ್ನು ಎತ್ತುವುದು ಇವೆಲ್ಲವುಗಳ ಮೂಲಕ ವಸ್ತುಗಳ ಜೊತೆಗೆ ಪರಸ್ಪರ ಸಂಬಂಧೀಕರಿಸುವುದು

### ಕಲಿಕಾ ಸಾಮಗ್ರಿಗಳು

ಒಂದೇ ಗಾತ್ರದ ಮಣಿಗಳು ಅಥವಾ ಕಲ್ಲುಚೂರುಗಳು, ಮಿಂಚುಪಟ್ಟಿ ಸರಣಿ CF9.1 (1 ರಿಂದ 5) – ಸಂಖ್ಯೆಗಳು 1, 2, 3, 4 ಮತ್ತು 5.

### ಸೂಚನೆಗಳು

1. ಮಕ್ಕಳು ಒಂದೇ ಗಾತ್ರದ ಮಣಿಗಳನ್ನು ಅವರ ಮುಂದೆ ಚಾಪೆಯ ಮೇಲೆ ಹರಡಿಟ್ಟುಕೊಂಡು ಕೂರುವಂತೆ ಮಾಡುವುದು.
2. ಈಗ ಸಂಖ್ಯೆಯ ಹೆಸರನ್ನು ಜೋರಾಗಿ ಹೇಳಿ, ಅಷ್ಟೇ ಸಂಖ್ಯೆಯ ಮಣಿಗಳನ್ನು ನಿಮಗೆ ಕೊಡಲು ಹೇಳುವುದು ಅಥವಾ ಕೈ ಬೆರಳುಗಳನ್ನು ಎತ್ತಲು ಹೇಳುವುದು ಅಥವಾ ಅವರ ಬಳಿ ಇರುವ ಸಂಖ್ಯೆಯ ಚಿಹ್ನೆಯ ಮಿಂಚುಪಟ್ಟಿಯನ್ನು ತೋರಿಸಲು ಹೇಳುವುದು.
3. ಇದು, ನೀವು 'ಒಂದು ನಿರ್ದಿಷ್ಟ ಸಂಖ್ಯೆ ಅಥವಾ ಇಷ್ಟು ಬೆರಳನ್ನು ಎತ್ತಿ ತೋರಿಸಿ ಅಥವಾ ಈ ಸಂಖ್ಯೆಯ ಮಿಂಚುಪಟ್ಟಿ ತೋರಿಸಿ' ಎಂದು ಹೇಳಿದಾಗ ಆ ಎಲ್ಲದರ ಪರಿಮಾಣ ಒಂದೇ ಎಂದು ಮಕ್ಕಳು ಅರ್ಥ ಮಾಡಿಕೊಳ್ಳುವುದನ್ನು ಖಾತ್ರಿಪಡಿಸುತ್ತದೆ.



Scanned with CamScanner

## ಅನುಕ್ರಮಣಿಕೆ/ಯಾವುದು ಹೆಚ್ಚು ಅಥವಾ ಕಡಿಮೆ ಎಂದು ಹೋಲಿಸುವುದು

### ಕಲಿಕಾ ಫಲಿತಗಳು

ಮಕ್ಕಳು ಸಂಖ್ಯೆಗಳನ್ನು ಅವುಗಳ ಪರಿಮಾಣಗಳ ಅರ್ಥದಲ್ಲಿ ಹೋಲಿಸಲು ಕಲಿಯುವುದು.

---

**ಚಟುವಟಿಕೆ 1**

### ಕಡಿಮೆಯಿಂದ ಹೆಚ್ಚು ಸಂಖ್ಯೆ – ಪರಿಮಾಣ

### ಕಲಿಕಾ ಸಾಮಗ್ರಿಗಳು

- ಮಿಂಚುಪಟ್ಟಿ ಸರಣಿ **CF9.1** (1 ರಿಂದ 5) – ಸಂಖ್ಯೆಗಳು 1, 2, 3, 4 ಮತ್ತು 5
- ಒಂದೇ ಗಾತ್ರದ ಮಣಿಗಳು
- ಬ್ಲಾಕ್‌ಗಳು, ಕಡ್ಡಿಗಳು, ಪುಸ್ತಕಗಳು ಇತ್ಯಾದಿ

### ಸೂಚನೆಗಳು

1. ಚಾಪೆಯ ಮೇಲೆ 1 ಮಣಿ, 2 ಮಣಿ, 3 ಮಣಿ, 4 ಮಣಿ ಮತ್ತು 5 ಮಣಿಗಳನ್ನು ಅನುಕ್ರಮವಲ್ಲದ ರೀತಿಯಲ್ಲಿ ನಡುವೆ ಸ್ವಲ್ಪ ಜಾಗ ಬಿಟ್ಟು ಜೋಡಿಸಿರಿ. (ಚಿತ್ರವನ್ನು ಸೇರಿಸಬೇಕು)
2. ಮಕ್ಕಳನ್ನು ಹತ್ತಿರ ಕರೆದು, ಜೋಡಣೆಯನ್ನು ಗಮನಿಸಲು ಹೇಳುವುದು. ಮಕ್ಕಳಿಗೆ ಅವರು 1, 2, ಮತ್ತು 3 ಸಂಖ್ಯೆಯ ಮಣಿಗಳೊಂದಿಗೆ ಮಾಡಿದ ಚಟುವಟಿಕೆಯನ್ನು ನೆನಪಿಸುವುದು. ಯಾವ ಜೋಡಿ ಹೆಚ್ಚು ಮತ್ತು ಯಾವುದು ಕಡಿಮೆ ಇರುವಂತೆ ಕಾಣುತ್ತದೆ? ಮಕ್ಕಳು ವಸ್ತುಗಳನ್ನು ಅವುಗಳ ಪರಿಮಾಣದ ಆಧಾರದ ಮೇಲೆ ಜೋಡಿಸಬಹುದು.
3. ಈಗ ಮಕ್ಕಳನ್ನು ಎಣಿಸಲು ಹೇಳುವುದು ಮತ್ತು ಆ ಪರಿಮಾಣದ ವಸ್ತುಗಳ ಪಕ್ಕದಲ್ಲಿ ಆಯಾ ಸಂಖ್ಯೆಯ ಮಿಂಚುಪಟ್ಟಿಯನ್ನು ಇಡಲು ಹೇಳುವುದು
4. ಇದೇ ಜೋಡಣೆಯನ್ನು ಬೇರೆ ವಸ್ತುಗಳ ಜೊತೆಗೂ ಮಾಡಬಹುದು ಎಂದು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ಕಡ್ಡಿಗಳು, ಪುಸ್ತಕಗಳು ಇತ್ಯಾದಿಗಳನ್ನು ಕೊಟ್ಟು, 1, 2, 3, 4 ಅಥವಾ 5 ವಸ್ತುಗಳನ್ನು ಕಡಿಮೆಯಿಂದ ಹೆಚ್ಚು ಸಂಖ್ಯೆಯ ಕ್ರಮದಲ್ಲಿ ಜೋಡಿಸಲು ಹೇಳುವುದು. ನಂತರ ಎಣಿಸಿ, ವಸ್ತುಗಳ ಪಕ್ಕದಲ್ಲಿ ಆ ಸಂಖ್ಯೆಯ ಮಿಂಚುಪಟ್ಟಿಯನ್ನು ಇಡಲು ಹೇಳುವುದು.
5. ನಂತರ ಇಬ್ಬಿಬ್ಬರಂತೆ ಮಕ್ಕಳನ್ನು ಜೋಡಿಯಾಗಿಸಿ, ಮಕ್ಕಳಿಗೆ ಕಡಿಮೆಯಿಂದ ಹೆಚ್ಚು ಮತ್ತು ಹೆಚ್ಚು ಸಂಖ್ಯೆಯಿಂದ ಕಡಿಮೆ ಕ್ರಮದಲ್ಲಿ ಸಂಖ್ಯೆಯ ಕಾರ್ಡ್‌ಗಳನ್ನು ಇಡಲು ಹೇಳುವುದು.



Scanned with CamScanner

## ಅನ್ವಯಿಸುವಿಕೆ

ಗಮನಿಸಿ: ಅನ್ವಯಿಸುವಿಕೆಯ ಅಭ್ಯಾಸಗಳು ಒಂದು ವಸ್ತುವಿನೊಂದಿಗೆ ಇನ್ನೊಂದು ವಸ್ತುವನ್ನು ಸಂಬಂಧೀಕರಿಸಿ, ಎಣಿಸುವ ಆಲೋಚನೆಯನ್ನು ಬೆಂಬಲಿಸುತ್ತವೆ. ಜೊತೆಗೆ ಕಡಿಮೆ ಹಾಗೂ ಹೆಚ್ಚು ಇರುವ ಸಂಖ್ಯೆಗಳನ್ನು ಹಾಗೂ ಸಮಗೊಳಿಸುವುದನ್ನು ತಿಳಿಯಲು ಸಹಾಯಕವಾಗುತ್ತದೆ. ಇದನ್ನು ತರಗತಿಯಲ್ಲಿ, ಆಟ ಮತ್ತು ಊಟದ ಸಮಯದಲ್ಲಿ ಅನೌಪಚಾರಿಕ ಚಟುವಟಿಕೆಗಳ ಮೂಲಕ ಮಾಡಿಸಬಹುದು. ಇಲ್ಲಿ ಕೆಲವು ಚಟುವಟಿಕೆಗಳನ್ನು ಕೊಡಲಾಗಿದೆ.

---

**ಚಟುವಟಿಕೆ 1**

### ಊಟದ ಸಮಯ

#### ಸೂಚನೆಗಳು

1. ಊಟದ ಸಮಯದಲ್ಲಿ ಮಕ್ಕಳನ್ನು ಮೂವರಂತೆ ಚಿಕ್ಕ ಚಿಕ್ಕ ವೃತ್ತಗಳಲ್ಲಿ ಕೂರಿಸುವುದು.
2. ಪ್ರತಿ ಗುಂಪಿಗೂ ಒಬ್ಬರು ನಾಯಕರನ್ನು ನೇಮಿಸುವುದು.
3. ಎಲ್ಲ ಮಕ್ಕಳಿಗೂ ಅವಕಾಶ ಸಿಗುವಂತೆ ಪ್ರತಿದಿನವೂ ನಾಯಕರನ್ನು ಬದಲಿಸುವುದು.
4. ಆ ದಿನದ ನಾಯಕರು ತಮ್ಮ ಗುಂಪಿಗೆ ಬೇಕಾಗುವಷ್ಟು ತಟ್ಟೆಗಳನ್ನು ಎಣಿಸಿಕೊಂಡು ತರಬೇಕು. ಅವರು ತಟ್ಟೆಗಳನ್ನು ಸಂಗ್ರಹಿಸಿದ ನಂತರ ಮಕ್ಕಳಿಗೆ 'ನಿಮಗೆ ಇನ್ನೂ ಹೆಚ್ಚು ಬೇಕೆ?' ಎಂಬಂತಹ ಪ್ರಶ್ನೆಗಳನ್ನು ಕೇಳುವುದು.

---

**ಚಟುವಟಿಕೆ 2**

### ಕಲೆ ಚಟುವಟಿಕೆ ಸಮಯ – ಸಂಖ್ಯೆಯ ಪುನರ್‌ಬಲನ

#### ಸೂಚನೆಗಳು

1. ಕಲೆ ಚಟುವಟಿಕೆಯ ಸಮಯದಲ್ಲಿ, ಮಕ್ಕಳು ಮೂರರಿಂದ ನಾಲ್ಕು ಗುಂಪುಗಳಲ್ಲಿ ಕೆಲಸ ಮಾಡುವಾಗ, ಒಂದು ಮಗುವನ್ನು ನಾಯಕನಾಗಿ ಮಾಡುವುದು. ಪ್ರತಿ ಮಗುವಿಗೂ ಸಾಲುವಷ್ಟು ಸಂಖ್ಯೆಯ ಹಾಳೆಗಳನ್ನು ಎಣಿಸಿಕೊಂಡು ತರುವಂತೆ ಆ ಮಗುವಿಗೆ ಹೇಳುವುದು.
2. ಇನ್ನೊಂದು ಮಗುವಿಗೆ ಕ್ರೇಯಾನ್‌ಗಳನ್ನು ಎಣಿಸಿ, ಪ್ರತಿ ಮಗುವಿಗೆ 1 ಕ್ರೇಯಾನ್ ನೀಡುವ ಜವಾಬ್ದಾರಿ ಕೊಡುವುದು.
3. ಮಕ್ಕಳಿಗೆ 1, 2, 3, 4 ಅಥವಾ 5 ಎಲೆಗಳನ್ನು ಎಣಿಸಿಕೊಂಡು ತರಲು ಹೇಳುವುದು. ಅವುಗಳನ್ನು ಎಣಿಸಿ, ಮಧ್ಯದಲ್ಲಿ ಗುಂಪಾಗಿ ಇಡಲು ಹೇಳುವುದು. ಕೇವಲ 5 ಅಥವಾ ಕಡಿಮೆ ಎಲೆಗಳನ್ನು ಮಾತ್ರ ತರಲು ಒತ್ತಿ ಹೇಳುವುದು.



Scanned with CamScanner

## ಚಟುವಟಿಕೆ 3

## ಹೋಲಿಕೆ ಮಾಡುವುದು ಮತ್ತು ಸಮಗೊಳಿಸುವುದು

**ಕಲಿಕಾ ಸಾಮಗ್ರಿಗಳು**: ಮಣಿಗಳು

### ಸೂಚನೆಗಳು

1. ಈ ಚಟುವಟಿಕೆಯನ್ನು ಒಂದು ಮಗು ಅಥವಾ ಇಬ್ಬರು ಮಕ್ಕಳೊಂದಿಗೆ ಮಾಡಿ ತೋರಿಸುವುದು.
2. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವುದು.
3. ಪ್ರತಿ ಮಗುವಿಗೆ 3, 4 ಅಥವಾ 5 ಮಣಿಗಳನ್ನು ಕೊಡುವುದು.
4. 2 ಮಕ್ಕಳಿಗೆ ಮಣಿಗಳ ಬಟ್ಟಲನ್ನು ಕೊಡುವುದು.
5. ಅವರು ಪ್ರತಿ ಮಗುವಿನ ಬಳಿ ಎಷ್ಟು ಮಣಿಗಳಿವೆ ಎಂದು ಎಣಿಸಿ ನೋಡಿ, ಪ್ರತೀ ಮಗುವೂ 5 ಮಣಿಗಳನ್ನು ಹೊಂದಿರುವಂತೆ ಮಣಿಗಳನ್ನು ಕೊಡುವುದು.
6. ಇದೇ ಪ್ರಕ್ರಿಯೆಯನ್ನು 3, 4 ಅಥವಾ 5 ಮಣಿಗಳ ಜೊತೆಗೆ ಮಾಡುವುದು.

---

## ಚಟುವಟಿಕೆ 4

## ಮುಕ್ತ ಆಟದ ಸಮಯ

**ಕಲಿಕಾ ಸಾಮಗ್ರಿಗಳು**: ಬ್ಲಾಕ್‌ಗಳು

### ಸೂಚನೆಗಳು

ಮುಕ್ತ ಆಟದ ಸಮಯದಲ್ಲಿ ಮಕ್ಕಳಿಗೆ 1, 2, 3, 4 ಮತ್ತು 5 ಬ್ಲಾಕ್‌ಗಳನ್ನು ಕೊಟ್ಟು, ಅವುಗಳನ್ನು ಬಳಸಿಕೊಂಡು ಗೋಪುರವನ್ನು ಮಾಡುವಂತೆ ಹೇಳುವುದು.

---

## ಚಟುವಟಿಕೆ 5

## ಫೈರ್ ಆನ್ ದಿ ಮೌಂಟೇನ್

### ಸೂಚನೆಗಳು

1. "ಫೈರ್ ಆನ್ ದಿ ಮೌಂಟೇನ್" ಆಟವನ್ನು ಆಡಿಸುವುದು.
2. ನೀವು ಫೈರ್ ಆನ್ ದಿ ಮೌಂಟೇನ್, ರನ್, ರನ್, ರನ್ ಎಂದು ಹೇಳಿ, ಸಂಖ್ಯೆಯೊಂದನ್ನು ಹೇಳುವುದು.
3. ನೀವು 1 ಎಂದು ಕರೆದರೆ, ಒಂದೊಂದೇ ಮಗು ನಿಲ್ಲಬೇಕು, ನೀವು 2 ಎಂದರೆ ಇಬ್ಬರು ಮಕ್ಕಳು ಜೊತೆಗೂಡಿ ನಿಲ್ಲಬೇಕು.
4. ನೀವು 3 ಎಂದರೆ ಮೂರು ಮಕ್ಕಳು ಗುಂಪಾಗಿ ನಿಲ್ಲಬೇಕು.
5. ಹೀಗೆಯೇ ಮುಂದುವರೆಸಿ, ಸಂಖ್ಯೆ 5 ರವರೆಗೂ ಹೇಳಬೇಕು.

ಗಮನಿಸಿ: ಈ ಚಟುವಟಿಕೆಯು ಒಂದು ಸಾಮಾನ್ಯ ಚಟುವಟಿಕೆಯಾಗಿದ್ದು, ಪಠ್ಯಕ್ರಮದ ಹಲವಾರು ಕಡೆ ಇದೆ.



Scanned with CamScanner




Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**
New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net

201183

Scanned with CamScanner